Mr. SPEAKER.—I will talk it over with the Leader of the Opposition.

Motion of Thanks to the Governor for his Address.

Debate (*contd.*)

2.–30 P.M.

ಶ್ರೀ ಜಿ. ವೆಂಕಟೇಗೌಡ.—ಮಾನ್ಯಸಭಾಪತಿಗಳೆ. ನಾನು ನಿನ್ನೆಯ ದಿನ ಮೂರನೇ ಪಂಚವಾರ್ಷಿಕ ಯೋಜನೆಯ 250 ಕೋಟಿ ರೂಪಾಯಿ ಔಟ್‌ಲೆ ಏನಿದೆಯೋ ಅದನ್ನು ಕೇಂದ್ರ ಸರ್ಕಾರದವರು ಇಷ್ಟು ಕಡಮೆಗೆ ಇಳಿಸಿ ನಮ್ಮ ಸರ್ಕಾರಕ್ಕೆ ಬಹಳ ಅನ್ಯಾಯ ಮಾಡಿದ್ದಾರೆಂದು ಪ್ರಸ್ತಾಪ ಮಾಡುತ್ತಾ ಇದ್ದೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರೂ ಕೂಡ ಸಾಕಷ್ಟು ಹೆಚ್ಚಾದ ಒಂದು ಔಟ್‌ಲೆಯನ್ನು ನಿಶ್ಚಿತವಮಾಡಿಕೊಳ್ಳಲು ಪ್ರಯತ್ನಮಾಡದೆ ಇರತಕ್ಕಂಥಾದ್ದು ಈ ರಾಜ್ಯದ ಒಂದು ದುರ್ದೈವವೆಂದು ನಾನು ಅಂದುಕೊಂಡಿದ್ದೇನೆ. ಈಗ ವಿಶೇಷ ಸಂಗತಿ ಒಂದು ಎಂದರೆ, ಎರಡನೆಯ ಪಂಚವಾರ್ಷಿಕ ಯೋಜನೆಯ ಅನೇಕ ಕಾರ್ಯಕ್ರಮಗಳು ಪೂರ್ಣವಾಗದೆ, ಅವುಗಳನ್ನು ಕಾರ್ಯಗತ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಮೂರನೆಯ ಯೋಜನೆಗೆ ಮುಂದಿಟ್ಟಿದ್ದಾರೆ. ಈ spill-over programmeನಿಂದ, ಈ 250 ಕೋಟಿ ರೂಪಾಯಿಯಲ್ಲಿ ಸುಮಾರು 16 ಕೋಟಿ ರೂಪಾಯಿಯನ್ನು ಕಡಿಮೆಮಾಡತಕ್ಕಂಥ ಒಂದು ಅಗತ್ಯ ಬಂದಿದೆ. ಮತ್ತು ಹೊಸದಾಗಿ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲಿಕ್ಕೆ ಮೂರನೆಯ ಯೋಜನೆಯಲ್ಲಿ ಸಾಕಾದಷ್ಟು ದುಡ್ಡು ಸಾಲದು ಎನ್ನುವುದನ್ನು ಸರ್ಕಾರದವರು ಯೋಚನೆಮಾಡಬೇಕೆಂದು ನಾನು ಈ ಸಂಧರ್ಭದಲ್ಲಿ ಸೂಚಿಸುತ್ತಿದ್ದೇನೆ. ನೀರಾವರಿ, ವಿದ್ಯುಚ್ಛಕ್ತಿ, ವ್ಯವಸಾಯ ಮತ್ತು ಸೋಷಿಯಲ್ ಸರ್ವಿಸಸ್, ಎಂದರೆ ಶಿಕ್ಷಣ ವೈದ್ಯಕೀಯ, ನಿಮ್ನವರ್ಗದವರು ಮತ್ತು ಹಿಂದುಳಿದವರ ಹಿತಸಾಧನೆಗಾಗಿ ಏನು ದುಡ್ಡನ್ನು ಮೀಸಲಾಗಿಟ್ಟಿದ್ದಾರೋ, ಆ ದುಡ್ಡಿನಿಂದ ಕಾರ್ಯ ಸಾಧ್ಯವಾಗುವುದಿಲ್ಲ. ಈ ಒಂದು ದೃಷ್ಟಿಯಿಂದ ಸಾಮಾನ್ಯ ಜನತೆಯ ಹಿತಸಾಧನೆ ಮಾಡುವುದಕ್ಕೆ ಮೂರನೆಯ ಯೋಜನೆಯಿಂದ ಸಾಧ್ಯವಾಗುವುದಿಲ್ಲವೆಂದು ನಾನು ಹೇಳುವುದಕ್ಕೆ ತಯಾರಿದ್ದೇನೆ. ಮೂರನೆಯ ಯೋಜನೆಯ ಕರಡಿನಲ್ಲಿದ್ದ ಅನೇಕ ಕಾರ್ಯಕ್ರಮಗಳನ್ನು ನೋಡಿ, ನಮ್ಮ ರಾಜ್ಯದ ಒಂದು ಭವಿಷ್ಯ ಸ್ವಲ್ಪಮಟ್ಟಿಗಾದರೂ ಆಶಾದಾಯಕವಾಗಿದೆ ಎಂದು ಕಾಣಿಸಿತ್ತು. ಇವತ್ತಿನ ದಿವಸ ಅದಕ್ಕೆ ವಿರೋಧವಾದ ಪರಿಸ್ಥಿತಿ ಏರ್ಪಟ್ಟಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಮೈಸೂರು ಸರ್ಕಾರ ನಮ್ಮ ನೆರೆಹೊರೆಯ ಕನ್ನಡ ಪ್ರದೇಶಗಳ ಜನರ ಆಶೋತ್ತರಗಳೇನಿವೆಯೋ ಅವುಗಳನ್ನು ಈಡೇರಿಸತಕ್ಕಂಥ ವಿಚಾರದಲ್ಲಿ ವಿಫಲವಾಗಿದೆ ಎಂದು ನಾನು ಈ ಸಂಧರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಏಕೆಂದರೆ, ಸುಮಾರು 4½ ವರ್ಷಗಳ ಕೆಳಗೆ ಕರ್ಣಾಟಕ ಪ್ರದೇಶಗಳು ಬಂದಾಗ, ಅಕ್ಕಪಕ್ಕ ರಾಜ್ಯಗಳಲ್ಲಿರತಕ್ಕಂಥ ಕನ್ನಡ ಪ್ರದೇಶಗಳ ಜನರು ತಾವು ಕೂಡ ನಮ್ಮ ರಾಜ್ಯದೊಂದಿಗೆ ಸಂಘಟಿತರಾಗಬೇಕೆಂದು ಚಳುವಳಿ ಮಾಡಿದರೂ, ಅದರಲ್ಲಿ ನಮ್ಮ ಸರ್ಕಾರ ಯಾವ ಒಂದು ಆಸಕ್ತಿಯನ್ನೂ ತೋರಿಸಿದ ಹಾಗೆ ಕಾಣಲಿಲ್ಲ. ಈ ವಿಚಾರದಲ್ಲಿಕ್ಕೆ ಸಂಬಂಧಪಟ್ಟ ಜೋನಲ್ ಕೌನ್ಸಿಲ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ. ಕೇಂದ್ರಸರ್ಕಾರದ ಜೊತೆಯಲ್ಲಿ ಯಾವ ಒಂದು ಪ್ರಸ್ತಾಪ ನಡೆಸಿಲ್ಲ. ಕಡೆಗೆ ಸಂಬಂಧಪಟ್ಟ ರಾಜ್ಯಸರ್ಕಾರಗಳೊಡನೆ ಈ ವಿಚಾರವನ್ನು ನಮ್ಮ ಸರ್ಕಾರ ಯಾವ ಒಂದು ಪ್ರಮಾಣದಲ್ಲಿ ಕೂಡ ಪ್ರಸ್ತಾಪ ಕೂಡ ಮಾಡದೆ ಇರತಕ್ಕಂಥಾದ್ದು ನಿಜವಾಗಿಯೂ ವಿಶಾಧಕರ. 3–4 ಆ ವರ್ಷಗಳಿಂದ ಶಾಸನಸಭೆಗಳೊಳಗೂ ಪ್ರಸ್ತಾಪ ಮಾಡುತ್ತಲೇ ಇದ್ದೇವೆ. ಹೊರರಾಜ್ಯದಲ್ಲಿರುವ ಕನ್ನಡ ದೇಶದ ಜನ ತಮ್ಮ ಆಶೋತ್ತರಗಳನ್ನು ಈಡೇರಿಸಲು ಬೇಕಾದಷ್ಟು ಚಳುವಳಿ ಮಾಡಿದ್ದಾರೆ. ಹೀಗಿದ್ದಾಗ್ಯೂ ನಮ್ಮ ಸರ್ಕಾರ ಆ ಪ್ರದೇಶಗಳ ವಿಲನೀಕರಣಕ್ಕೆ ಗಮನಕೊಡದೆ ಇರುವುದು ನಿಜವಾಗಿಯೂ

ಶೋಚನೀಯ. ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ನಿಜಲಿಂಗಪ್ಪನವರು ಕೂಡ ಅವರ ಸರ್ಕಾರವಿದ್ದಾಗ ಏನೂ ಮಾಡಲಿಲ್ಲ, ಜತ್ತಿ ಸರ್ಕಾರ ಕೂಡ ಹೊರಗಡೆ ಇರತಕ್ಕಂಥ ಕನ್ನಡ ಪ್ರದೇಶಗಳನ್ನು ನಮ್ಮ ರಾಜ್ಯದಲ್ಲಿ ಸೇರಿಸಿ, ಆ ಕನ್ನಡಿಗರು ಏನು ಆಶೋತ್ತರಗಳನ್ನು ಇಟ್ಟುಕೊಂಡಿದ್ದರೋ ಅದನ್ನು ನೆರವೇರಿಸಲು ಪ್ರಯತ್ನಿಸದಿರುವುದು, ಕನ್ನಡಿಗರ ದುರ್ದೈವ. ಕನ್ನಡ ಪ್ರದೇಶಗಳಾದ ಕೊಳವಾಡಿ, ಹೊಸೂರು ಪ್ರದೇಶಗಳ ಬಗ್ಗೆ ಮದ್ರಾಸ್ ಸರ್ಕಾರ ದೊಂದಿಗೆ ಮೈಸೂರು ಸರ್ಕಾರ ಯಾವ ವಿಚಾರದಲ್ಲಿಯೂ ಪತ್ರವ್ಯವಹಾರ ನಡೆಸಿಲ್ಲವೆಂದು ಮದ್ರಾಸ್ ಶಾಸನಸಭೆಯಲ್ಲಿ ಮದ್ರಾಸ್ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಇಂತಿಷ್ಟು ಹೇಳಿದಮೇಲೆ ಈ ಸರ್ಕಾರ ಹೊರಗಿರತಕ್ಕಂಥ ಕನ್ನಡಿಗರಲ್ಲಿ ಮತ್ತು ಕನ್ನಡ ಪ್ರದೇಶಗಳಲ್ಲಿ ಯಾವ ಆಸಕ್ತಿಯನ್ನು ತೋರಿಸಿಲ್ಲವೆಂದು ಯಾವ ಅಭ್ಯಂತರವೂ ಇಲ್ಲದೆ ತಿಳಿಸಬಹುದು. ಮೈಸೂರು ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿ ವಿವಾದದಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿದೆ ಮತ್ತು ಅದರ ತೀರ್ಮಾನವನ್ನು ನಿರೀಕ್ಷಿಸೋಣವೆಂದು ರಾಜ್ಯಪಾಲರು ಅವರ ಭಾಷಣ ದಲ್ಲಿ ಹೇಳಿದ್ದಾರೆ. ಹೊರಗಿನ ಕನ್ನಡ ಪ್ರದೇಶಗಳ ಬಗ್ಗೆ ನಮ್ಮ ಸರ್ಕಾರದ ಧೋರಣೆ ಏಕೆಂಬುದು ಇದರಲ್ಲಿ ಕಾಣುತ್ತಾ ಇಲ್ಲ. ಇದು ನಿಜವಾಗಿಯೂ ವ್ಯಸನಕರ.

ಇನ್ನು ನಮ್ಮ ಸರ್ಕಾರದ ಕೈಗಾರಿಕೆ ನೀತಿಯ ವಿಷಯ ಯಾವ ಒಂದು ಹೇಳಿಕೊಳ್ಳುವಂಥ ಕೈಗಾರಿಕೆಯನ್ನು ನಮ್ಮರಾಜ್ಯದಲ್ಲಿ ಎರಡನೆಯ ಯೋಜನೆಯಲ್ಲಿ ಅಸ್ತಿತ್ವಕ್ಕೆ ತರಲಿಲ್ಲ. ಮೂರನೆಯ ಯೋಜನೆಯಲ್ಲಿ ಕೂಡ ಅಂಥ ಒಂದು ಪ್ರಮಾಣದಲ್ಲಿ ಕೈಗಾರಿಕಾ ವಿಸ್ತರಣೆ ಮಾಡುವ ಸಾಧ್ಯತೆಯ ವಿಚಾರ ಮಾಡಿಲ್ಲ. ಮೂರನೆಯ ಯೋಜನೆಯಲ್ಲಿ ನಮ್ಮ ಕೈಗಾರಿಕಾ ನೀತಿ ನಿಜವಾಗಿಯೂ ಆಶಾದಾಯಕವಾಗಿಲ್ಲ. ಒಂದು ಕೈಗಾರಿಕೆ ಕಾರ್ಪೋರೇಷನ್ ಮಾಡ ಬೇಕೆಂಬ ಅಭಿಪ್ರಾಯವೇನಿತ್ತೋ ಅದು ಇವತ್ತಿಗೂ ಹಾಗೆಯೇ ಇದೆ. ಫರ್ಟಿಲೈಸರ್ ಫ್ಯಾಕ್ಟರಿ ನಿರ್ಮಾಣಮಾಡಬೇಕೆಂಬ ವಿಚಾರ ಏನಾಯಿತೋ ನಮಗೆ ಗೊತ್ತಿಲ್ಲ, ಅಲ್ಯುಮಿನಿಯಮ್ ಫ್ಯಾಕ್ಟರಿ ಗತಿ ಏನಾಯಿತೋ ಅದೂ ಗೊತ್ತಿಲ್ಲ. ಕೈಗಾರಿಕೆ ಕ್ಷೇತ್ರದಲ್ಲಿ ಸರ್ಕಾರ ತನ್ನ ನೀತಿಯನ್ನು ಪುನರ್ವಿಮರ್ಶೆ ಮಾಡಲಿಕ್ಕೆ ಸಾಧ್ಯವೆಂಬ ವಿಚಾರವನ್ನು ಪ್ರಸ್ತಾಪಮಾಡಿಲ್ಲ ವಾದ್ದರಿಂದ, ಪರಿಸ್ಥಿತಿ ನಿರಾಶಾದಾಯಕವಾಗಿದೆಯೆನ್ನಬಹುದು.

ಸಣ್ಣಪ್ರಮಾಣದ ಕೈಗಾರಿಕೆಗಳು, ಗ್ರಾಮಾಂತರ ಪ್ರದೇಶದ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಮುಂತಾದ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಾ ಇದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟೋ ಮಧ್ಯಮವರ್ಗದ ಜನರಿಗೆ ಮತ್ತು ಕೆಳದರ್ಜೆ ಸಾಹುಕಾರರಿಗೆ ಈ ಸಣ್ಣ ಕೈಗಾರಿಕೆಗಳಿಗಾಗಿ ಏನು ನೆರವನ್ನೂ ಪಡೆಯಲಿಕ್ಕೆ ಸಾಧ್ಯವಾಗಿಲ್ಲ. ಗ್ರಾಮಾಂತರ ಪ್ರದೇಶ ಗಳಲ್ಲಿ ಸಣ್ಣಪ್ರಮಾಣದ ಕೈಗಾರಿಕೆಯಲ್ಲಿ ನಿರತರಾಗಿರತಕ್ಕ ಜನಗಳಿಗೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆ ಎಂಬುದು ಗೊತ್ತಾಗುತ್ತಾ ಇಲ್ಲ. ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡು ತ್ತಿದ್ದೇವೆಂದು ಸುಮ್ಮನೆ ಹೇಳಿದರೆ ಏನು ಪ್ರಯೋಜನ? ಸಾಮಾನ್ಯ ಜನತೆಗೆ ವಸ್ತುಸ್ಥಿತಿಯನ್ನು ನೋಡಿ ಅತ್ಯವಶ್ಯವಾಗಿ ಎಷ್ಟು ಪ್ರಮಾಣದಲ್ಲಿ ನೆರವು ನೀಡಬೇಕಾಗಿತ್ತೋ, ಅಷ್ಟನ್ನು ನೀಡಿಲ್ಲ. ಮದ್ರಾಸಿನ ಹಣಕಾಸಿನ ಸಚಿವರು ಅವರ ಬಜೆಟ್ ಭಾಷಣದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಇರುವ ಖನಿಜಸಂಪತ್ತನ್ನು ಸರ್ವೆ ನಡೆಸುವುದಕ್ಕೆ ನಿಶ್ಚಯ ಮಾಡಿದ್ದೇವೆ ಎಂದು ಹೇಳಿದ್ದಾರೆ. ಯಾವಯಾವ ಜಿಲ್ಲೆಯಲ್ಲಿ ಏನೇನು ಸಣ್ಣಪ್ರಮಾಣದ ಕೈಗಾರಿಕೆಗಳನ್ನು ಮಾಡಲಿಕ್ಕೆ ಸಾಧ್ಯ ಎಂಬುದನ್ನು ಗುರ್ತಿಸಿ. ಅವುಗಳನ್ನು ಅಸ್ತಿತ್ವಕ್ಕೆ ತರಲು ಅವರು ಸಿದ್ಧವಾಗಿದ್ದಾರೆ. ನಮ್ಮ ಸರ್ಕಾರದವರು ಇದೊಂದು ವಿಚಾರದಲ್ಲಿ ಏನು ಮಾಡಿದ್ದಾರೆ, ಏನು ಪ್ರಯತ್ನ ನಡೆಸಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನಮ್ಮ ಮಾನ್ಯ ಸದಸ್ಯರು ಅನೇಕ ಸಲ ಬಳ್ಳಾರಿ ಮತ್ತಿತರ ಕಡೆಗಳಲ್ಲಿ ಖನಿಜಸಂಪತ್ತಿದೆ.ಎಂದು ಹೇಳಿದ್ದಾರೆ. ಆದರೆ ಸರ್ಕಾರದವರು ಆ ಕಡೆಗಳಲ್ಲಿ ಸರ್ವೆ ನಡೆಸಿ ಸಾಮಾನ್ಯ ಜನರು ಆ ಸಂಪತ್ತನ್ನು ರೂಢಿಸಿಕೊಂಡು

(ಶ್ರೀ ಜಿ. ವೆಂಕಟೇಗೌಡ)

ಆ ಉದ್ದಿಮೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವೇ ಎಂಬುದನ್ನು ಹೇಳಿಲ್ಲ. ಈ ಒಂದು ವಿಚಾರದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಆಸಕ್ತಿಯನು ವಹಿಸಿದೆಯೆಂದು ಹೇಳುವುದಾದರೆ, ಸಣ್ಣ ಪ್ರಮಾಣ ಕೈಗಾರಿಕೆಗಳ ವಿಷಯದಲ್ಲಿ ಸರ್ಕಾರದ ಒಂದು ನೀತಿ ವಿಫಲಗೊಂಡಿದೆಯೆಂದು ನಾನು ಹೇಳಬೇಕಾಗಿದೆ.

ಆಹಾರಪದಾರ್ಥಗಳ ಬೆಲೆಯನ್ನು ಆದಷ್ಟುಮಟ್ಟಿಗೆ ಒಂದು ಸ್ಥಿಮಿತನೆಲೆಗೆ ತರಲು ಸರ್ಕಾರದವರು ಪ್ರಯತ್ನಿಸಿದ್ದಾರೆಂದು ರಾಜ್ಯಪಾಲರ ಭಾಷಣದಲ್ಲಿ ಕಾಣಿಸಿದೆ. ಈ ಬಗ್ಗೆ ಸುಮಾರು 13 ಸಾವಿರ ಟನ್ನಿನಷ್ಟು ಅಕ್ಕಿಯನ್ನು ಮಧ್ಯಪ್ರದೇಶದಿಂದ ತರಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ಮಧ್ಯಪ್ರದೇಶದಿಂದ ತರಿಸಿಕೊಂಡ 13,000 ಟನ್ ಅಕ್ಕಿಯಲ್ಲಿ, ಎಷ್ಟೊಂದು ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಖರ್ಚಾಗಿದೆ ಎಂಬ ವಿಚಾರದಲ್ಲಿ ಸರ್ಕಾರ ಉತ್ತರವನ್ನು ಕೊಡಬೇಕು. ಆ ಅಕ್ಕಿಯನ್ನು ಸಾಮಾನ್ಯ ಜನತೆಗೆ ಕೂಡ ತೆಗೆದುಕೊಂಡು ಹೋಗಲು ಆಸಕ್ತಿ ಇಲ್ಲ. ಅಂಥ ಒಂದು ಉತ್ತಮವಲ್ಲದೆ–ಇರತಕ್ಕಂಥ ಅಕ್ಕಿಯನ್ನು ಯಾರೂ ಉಪಯೋಗಿಸಲು ಬರುವುದಿಲ್ಲ. ಆದ್ದರಿಂದ ಆ ಅಕ್ಕಿ ಹೆಚ್ಚು ಪ್ರಮಾಣದಲ್ಲಿ ಹಾಗೇನೇ ಖರ್ಚಾಗದೆ ನಿಂತುಹೋಗಿದೆ. ಸರ್ಕಾರಗವರು ಆಹಾರ ಅಭಾವವನ್ನು ಹೋಗಲಾಡಿಸುವ ಉದ್ದೇಶದಿಂದ ಜನಗಳಿಗೆ ಉಪಯೋಗವಾಗದಂಥ ಆಹಾರಪದಾರ್ಥಗಳನ್ನು ಒದಗಿಸಿದರೆ ಏನು ಪ್ರಯೋಜನವಾಗುತ್ತದೆ ?

ಇನ್ನು ಅರಣ್ಯಸಂಪತ್ತನ್ನು ಹೆಚ್ಚುಮಾಡುವುದಕ್ಕೆ ಏನು ಪ್ರಯತ್ನ ನಡೆದಿದೆ ? ಸುಮಾರು 6 ಕೋಟಿ ರೂಪಾಯಿ ವರಮಾನ ಈ ಬಾಬಿನಿಂದ ಬರುತ್ತಿದೆ. ಅದನ್ನು ಇನ್ನೂ ಮೂರು ನಾಲ್ಕು ಕೋಟಿ ರೂಪಾಯಿನಿಂದ ಹೆಚ್ಚಿಸಲಿಕ್ಕೆ ಸಾಧ್ಯವಿದೆ. ಸರ್ಕಾರ ಈ ಅರಣ್ಯಸಂಪತ್ತನ್ನು ಬೆಳೆಸುವ ಕಾರ್ಯದಲ್ಲಿ ವಿಫಲಗೊಂಡಿದೆ. ಬೇಲಿಯೇ ಎದ್ದು ಹೊಲ ಮೇಯಿದರೆ, ಸಂಪತ್ತು ಅಭಿವೃದ್ಧಿಯಾಗುವುದು ಹೇಗೆ ? ನಮ್ಮ ಪ್ರದೇಶವಾದ ಕೊಳ್ಳೇಗಾಲದಿಂದ, ಹಿಂದೆ ಮದ್ರಾಸ್ ಸರ್ಕಾರದಲ್ಲಿದ್ದಾಗ ಬರುತ್ತಿದ್ದ ಆದಾಯ, ಈಗ ಬರುತ್ತಿಲ್ಲ. ಅರಣ್ಯಗಳು ಹಾಳಾಗುತ್ತಿವೆ. ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಸರ್ಕಾರದವರು ಈ ಅರಣ್ಯಸಂಪತ್ತನ್ನು ರಕ್ಷಣೆ ಮಾಡುವುದಕ್ಕೆ ಎಷ್ಟರಮಟ್ಟಿನ ವ್ಯವಸ್ಥೆಮಾಡಿದಾರೆ, ಮತ್ತು ಆಸಕ್ತಿ ವಹಿಸಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ............

[MR. DEPUTY SPEAKER in the Chair]

ಭೂಗಂದಾಯದ ವಿಮರ್ಶೆ ಆಗಬೇಕು. ರಿಸರ್ವೆ ಮತ್ತು ಸೆಟಲ್‌ಮೆಂಟ್ ಕಾರ್ಯ ಮಾಡುತ್ತಿದ್ದೇವೆ, ಇದು ಆಗದೆ, ಅದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಈ ಕಂದಾಯವನ್ನು ಪುನರ್ವಿಮರ್ಶೆ ಮಾಡಿ, ಒಂದೇ ಸಮಕ್ಕೆ ತರದಿದ್ದರೆ ಕಂದಾಯದ ಆದಾಯವನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲ. ಮದ್ರಾಸ್ ಪ್ರಾಂತದಲ್ಲಿಯೂ ಹೆಚ್ಚುಕಡಿಮೆ ಕಂದಾಯದ ಪದ್ಧತಿ ಇದ್ದುದರಿಂದ, ತಾರತಮ್ಯ ಮಾಡುವುದು ಸರಿಯಲ್ಲವೆಂದು, ಒಂದು ರೂಪಾಯಿಗೆ ಎರಡಾಣೆ ಸರ್‌ಛಾರ್ಜ್ ಹಾಕಲಾಯಿತು. ಈ ತಾರತಮ್ಯವನ್ನು ಕೊನೆಗಾಣಿಸುವುದರಿಂದ ಸುಮಾರು ಎರಡು ಕೋಟಿ ರೂಪಾಯಿ ಆದಾಯ ಜಾಸ್ತಿ ಬರುತ್ತದೆ. ನಮ್ಮ ಮಾನ್ಯ ಹಣಕಾಸಿನ ಸಚಿವರೂ ಭೂಗಂದಾಯವನ್ನು ಪುನರ್ವಿಮರ್ಶೆ ಮಾಡುವ ವ್ಯವಸ್ಥೆಯನ್ನು ಮಾಡಲಿಕ್ಕೇಬೇಕು.

ಸ್ವಾಮಿ, ಇನ್ನು ಹರಿಜನರು-ಗಿರಿಜನರುಗಳಿಗೆ ಸಂಬಂಧಪಟ್ಟ ಹಾಗೆ ಕಾನೂನು ಪ್ರಕಾರ ಅವರಿಗೇನು ರಕ್ಷಣೆ ಕೊಡಬಹುದೋ ಅಷ್ಟನ್ನು ಮಾತ್ರವೇ ಕೊಟ್ಟರೆ ಸಾಲದು. ಈ ಹರಿಜನ–ಗಿರಿಜನರ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಅಷ್ಟಿಷ್ಟು ಅನುಕೂಲಗಳನ್ನು ಕಲ್ಪಿಸ

ಲಾಗಿದೆ. ಆದರೆ ಅವರಿಗೆ ಯಾವ ಮಟ್ಟದಲ್ಲಿ ಈ ರಕ್ಷಣೆಗಳು ಒದಗಬೇಕಾಗಿತ್ತೋ ಆ ಮಟ್ಟದಲ್ಲಿ ಒದಗಿಲ್ಲವೆಂದು ಹೇಳದೆ ವಿಧಿಯಿಲ್ಲ. ಇದು ದೇಶದ ಹಿತದೃಷ್ಟಿಯಿಂದಲೂ ಮತ್ತು ಆ ಪಂಗಡಗಳ ಜನರ ಹಿತದೃಷ್ಟಿಯಿಂದಲೂ ಒಳ್ಳೆಯದಲ್ಲ. ನೆನ್ನೆ ತಾನೇ ಇದೇ ಸಭೆಯಲ್ಲಿ ಮಾತನಾಡುತ್ತ ಶ್ರೀ ಶ್ಯಾಮಸುಂದರ್ ಅವರು ಹೇಳಿದಂತೆ ಈ ಮೈಸೂರು ರಾಜ್ಯದಲ್ಲಿ ಜಾತಿ ಪೆಡಂಭೂತ ಎಷ್ಟರಮಟ್ಟಿಗೆ ಬೆಳೆದುಕೊಂಡುಬಂದಿದೆ ಎಂಬುದನ್ನು ಆಲೋಚನೆ ಮಾಡಿದರೆ ನಮ್ಮ ರಾಷ್ಟ್ರವು ಮುಂದೆ ಒಂದು ಆಶಾದಾಯಕ ರೀತಿಯಲ್ಲಿ ಬೆಳೆದುಬರಲು ಈ ರೀತಿ–ನೀತಿಗಳಿಂದ ಅದು ಸಾಧ್ಯವಾಗುತ್ತೆಂಬ ಭರವಸೆ ನನಗಂತೂ ಖಂಡಿತ ಕಾಣುತ್ತಿಲ್ಲ. ಯಾವ ಒಂದು ವಿಚಾರವನ್ನೇ ತೆಗೆದುಕೊಳ್ಳಲಿ ಆಡಳಿತವನ್ನೇ ತೆಗೆದುಕೊಳ್ಳಲಿ, ಆ ಬಗ್ಗೆ ನಮ್ಮ ರೀತಿ-ನೀತಿಗಳು–ನಡವಳಿಕೆಗಳು, ಸರಿಯಾಗಿರುವುದಿಲ್ಲ. ಪ್ರತಿಯೊಂದು ವಿಚಾರವೂ ಕೋಮುವಾರು ಭಾವನೆಯ ಮೇಲೆ ನಡೆಯುತ್ತಿವೆ. ಇದು ರಾಷ್ಟ್ರಾಭಿವೃದ್ಧಿಗೆ ಬಹಳ ಅಪಾಯ.

ಇನ್ನು ನಮ್ಮ ಆಡಳಿತದಲ್ಲಿ ಮಿತವ್ಯಯ, ದಕ್ಷತೆಗಳನ್ನು ಹೆಚ್ಚಿಸಲು ಶ್ರೀ ಗೋರ್ವಾಲ ಇತ್ಯಾದಿ ಅನೇಕ ಸಮಿತಿಗಳನ್ನು ಮಾಡಿದ್ದಾಯಿತು. ಆದರೆ ನಮ್ಮ ಸರ್ಕಾರ ಗೋರ್ವಾಲ ಸಮಿತಿ ಶಿಫಾರ್ಸುಗಳಲ್ಲಿ ಅನೇಕವನ್ನು ಒಪ್ಪಿಕೊಂಡು ಆಚರಣೆಗೆ ತಂದಿದ್ದಾರೆ. ಆದರೆ ಅವು ಕಾರ್ಯತಃ ಎಷ್ಟರಮಟ್ಟಿಗೆ ಅನುಕೂಲ ಅಥವಾ ಪ್ರತಿಕೂಲವೆಂಬ ಬಗ್ಗೆ ನಮಗೇನೂ ಗೊತ್ತಿಲ್ಲ. ಈಗ ಮತ್ತೆ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಏಕಾನಮಿ ಸಮಿತಿಯನ್ನು ರಚಿಸಿದ್ದಾರೆ. ಆದರೆ ಹೀಗೆ ಒಂದು ಕಡೆ ಸಮಿತಿಗಳನ್ನು ನೇಮಕ ಮಾಡುತ್ತ ಮತ್ತೊಂದು ಕಡೆ ಸರ್ಕಾರದವರು ವಿನಾಕಾರಣ ಮಂತ್ರಿಮಂಡಳವನ್ನು ವಿಸ್ತಾರ ಮಾಡುತ್ತಿದ್ದಾರೆ. ಇದು ದೇಶದ ಮಿತವ್ಯಯಕ್ಕೆ ತುಂಬಾ ಧಕ್ಕೆ ತರುವುದಾಗಿದೆ.

ಇನ್ನು ಎಲ್ಲ ಪ್ರದೇಶಗಳಿಗೂ ಒಂದು ಸಮನ್ವಯವಾದ ಕಾನೂನನ್ನು ತರಬೇಕಾದ್ದು ಬಹಳ ಅತ್ಯಗತ್ಯವಾದ ಕೆಲಸ. ಈ ವಿಚಾರದಲ್ಲಿ ನಮ್ಮ ಸರ್ಕಾರ ತಾಳಿರುವ ಮಂದಗಾಮಿ ಧೋರಣೆಯಿಂದ ಜನರ ಅನೇಕ ಆಶೋತ್ತರಗಳಿಗೆ ಇದು ತುಂಬ ಧಕ್ಕೆಯನ್ನುಂಟುಮಾಡಿದೆ. ಜನರ ನೀತಿ–ನೇಮಗಳನ್ನು ನಿರ್ಣಯಿಸತಕ್ಕ ಯೂನಿಫಾರಂ ಲಾವನ್ನು ದೇಶದಲ್ಲಿ ಅದ್ಯಷ್ಟು ಬೇಗ ಜಾರಿಗೆ ತರಬೇಕೆಂದು ನಾವು ಪದೇಪದೇ ಸರ್ಕಾರದಲ್ಲಿ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಈಗಲಾದರೂ ಸರ್ಕಾರದವರು ಇತ್ತ ಕಡೆಗೆ ತಮ್ಮ ಗಮನವನ್ನು ಬೇಗ ಹರಿಸಬೇಕಾದ್ದು ಅತ್ಯವಶ್ಯಕ. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ಸರ್ಕಾರ ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ. ಆದುದರಿಂದ ಈಗ ಸಭೆಯ ಮುಂದೆ ಶ್ರೀ ಎ. ವಿ. ನರಸಿಂಹರೆಡ್ಡಿಯವರು ಮಂಡಿಸಿರತಕ್ಕ ಅಭಿನಂದನಾ ನಿರ್ಣಯವು ಮನ್ನಣೆಗೆ ಅಷ್ಟು ಅರ್ಹವಾದುದಾಗಿಲ್ಲವಾದ್ದರಿಂದ ಇದಕ್ಕೆ ಮನ್ನಣೆಕೊಡಲು ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯೇ ಮುಂದುವರಿದರೆ ದೇಶಕ್ಕೆ ಇದರಿಂದ ತುಂಬಾ ಕಷ್ಟವಾಗುತ್ತದೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಸ್ವಾಮಿ, ಈಗ ತಾನೇ ನನ್ನ ಅನೇಕ ಮಾನ್ಯ ಮಿತ್ರರು ರಾಜ್ಯಪಾಲರ ಭಾಷಣದ ಮೇಲೆ ಅವರವರ ಅಭಿಪ್ರಾಯಗಳನ್ನು ನಾನಾ ರೀತಿಯಲ್ಲಿ ವ್ಯಕ್ತಪಡಿಸಿರುತ್ತಾರೆ. ನನಗೆ ತಿಳಿದಿರುವ ಹಾಗೂ ಸಹ ಸಾಮಾನ್ಯವಾಗಿ ರಾಜ್ಯಪಾಲರ ಭಾಷಣವು ದೇಶದ ಜನತೆಯ ಆಶೋತ್ತರಗಳನ್ನು ಮುಂದೆ ಯಾವ ರೀತಿ ತನ್ನ ಸರ್ಕಾರ ಇಡಬಯಸುತ್ತಿದೆಯೆಂಬುದನ್ನು ತಿಳಿಸುವಾಗ ಅದರ ಬಗ್ಗೆ ಒಂದು ರೀತಿ-ನೀತಿಯನ್ನು ಹಾಕಿಕೊಂಡು ಅದರ ಪ್ರಕಾರ ಈ ಭಾಷಣವು ತಕ್ಕ ಅಂಕಿಅಂಶಗಳಿಂದ ತುಂಬಿರಬೇಕಾದುದು ವಾಸ್ತವವಾದುದಾಗಿದೆ. ಆದರೆ ಈಗ ನಮ್ಮ ಮುಂದಿರತಕ್ಕ ರಾಜ್ಯಪಾಲರ ಭಾಷಣವನ್ನು ನಾವು ಯಾವುದಾದರೊಂದು ಅಂಕಿ-ಅಂಶದ ಆಧಾರದ ಮೇಲೆ ತೀವ್ರವಾಗಿ ಪರಿಶೀಲನೆ ಮಾಡಿ ನೋಡಿದ್ದೇ ಆದರೆ ಈ ಭಾಷಣವೊಂದು ಕೇವಲ ಒಂದು ಇಲಾಖೆಯ ವಾರ್ಷಿಕ ವರದಿಯನ್ನು

(ಶ್ರೀ ವೈ. ವೀರಪ್ಪ)

ಒಪ್ಪಿಸುವ ರೀತಿಯಲ್ಲಿಯೋ ಅಥವಾ ಒಂದು ಸಹಕಾರ ಸಂಘದ ವಾರ್ಷಿಕ ಸಮಾರಂಭದಲ್ಲಿ ಒಪ್ಪಿಸತಕ್ಕ ವರದಿಯೇನಿರುತ್ತೆ ಆ ರೀತಿ ಇದೆ, ಈ ರಾಜ್ಯಪಾಲರ ಭಾಷಣ. ಆದರೆ ಇದರಲ್ಲಿ ಏನೊಂದು ಅಂಶ ಎದ್ದು ಕಾಣುತ್ತಿದೆಯೆಂದರೆ, ಆಡಳಿತ ನಡೆಸುತ್ತಿರುವ ಸರ್ಕಾರವು ಒಂದು ವರದಿಯನ್ನು ತಯಾರಿಸಿ ಅದನ್ನು ರಾಜ್ಯಪಾಲರಿಗೆ ಒಪ್ಪಿಸಿ, ಅದನ್ನು ಅವರಿಂದ ಈ ಸಭೆಯಲ್ಲಿ ನಡೆಸುವಂತೆ ಮಾಡಿದ್ದಾರೆಂಬುದು ಸರ್ವರಿಗೂ ವೇದ್ಯವಾಗುತ್ತಿದೆ. ಆದುದರಿಂದ ಈ ಭಾಷಣವು ನಿಜವಾಗಿಯೂ ಅಷ್ಟೇನೂ ಆಶಾದಾಯಕವಾಗಿಲ್ಲನೆಂದು ನಾವು ನಿರ್ದಿಷ್ಟವಾಗಿ ಹೇಳಬಹುದು. ಆದರೆ ಈಗಾಗಲೇ ಅನೇಕ ನನ್ನ ಮಿತ್ರರು ಈ ಮಂತ್ರಿಮಂಡಳದ ಬಡಾವಣೆ ಬಗ್ಗೆ ಅನೇಕ ರೀತಿಯಲ್ಲಿ ಉಲ್ಲೇಖಿಸಿರುತ್ತಾರೆ. ಈ ದಿವಸ ನಾವು ನಮ್ಮ ರಾಜ್ಯಾಡಳಿತವನ್ನು ರಾಜ್ಯಾಂಗದ ನಿಯಮಗಳ ಪ್ರಕಾರ ನಡೆಸಿಕೊಂಡು ಹೋಗುತ್ತಿದ್ದೇವೆ. ಹೀಗೆ ಒಂದು ರಾಜ್ಯಾಂಗದ ವಿಧಿಗನುಗುಣವಾಗಿ ಒಂದು ದೇಶದ ಆಡಳಿತ ನಡೆದುಕೊಂಡು ಹೋಗುತ್ತಿರುವಾಗ ಅದರಲ್ಲಿ ಆಗತಕ್ಕ ಪ್ರತಿಯೊಂದು ಅದಲು-ಬದಲಿಗೂ ಒಂದು ಪ್ರಾಮುಖ್ಯವಾದ ಕಾರಣವಿರಲೇಬೇಕು. ಯಾವ ಒಂದು ಬದಲಾವಣೆಯೂ ಕಾರಣಹಿತವಾಗಿ ಇರಕೂಡದು. ನಮ್ಮ ರಾಜ್ಯಾಂಗದ 164ನೇ ಆರ್ಟಿಕಲ್ ಪ್ರಕಾರ ಮುಖ್ಯ ಮಂತ್ರಿಗಳಿಗೆ ಮಂತ್ರಿಮಂಡಳವನ್ನು ರಚನೆ ಮಾಡಲು ಅವಕಾಶವಿದೆ, ಅಂದರೆ ಪಾರ್ಟಿಯು ಚುನಾವಣೆ ಮಾಡತಕ್ಕ ಲೀಡರ್‌ಗೆ ಈ ಮಂತ್ರಿಮಂಡಳವನ್ನು ನೇಮಿಸಿಕೊಳ್ಳುವ ಅಧಿಕಾರವಿದೆ ಎಂದಾಯಿತು. ಆದರೆ ಆ ಆರ್ಟಿಕಲ್‌ನಲ್ಲಿ ಲೀಡರ್ ಆಗಿರತಕ್ಕವರು ಯಾವ ಯಾವ ಸಂದರ್ಭಗಳಲ್ಲಿ ಅವರು ತಮ್ಮ ಮಂತ್ರಿಮಂಡಳವನ್ನು ಬದಲಾವಣೆ ಅಥವಾ ಬಡಾವಣೆ ಮಾಡಬೇಕು ಎಂಬ ಅಂಶ ಮಾತ್ರ ಅದರಲ್ಲಿಲ್ಲ. ಆದಾಗ್ಯೂ ಒಂದು ಮಂತ್ರಿಮಂಡಳದ ಬಡಾವಣೆಯನ್ನು ಮಾಡತಕ್ಕ ಸಂದರ್ಭ ಒದಗಿದಾಗ ಅದಕ್ಕೆ ಸಕಾರಣವಾದ ವಾತಾವರಣ ಮತ್ತು ಸನ್ನಿವೇಶಗಳನ್ನು ಬಡಾವಣೆ ಮಾಡತಕ್ಕವರು ನಮೂದು ಮಾಡಲೇಬೇಕು. ಆದರೆ ಈ ದಿವಸ ಮಂತ್ರಿಮಂಡಳದ ಬಡಾವಣೆಯ ಸಂಬಂಧದಲ್ಲಿ ನಮ್ಮ ಮುಖ್ಯ ಮಂತ್ರಿಗಳಿಂದ ಯಾವ ಒಂದು ಸಮಂಜಸವಾದ ಹೇಳಿಕೆಯೂ ಹೊರಟಿರುವುದಿಲ್ಲ. ಈ ವಿಚಾರ ದೇಶದ ಜನತೆಗೆಲ್ಲ ಸಂಬಂಧಪಟ್ಟ ವಿಚಾರವಾಗಿರುತ್ತೆ. ಇದರ ಕಾರಣವನ್ನು ತಿಳಿದುಕೊಳ್ಳಬೇಕಾದ್ದು ದೇಶದಲ್ಲಿರುವ ಜನತೆಯ ಆದ್ಯ ಕರ್ತವ್ಯ. ಈ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮಾಡಿರತಕ್ಕ ಮಂತ್ರಿಮಂಡಳದ ಬಡಾವಣೆಯ ವಿಚಾರ ನಮಗೂ ಮತ್ತು ದೇಶದ ಜನರಿಗೂ ತೀರಾ ನಿರಾಶಾದಾಯಕವಾಗಿದೆ. ಆದರೆ ಹೀಗೆ ಮಂತ್ರಿಮಂಡಲವನ್ನು ಬಡಾವಣೆ ಮಾಡುವ ಸಮಸ್ಯೆಗಿಂತ ಅತಿತ್ವರಿತವಾಗಿ ಮಾಡಬೇಕಾದಂಥ ಸಮಸ್ಯೆಗಳು ಅನೇಕ ನಮ್ಮ ಮುಂದೆ ಇವೆ. ದುರದೃಷ್ಟವಶಾತ್ ಹತ್ತಾರು ವರ್ಷಗಳಿಂದಲೂ ದೇಶದಲ್ಲಿರತಕ್ಕ ಬಹು ಭಾಗದ ಜನರು ಸರಿಯಾಗಿ ಹೊಟ್ಟೆ ಬಟ್ಟೆಗಿಲ್ಲದೆ, ಸರಿಯಾದ ಒಂದು ಔಷದೋಪಚಾರವಿಲ್ಲದೆ, ವಿದ್ಯಾರ್ಜನೆಗೆ ಅನುಕೂಲವಿಲ್ಲದೆ ತೊಂದರೆಪಡುತ್ತಿದ್ದಾರೆ. ಇಂಥ ಕ್ಲಿಷ್ಟಕರವಾದ ಸಮಸ್ಯೆಗಳು ನಮ್ಮ ಮುಂದೆ ಅನೇಕವಿರುತ್ತವೆ. ಈ ವಿಚಾರ ಸರ್ಕಾರಕ್ಕೂ ಗೊತ್ತಿದೆ, ದೇಶದ ಜನರಿಗೂ ಗೊತ್ತಿದೆ. ಇಂಥ ಸನ್ನಿವೇಶದಲ್ಲಿ ಯಾವುದೋ ಒಂದು ಕಾರಣವನ್ನಿಟ್ಟುಕೊಂಡು ಹೀಗೆ ಈ ದಿವಸ ನಮ್ಮ ಮಂತ್ರಿಮಂಡಳವನ್ನು ಬಡಾವಣೆ ಮಾಡಿರತಕ್ಕದ್ದನ್ನು ನೋಡಿದರೆ ನಿಜವಾಗಿಯೂ ನಾವು ಇದಕ್ಕೆ ನಾಚಿಕೆಪಡಬೇಕಾಗಿದೆ...

ಶ್ರೀ ಕಡಿದಾಳ್ ಮಂಜಪ್ಪ (ಕಂದಾಯ ಶಾಖೆಯ ಮಂತ್ರಿಗಳು) ಮಂತ್ರಿಮಂಡಳವೇನು ಬದಲಾವಣೆಯಾಗಿಲ್ಲವಲ್ಲ?

ಶ್ರೀ ವೈ. ವೀರಪ್ಪ.—ಬದಲಾವಣೆಯಲ್ಲ, ಬಡಾವಣೆ ಆಗಿರುವ ವಿಚಾರವನ್ನು ಪ್ರಸ್ತಾಪಮಾಡು

ತ್ತಿದ್ದೇನೆ. ದೇಶದ ಜನತೆಯ ಮುಂದೆ ಈ ಮಂತ್ರಿಮಂಡಳದ ಮೇಲೆ 29 ಆರೋಪಗಳನ್ನು ಇಟ್ಟಿದ್ದರು. ಈಗ ಹೊಸದಾಗಿ ನಾಲ್ಕು ಜನ ಮಂತ್ರಿಗಳನ್ನು ಸೇರಿಸಿಕೊಂಡ ಮಾತ್ರಕ್ಕೆ ಅವೆಲ್ಲ 29 ಆರೋಪಗಳು ಒಮ್ಮೆಲೆ ಮಾಯವಾಗಿವೆಯೆ, ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಆಡಳಿತ ಪಕ್ಷದಲ್ಲಿರತಕ್ಕವರು ಭಯ-ಭಕ್ತಿಯಿಂದ ನ್ಯಾಯವಾದ ರೀತಿಯಲ್ಲಿ ನಡೆಕೊಂಡಿಲ್ಲವೆಂದು ಅನಿವಾರ್ಯವಾಗಿಹೇಳಬೇಕಾಗಿದೆ ಆಡಳಿತ ಪಕ್ಷದಲ್ಲಿರುವ ಅಧಿಕಾರದ ಬಗ್ಗೆ ಕಚ್ಚಾಟ ಕಿತ್ತಾಟ ಇರುವುದನ್ನು ನೋಡಿ ಉಭಯತ್ರರೂ ಕೂಡಿಕೊಂಡು, ಮುಂದಿನ ಚುನಾವಣೆಯು ಹತ್ತಿರ ಬರುತ್ತಿರುವದರಿಂದ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಒಂದಾಗಬೇಕು ಎಂದು ಈ ರೀತಿ ಮಾಡಿದ್ದಾರೆ ಎಂದು ಕಾಣುತ್ತದೆ. ಬೇರೆ ಏನು ಕಾಣುವದಿಲ್ಲ ಇದೆಲ್ಲ ವಿಷಯ ಪತ್ರಿಕೆಗಳಿಂದ ತಿಳಿದು ಬಂದಿದೆ. ಈಗ ಏಕದಮ್ ನಾಲ್ಕು ಮಂತ್ರಿಗಳನ್ನು ಹೊಸದಾಗಿ ಸೇರಿಸಿಕೊಂಡಿರುವುದಕ್ಕೆ ಯಾವ ಸಕಾರಣವೂ ಇಲ್ಲ. ಮೈನಾರಿಟಿಗೆ ಹೆಚ್ಚು ಉತ್ತೇಜನ ಕೊಡಬೇಕೆಂಬುದು ರಾಜ್ಯಾಂಗದಲ್ಲಿ ಅಡಕವಾಗಿದೆ. ಆದರೆ ಯಾವದೊಂದು ಕಸಬನ್ನು ಅವಲಂಬಿಸಿಕೊಂಡಿರತಕ್ಕ ಅಲ್ಪಸಂಖ್ಯಾಂತರ ಹಿತರಕ್ಷಣೆ ಸರಕಾರ ಮಾಡುತ್ತಿಲ್ಲ. ಒಂದು ಅಂಶ ಹೇಳಬೇಕೆಂದಿದ್ದೇನೆ. ದೇಶದಲ್ಲಿ ಖಾದಿಬೋರ್ಡು ರಚನೆಯಾಗಿದೆ ಅದರಂತೆ ಹ್ಯಾಂಡ್ ಲೂಮ್ ಬೋರ್ಡು ರಚನೆಯಾಗಿದೆ. ಬಹಳ ಕಾಲದಿಂದಲೂ ಬಡತನದಲ್ಲಿ ಸಿಕ್ಕಿರುವ ನೇಕಾರ ಜನರಿಗೆ ಯಾವ ರೀತಿ ಸಹಾಯ ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಈ ನೇಕಾರ ಜನಾಂಗಕ್ಕೆ ಯಾವ ಉತ್ತೇಜನ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ಹಿಂದೆ ಕೈಮಗ್ಗದ ಬಟ್ಟೆಯ ಬಗ್ಗೆ ಒಂದು ಸಪ್ತಾಹ ಮಾಡಿದರು. ಕೈಮಗ್ಗದ ಬಟ್ಟೆಗೆ ಒಂದು ರೂಪಾಯಿಗೆ ಐದು ನಯಪೈಸೆ ರಿಬೇಟ್ ಕೊಟ್ಟರೆ ಖಾದಿ ಬಟ್ಟೆಗೆ 19 ನಯೆಪೈಸೆ ರಿಬೇಟು ಕೊಟ್ಟಿರುತ್ತಾರೆ. ಖಾದಿಗೆ ಸರಕಾರದವರು ಬೇಕಾದಷ್ಟು ಉತ್ತೇಜನ ನಾನಾರೀತಿಯಲ್ಲಿ ಕೊಡುತ್ತಿದ್ದಾರೆ. ಅದೇ ರೀತಿಯಾಗಿ ಕೈಮಗ್ಗದ ನೇಕಾರರಿಗೆ ಉತ್ತೇಜನ ಏಕೆ ಕೊಡಬಾರದು? ಅವರ ಸ್ಥಿತಿ-ಗತಿಗಳು ಸಹ ಉತ್ತಮವಾಗಬೇಕಾಗಿದೆ ಆದ್ದರಿಂದ ಅವರಿಗೂ ಸಹ ಉತ್ತೇಜನ ಕೊಡಬೇಕೆಂದು ನಾನು ಹೇಳುತ್ತೇನೆ.

ಈಗ ವಿಶಾಲ ಕರ್ನಾಟಕ ರಾಜ್ಯವಾಗಿದೆ, ಎಲ್ಲ ಕಾನೂನುಗಳೂ ಸಮೀಕರಣವಾಗಬೇಕಾಗಿದೆ. ಈ ಜವಾಬ್ದಾರಿ ಸರಕಾರದ ಮೇಲಿದೆ. ಸುಮಾರು 300–350 ಮಸೂದೆಗಳು ಪರಿಶೀಲನೆಗೆ ತಯಾರಾಗಿದ್ದರೂ ಕೂಡ ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳದೆ ಅದಕ್ಕೆ ಕಾಲಾವಕಾಶವಿಲ್ಲದೆ ನಿಮ್ಮ ನಿಮ್ಮಲ್ಲಿಯೆ ಒಳಜಗಳದಲ್ಲಿಯೇ ಕಾಲಕಳೆಯುತ್ತೀದ್ದೀರಿ. ದೇಶದಲ್ಲಿ ಅತ್ಯವಶ್ಯವಾಗಿ ಜಾರಿಗೆ ಬರಬೇಕಾಗಿರುವ ಪರಿಣಾಮಕಾರಿಯಾಗಿರುವ ಭೂಸುಧಾರಣೆಯ ಮಸೂದೆಯನ್ನು ರಚಿಸಿ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಒಪ್ಪಿಸಿದೆ. ಈ ಮಸೂದೆ ಯಾವಾಗ ಪಾಸ್ ಆಗಿ ಜಾರಿಗೆ ಬರುವುದು? ಈ ಭೂಸುಧಾರಣೆ ಮಸೂದೆ ಏನಾಯಿತು ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಇನ್ನು ಮುಂದೆ ಕಾಲವಿಳಂಬ ಮಾಡದೆ ಈ ಮಸೂದೆಯನ್ನು ಸಭೆಯ ಮುಂದೆ ತಂದು ಒಪ್ಪಿಗೆ ಪಡೆದು ಜಾರಿಯಲ್ಲಿ ತರುವುದು ಅವಶ್ಯವಾಗಿದೆ ಈ ವಿಷಯದ ಬಗ್ಗೆ ರಾಜಪಾಲರ ಭಾಷಣದಲ್ಲಿ ಪ್ರಸ್ತಾಪವೇ ಕಂಡು ಬರುವದಿಲ್ಲ.

ಇನ್ನು ಗ್ರಾಮಾಧಿಕಾರಿಗಳ ಸಂಭಂಧದಲ್ಲಿ ಒಂದು ಮಸೂದೆಯನ್ನು ತಂದಿದ್ದರು. ಇದರ ಬಗ್ಗೆ ಗ್ರಾಮಾಧಿಕಾರಿಗಳು ಆಕಾಂಕ್ಷೆಯಿಂದ ನೋಡುತ್ತಿದ್ದಾರೆ. ಇನ್ನು ಮುಂದೆ ಗ್ರಾಮಾಧಿಕಾರಿಗಳ ಸ್ಥಾನಮಾನ ಶಾಶ್ವತವಾಗಿ ಇರುವುದಿಲ್ಲ ಎಂದು ತಿಳಿದುಬಂದಿರುವದರಿಂದ, ಅವರು ಕೆಲಸವನ್ನೂ ಸಹ ಸರಿಯಾಗಿ ಮಾಡುತ್ತಿಲ್ಲ. ಈ ಕಾನೂನನ್ನು ಬೇಗನೆ ಜಾರಿಗೆ ಬರುವಹಾಗೆ ಮಾಡಬೇಕು. ಈ ಅಂಶ ರಾಜ್ಯಪಾಲರ ಭಾಷಣದಲ್ಲಿ ಕಂಡು ಬರುವದಿಲ್ಲ.

ಇನ್ನೊಂದು ಬಹು ಮುಖ್ಯವಾದುದು ಆಹಾರದ ಸಮಸ್ಯೆ. ಈ ಆಹಾರದ ಸಮಸ್ಯೆಯನ್ನು ಹೋಗಲಾಡಿಸ ಬೇಕಾದರೆ ಹೆಚ್ಚು ಆಹಾರ ಬೆಳೆಯಬೇಕು ಎಂದು ಕೂಗೂ ಅನೇಕ ದಿನಗಳಿಂದ ಇದೆ. ಇದಕ್ಕಾಗಿ ವ್ಯವಸಾಯದಲ್ಲಿ ಅನೇಕ ಬದಲಾವಣೆಗಳಾಗ ಬೇಕಾಗಿದೆ. ಆಹಾರಧಾನ್ಯ ಒದಗಿಸುವದರಲ್ಲಿ ನಮ್ಮ ರಾಜ್ಯವು ಸ್ವಯಂಪೂರ್ಣತೆಯನ್ನು ಪಡೆಯಬೇಕು, ಎಂಬ ಕೂಗು ಇದ್ದೇ

(ಶ್ರೀ ವೈ. ವೀರಪ್ಪ)

ಇದೆ. ಆದರೆ ಇವತ್ತಿನ ದಿವಸ ಸುಗ್ಗಿಯ ಕಾಲವಾಗಿದ್ದರೂ ಸಹ ಒಂದು ರೂಪಾಯಿಗೆ ಒಂದು ಸೇರು ಚಟಾಕು ಅಕ್ಕಿ ದೊರೆಯುತ್ತಿದೆ, ಹೀಗೆ ಬೆಲೆ ಜಾಸ್ತಿಯಾದರೆ ಬಡವರು ಜೀವನ ನಡೆಸುವುದು ಬಹು ಕಷ್ಟ. ದೇಶದಲ್ಲಿ ಹೆಚ್ಚು ಆಹಾರ ಬೆಳೆಯುತ್ತಿಲ್ಲ. ಈ ವಿಷಯದಲ್ಲಿ ಸರಕಾರವು ಅನುಸರಿಸುತ್ತಿರುವ ನೀತಿಯು ತೃಪ್ತಿಕರವಾಗಿಲ್ಲ. ರೈತರಿಗೆ ಸಕಾಲದಲ್ಲಿ ಗೊಬ್ಬರ ಮರ-ಮುಟ್ಟು, ವ್ಯವಸಾಯಕ್ಕೆ ಬೇಕಾಗುವ ಇತರ ಸಲಕರಣೆಗಳು ದೊರೆಯುತ್ತಿಲ್ಲ. ವ್ಯವಸಾಯಮಾಡುವದಕ್ಕೆ ಜಮೀನು ರೈತರಿಗೆ ದೊರೆಯುತ್ತಿಲ್ಲ. ವ್ಯವಸಾಯಕ್ಕೆ ಬೇಕಾದ ವಿದ್ಯುಚ್ಛಕ್ತಿ ಸರಬರಾಜು ಸರಿಯಾಗಿ ಮಾಡುತ್ತಿಲ್ಲ. ಸರಿಯಾದ ರೀತಿಯಲ್ಲಿ ಒದಗಿಸುವುದಕ್ಕೆ ಆಸಕ್ತಿ ವಹಿಸಬೇಕು.

ದೇಶದಲ್ಲಿ ನಡೆಯುವ ಗೋವಧೆ ತಪ್ಪಿಸಬೇಕೆಂಬ ಕೂಗು ನಮ್ಮ ಸಂಸ್ಕೃತಿಗೆ ಅನುಸಾರವಾಗಿ ನಾನಾ ಮೂಲೆಯಿಂದ ಬರುತ್ತಾ ಇದೆ. ಅಧಿಕಾರಿಗಳಿಂದ, ಪೋಲಿಸರಿಂದ ಸರಿಯಾದ ರಕ್ಷಣೆ ದೊರೆಯದೆ ಇರುವದರಿಂದ ದೇಶದಲ್ಲಿ ದನಗಳ ವಧೆ ಬೇಕಾದಷ್ಟು ಆಗುತ್ತಿದೆ. ಗೋವಧೆಯನ್ನು ನಿರ್ಬಂಧಿಸುವ ಒಂದು ಕಾನೂನು ಇದ್ದರೂ ಸಹ ಅದು ಸರಿಯಾಗಿ ಜಾರಿಯಲ್ಲಿ ಬಂದಿಲ್ಲ. ಈ ವಿಷಯದ ಬಗ್ಗೆ ಒಂದು ಸರಿಯಾದ ಕಾನೂನು ಮಾಡಿ ಗೋವಧೆಯನ್ನು ನಿಲ್ಲಿಸುವುದು ಸೂಕ್ತವಾದುದು. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವದೇ ವಿಚಾರ ಕಂಡುಬರುವದಿಲ್ಲ.

ಇತ್ತೀಚೆಗೆ ದೇಶದಲ್ಲಿ ಭಿಕ್ಷುಕರ (Beggers) ಕಾಟ ಜಾಸ್ತಿಯಾಗಿದೆ, ಇದನ್ನು ತಡೆಗಟ್ಟುವುದಕ್ಕೆ ಸರಕಾರ ಸರಿಯಾಗಿ ಶಕ್ತಿವಿನಿಯೋಗಿಸಿ ಕ್ರಮ ತೆಗೆದು ಕೊಂಡಿಲ್ಲ. ಹೆಸರಿಗೆ ಮಾತ್ರ ಒಂದು ಕಾನೂನು ಇದೆ. ಸರಕಾರದವರು ಈ ವಿಚಾರದಲ್ಲಿ ತಕ್ಕಕ್ರಮ ತೆಗೆದುಕೊಳ್ಳಬೇಕಾದದು ಅವರ ಆದ್ಯ ಕರ್ತವ್ಯ ವಾಗಿದೆ. ಭಿಕ್ಷುಕರನ್ನು ನಿರ್ಬಂಧಿಸುವ ಕಾನೂನನ್ನು ತೃಪ್ತಿಕರವಾದ ರೀತಿಯಲ್ಲಿ ಜಾರಿಗೆ ತರಬೇಕು.

MR. DEPUTY SPEAKER.—The House will now rise and meet after hal an hour.

The House adjourned for recess at Three of the Clock and reassembled at Forty Minutes past Three of the Clock.

MR. DEPUTY SPEAKER (in the chair).

ಶ್ರೀ ವೈ. ವೀರಪ್ಪ.—ಸ್ವಾಮಿ ನಾನು ಈ ಮೊದಲು ಹೇಳುತ್ತಿದ್ದಾಗ ರಾಜ್ಯಪಾಲರ ಭಾಷಣವು ಎಷ್ಟು ನಿರಾಶಾದಾಯಕವಾಗಿದೆ ಎಂದು ಹೇಳುತ್ತಿದ್ದೆ. ಆಹಾರದ ಸಮಸ್ಯೆಯ ಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಇಲ್ಲಿಯವರೆಗೆ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚುಮಾಡಿ ಎರಡನೆಯ ಪಾಂಚವಾರ್ಷಿಕ ಯೋಜನೆಯು ಮುಕ್ತಾಯವಾಗುತ್ತಿದ್ದರು ಆಹಾರದ ಅಭಾವದ ಪರಿಸ್ಥಿತಿ ಸ್ವಲ್ಪಮಟ್ಟಿಗಾದರೂ ಸೂಕ್ತವಾಗಿ ಪರಿಹಾರವಾಗಿಲ್ಲ ಎಂದು ನಾನು ಹೇಳಬೇಕಾಗಿದೆ. ಮಧ್ಯಪ್ರದೇಶದಿಂದ ಸುಮಾರು 13 ಟನ್ನುಗಳಷ್ಟು ಅಕ್ಕಿಯನ್ನು ತರಿಸಿ ಆಹಾರಭಾವವನ್ನು ನೀಗಲು ಅನುಕೂಲವಾಯಿತು ಎಂದು ರಾಜ್ಯಪಾಲರ ಬಾಯಿನಿಂದಲೂ ನುಡಿಸಿ ಬಿಟ್ಟರು. 1959ರಲ್ಲಿ ಇದೇ ಮೈಸೂರು ದೇಶದಲ್ಲಿ ಸರಕಾರದ ಗೋಡಾನಿನಲ್ಲಿದ್ದ ಭತ್ತ ಅನೇಕ ಕಡೆಗಳಲ್ಲಿರುವ ಮಿಲ್ಲುಗಳಲ್ಲಿದ್ದುದು ಅವುಗಳನ್ನು ಇಡಲಿಕ್ಕೆ ಜಾಗವಿಲ್ಲ ಎಂದು ಅದನ್ನು ಬೇರೆ ಜಾಗಕ್ಕೆ ಕಳುಹಿಸಬೇಕೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೂ ಮತ್ತು ಅಹಾರದ ಕಮಿಷನರಿಗೂ ಮತ್ತು ಇತರ ಅಧಿಕಾರಿಗಳ ಗಮನಕ್ಕೆ ತಂದಾಗ್ಯೂ ಕೂಡ ಇಲ್ಲಿಯವರೆಗೆ ಯಾವ ಒಂದು ಕಾರ್ಯಕ್ರಮನ್ನೂ ತೆಗೆದುಕೊಂಡಿಲ್ಲ ಎಂದು ಈ ಸಂದರ್ಭದಲ್ಲಿ ವಿಷಾದದಿಂದ ನಾನು ಹೇಳಲು ಇಷ್ಟಪಡುತ್ತೇನೆ. ಆಹಾರದಅಭಾವ ತಪ್ಪಬೇಕಾದರೆ ಕೇವಲ ಭಾಷಣಮಾಡುವುದರಿಂದ ಮತ್ತು

ಪುಸ್ತಕಗಳಲ್ಲ ಬರೆಯುವುದರಿಂದ ನೀಗುವ ಯೋಜನೆಯಲ್ಲ. ಆಹಾರದ ಅಭಾವ ನೀಗಬೇಕಾದರೆ ನಮ್ಮ ದೇಶದ ಸರ್ವಕ್ಷೇತ್ರದಲ್ಲಿಯೂ ತಾಂತ್ರಿಕ ಜ್ಞಾನದ ಅಭಾವವೇನಿಲ್ಲ ಎಲ್ಲ ಸಾಲಭ್ಯಗಳೂ ಇವೆ. ಅದರಂತೆ ಜನಗಳ ಕಷ್ಟವನ್ನು ನಿವಾರಣೆ ಮಾಡಿದರೆ, ಈ ಪಂಚವಾರ್ಷಿಕ ಯೋಜನೆಯಿಂದ ಪ್ರಯೋಜನವಾಗುತ್ತದೆ, ಇಲ್ಲದಿದ್ದರೆ ಇಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ಆಡಳಿತಪಕ್ಷದಲ್ಲಿ ಮುಖ್ಯಮಂತ್ರಿಗಳ ಹೊರತಾಗಿ ಬೇರೆ ಯಾವಮಂತ್ರಿಗಳೂ ಇಲ್ಲ. ಇಲ್ಲಿ ಹೇಳುವ ವಿಷಯಗಳನ್ನು ಯಾರೂ ನೋಟು ಮಾಡಿಕೊಳ್ಳುತ್ತಿಲ್ಲ.

Sri B. D. JATTI (Chief Minister).—You should not speak so lightly. If you come here, am I to remove you? You must speak with responsibility. You must have respect for other Members when you come here.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸಂಭಂಧಪಟ್ಟ ಖಾತೆಯ ಮಂತ್ರಿಗಳು ಇಲ್ಲಿ ಹೇಳಿದುದನ್ನು ನೋಟು ಮಾಡಿಕೊಳ್ಳುವದಕ್ಕೆ ಯಾರೂ ಇಲ್ಲ ಎಂದು ಹೇಳಿದೆ, ಅಷ್ಟೆ.

Sri B. D. JATTI.—It is my concern. I do not need any instructions from the Hon'ble Member.

ಶ್ರೀ ವೈ. ವೀರಪ್ಪ.—ನಾನು ಒಂದು ನಿದರ್ಶನವನ್ನು ಈಸಭೆಯ ಮುಂದೆ ಹೇಳಬೇಕಾಗಿದೆ. ಆಡಳಿತ ಪಕ್ಷದವರು ಹಳ್ಳಿಗಾಡಿನ ಹಿತರಕ್ಷಣೆಯನ್ನು ಚೆನ್ನಾಗಿ ಕಾಪಾಡುತ್ತಿಲ್ಲ. ರಾಜ್ಯಪಾಲರು ತಮ್ಮ ಭಾಷಣದಲ್ಲಿ 23ನೇ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ, ''Providing the urban population with pure water supply has cotinued to be a primary concern of the administration.'' ಆದರೂ ಹಳ್ಳಿಗಾಡಿನ ಜನತೆಯ ಸ್ಥಿತಿಗತಿಗಳನ್ನು ನೋಡಿದರೆ ಇವತ್ತಿನ ದಿವಸ ಅಲ್ಲಿ ಕುಡಿಯಲಿಕ್ಕೆ ಜನಗಳಿಗೆ ನೀರೇ ಇಲ್ಲ. ದನಕರುಗಳಿಗೂ ನೀರು ಇಲ್ಲ. ಅದರಲ್ಲೂ ಈಚೀಚೆಗೆ ಸಿ. ಡಿ. ಮತ್ತು ಎನ್. ಇ. ಎಸ್. ಬ್ಲಾಕುಗಳು ಎಂದು ಬೇರೆ ಮಾಡಿದರು. ಆ ಬ್ಲಾಕುಗಳ ಮೂಲಕವಾದರೂ ಹಳ್ಳಿಗಾಡಿನಲ್ಲಿ ಕುಡಿಯಲಿಕ್ಕೆ ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆಯೇ ಎಂದರೆ ಯಾವ ವ್ಯವಸ್ಥೆಯನ್ನೂ ಇದುವರೆಗೆ ಮಾಡಲಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆ ಬಗ್ಗೆ ನಾನು ಅಂಕಿ-ಅಂಶಗಳನ್ನೂ ಸಹ ಶೇಖರಿಸಿದ್ದೇನೆ. ಅದೂ ಅಲ್ಲದೆ, ಸಿ. ಡಿ. ಮತ್ತು ಎನ್. ಇ. ಎಸ್. ಬ್ಲಾಕಿನಲ್ಲಿರುವವರೂ ಸಹ ಯಾವ ಹಳ್ಳಿಗೂ ಹೋಗದೆ ಹಳ್ಳಿಯವರ ಕಷ್ಟ-ಸುಖಗಳನ್ನೂ ಸಹ ವಿಚಾರಿಸದೆ ಇವತ್ತಿನ ದಿವಸ ಅವರ ಸ್ಥಿತಿಗತಿಗಳನ್ನು ಕೇಳುವವರೇ ಇಲ್ಲದಂತಾಗಿದೆ. ಅಲ್ಲಿನ ಜನರು ಕುಡಿಯಲಿಕ್ಕೆ ನೀರಿನ ಬಾವಿಗಳು ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ, ಮತ್ತು ಪಶ್ಚಾತ್ತಾಪಪಡುತ್ತಿದ್ದಾರೆ. ಅಂದಮೇಲೆ ಈಗಿನ ಸರ್ಕಾರದವರು ನಮ್ಮ ರಾಜ್ಯದಲ್ಲಿ ವೆಲ್‌ಫೇರ್ ಸ್ಟೇಟ್, ರಾಮರಾಜ್ಯ ಮತ್ತು ಸುಖೀ ರಾಷ್ಟ್ರವನ್ನು ಎಷ್ಟರ ಮಟ್ಟಿಗೆ ಸ್ಥಾಪನೆಮಾಡುತ್ತಾರೋ ಎಂಬುದು ನನಗೆ ಗೊತ್ತಿಲ್ಲ. ಕೇವಲ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಕೊಡುತ್ತಿರುವ ತೆರಿಗೆಗಳ ಮೂಲಕ ಧನವನ್ನು ಸಂಗ್ರಹಿಸಿ ದೇಶದ ಟ್ರೆಜರಿಯನ್ನು ತುಂಬಿ ತನ್ಮೂಲಕ ದೇಶದ ಜನತೆಗೆ ತಕ್ಕ ಸಾಕರ್ಯಗಳನ್ನು ಕಲ್ಪಿಸಿಕೊಡುವುದರಲ್ಲಿ ಸರ್ಕಾರ ನಿಜವಾಗಿಯೂ ನಿಗಾ ಕೊಟ್ಟಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಗ್ರಾಮಗಳಲ್ಲಿ ನೀರಿನ ಸಾಕರ್ಯಕ್ಕೆ ಸಾಕಷ್ಟು ಗಮನವನ್ನು ಈ ಸರ್ಕಾರ ಕೊಟ್ಟಿಲ್ಲವೆಂದು ಹೇಳಿದರೆ ಅದೇನು ಉತ್ಪ್ರೇಕ್ಷೆಯಲ್ಲ. ಈ ನನ್ನ ವಾದ ಪ್ರಾಮಾಣೀಕತೆಯಿಂದ ಮತ್ತು ಸತ್ಯದಿಂದ ಕೂಡಿದೆ. ಗೋರ್ವಾಲ ವರದಿಯಲ್ಲಿ ಈ ಆಡಳಿತ ಪಕ್ಷದವರು ಅನುಸರಿಸಬೇಕಾದ ಕ್ರಮಗಳನ್ನು ಎಷ್ಟರಮಟ್ಟಿಗೆ ತೀಕ್ಷ್ಣರೀತಿಯಿಂದ ಮತ್ತು ಸ್ಪಷ್ಟವಾದ ಸೂತ್ರಗಳಿಂದ ಕೊಟ್ಟಿದ್ದಾರೆಂಬುದನ್ನು ಈ ಸರ್ಕಾರದವರು ಸರಿಯಾಗಿ ಗಮನಿಸಿಲ್ಲ. ಆ ರೀತಿ ಕಾರ್ಯಕ್ರಮಗಳನ್ನು ತೆಗದುಕೊಳ್ಳಲೂ ಇಲ್ಲ. ಅವರ ಅನುಸರಣೆಯಂತೆ ಸರ್ಕಾರ ಕ್ರಮಗಳನ್ನು ತೆಗೆದುಕೊಂಡಿದ್ದೇ ಆದರೆ, ಜನತೆಗೆ ಇನ್ನೂ ಹೆಚ್ಚಿನ ಸಾಕರ್ಯ ಒದಗುತ್ತದೆಂದು ನಾನು ಹೇಳುತ್ತೇನೆ.

(ಶ್ರೀ ವೈ. ವೀರಪ್ಪ)

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ 28ನೇ ಪ್ಯಾರಾದಲ್ಲಿ ಒಂದು ವಾಕ್ಯವನ್ನು ಹೇಳಿದ್ದಾರೆ. ಅದು ಈ ರೀತಿ ಇದೆ :

"I have referred to our plans for the next five years. To implement these, we shall have to review our financial position. Our commitments are increasing and not only must we improve our internal resources but we must also make a special effort in terms of economy in expenditure. My Government have, therefore, appointed a Resources and Economy Committee under the Chairmanship of Sri A. G. Ramachandra Rao."

ಈ ಸಮಿತಿಯನ್ನು ರಚಿಸುವುದಕ್ಕೆ ಯಾವಕಾರಣ ಬಂದಿತ್ತು, ಅಂತಹ ಜರೂರು ಅವಶ್ಯಕತೆ ಏನಿತ್ತು. 1959ರಲ್ಲಿ ನಾನು ಒಂದು ಖಾಸಗೀ ನಿರ್ಣಯವನ್ನು ಈ ಬಗ್ಗೆ ಕಳುಹಿಸಿದ್ದೆ, ದೇಶದಲ್ಲಿ ದುಡ್ಡು ಬಹಳವಾಗಿ ಖರ್ಚಾಗುತ್ತಿದೆ. ವಿತರಣೆಯಿಂದ ಒಂದು ಧ್ಯೇಯ-ಧೋರಣೆಯಿಂದ ದೇಶದ ಹಣ ಪೋಲಾಗದಂತೆ ವ್ಯಯಮಾಡಬೇಕು. ಅದಕ್ಕಾಗಿ ದೇಶಸಂಚಾರಮಾಡಿ ಮಿತವ್ಯಯ ಗೊಳಿಸಲು ತಕ್ಕ ಸೂಚನೆಗಳನ್ನು ಕೊಡುವುದಕ್ಕಾಗಿ ಒಂದು ಕಮಿಟಿಯನ್ನು ರಚಿಸಬೇಕೆಂದು ನಿರ್ಣಯವನ್ನು ಸರ್ಕಾರಕ್ಕೆ ಕಳುಹಿಸಿದಾಗ, ಅದು ಅನವಶ್ಯಕವೆಂದು ಹೇಳಿದರು. ಪಬ್ಲಿಕ್ ಅಕೌಂಟ್ಸ್ ಕಮಿಟಿ, ಎಸ್ಟಿಮೇಟ್ ಕಮಿಟಿ, ಮುಂತಾದ ದೊಡ್ಡದೊಡ್ಡ ಕಮಿಟಿಗಳು ಬೇಕಾದಷ್ಟು ಆ ಬಗ್ಗೆ ಸೂಚನೆ ಕೊಡುತ್ತಾರೆಂದು ಹೇಳಿದರು. ಆದಾಗ್ಯೂ ಕೂಡ ಇದ್ದಕ್ಕಿದ್ದ ಹಾಗೆ ಈಗ ಯಾವ ಕಾರಣದ ಮೇಲೆ, ಯಾವ ಹಿನ್ನಲೆ ಮೇಲೆ ಈ ಸಮಿತಿಯನ್ನು ರಚಿಸಿದ್ದಾರೋ ಗೊತ್ತಾಗಲಿಲ್ಲ. ಈ ಸಮಿತಿಯಲ್ಲಿರುವವರು ಯಾವ ರೀತಿಯಾದಂಥ ಪ್ರಾಜ್ಞರು, ಯಾವರೀತಿಯಾದಂಥ ವೈಜ್ಞಾನಿಕ ದೃಷ್ಟಿ ಇವರಲ್ಲಿದೆ, ಯಾವ ಪಾಂಡಿತ್ಯವನ್ನು ಪಡೆದಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಅರ್ಥಸಚಿವರು ಹೇಳಿದಹಾಗೆ ಎಸ್ಟಿಮೇಟ್ ಕಮಿಟಿಯ 253ನೇ ಒಂದು ಪ್ರಾವಿಷನ್ ನೋಡಿದರೆ ಅದರಲ್ಲಿ ಈ ರೀತಿ ಹೇಳಿದ್ದಾರೆ. ಏನೆಂದರೆ :—

"Rule 253". There shall be a Committee on Estimates for the examination of such of the estimates as may seem fit to the Committee or are specifically referred to it by the Assembly or the Speaker. The functions of the Committee shall be—

(*a*) to report what economies, improvements in organisation, efficiency or administrative reforms, consistent with the policy underlying the estimates, may be effected."

ಆದ್ದರಿಂದ ಈಗ ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿಯನ್ನು ಹೊಸದಾಗಿ ರಚನೆ ಮಾಡಿರುವುದು ಈ ಸಂದರ್ಭದಲ್ಲಿ ಅನಾವಶ್ಯಕವಾಗಿತ್ತು. ರಾಜ್ಯಪಾಲರು ತಮ್ಮ ಭಾಷಣದ 28ನೇ ಪ್ಯಾರದಲ್ಲಿಯೂ ನಮ್ಮಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕು, ಹಣಕಾಸಿನ ಸ್ಥಿತಿಯನ್ನು ಜಾಸ್ತಿಮಾಡಬೇಕು. ಮಿತವ್ಯಯವನ್ನು ಜಾರಿಗೆ ತರಬೇಕು ಎಂದು ಹೇಳಿದ್ದಾರೆ. ಆದರೆ ಸರ್ಕಾರದವರು ಮಾಡುತ್ತಿರುವ ರೀತಿ-ನೀತಿಯನ್ನು ಗಮನಿಸಿದ್ದೇ ಆದರೆ, ಮಂತ್ರಿಗಳು ತಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳುವುದಕ್ಕೇನು ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ ಎಂದು ನಾನು ಈ ಸಭೆಯಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಅದನ್ನು ದೇಶದ ಜನತೆ ತಿಳಿಯಬೇಕು. ಅದಕ್ಕಾಗಿ ಇವತ್ತಿನ ದಿವಸ ಸರ್ಕಾರ ತಲೆಬಗ್ಗಿಸಬೇಕಾಗಿದೆ. ಅನೇಕ ಗ್ರಾಮಗಳಲ್ಲಿ ಮುಖ್ಯವಾಗಿ ನೀರಾವರಿ ಸೌಕರ್ಯಗಳನ್ನು ಒದಗಿಸಿ ಕೊಟ್ಟಿಲ್ಲ. ಹೆಚ್ಚಿಗೆ ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಕಟ್ಟಿಸಿ ಕೊಡುತ್ತೇವೆಂದು ರಾಜ್ಯಪಾಲರು ತಮ್ಮ

ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯಸರ್ಕಾರದವರು ಆ ಬಗ್ಗೆ ಮಾಡಿರುವುದು ನಿಜವಾಗಿಯೂ ಚಿಂತಾಜನಕವಾಗಿದೆ. ಒಂದೇ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರಿನ ಹಂಚಿಕೆಯ ಪ್ರಶ್ನೆಯನ್ನು ಎಷ್ಟರ ಮಟ್ಟಿಗೆ ಇತ್ಯರ್ಥಗೊಳಿಸುತ್ತಾರೆಂಬುದನ್ನು ನೋಡಿದರೆ ಸಾಕು. 1924ರಲ್ಲಿ ಮೈಸೂರಿಗೂ ಮತ್ತು ಮದ್ರಾಸಿಗೂ ಆದ ಷರತ್ತು ಪ್ರಕಾರ ನೀರಿನ ಹಂಚಿಕೆ ಇನ್ನೂ ಆಗಿಲ್ಲ. ಈಗಾಗಲೇ 36 ವರುಷಗಳು ಉರುಳಿಹೋಗಿವೆ. ಕೇವಲ ಇವತ್ತಿನ ದಿವಸ ಕಾವೇರಿ ನದಿಯ ನೀರಿನ ತಮ್ಮ ಸಂಪೂರ್ಣ ಭಾಗವನ್ನು ರಾಜ್ಯ ಸರ್ಕಾರ ಉಪಯೋಗಿಸುವುದಕ್ಕೆ ಅಸಕ್ತಿಯುಳ್ಳವರಾಗಿದ್ದಾರೆ. ಇದು ನಿಜವಾಗಿ ಮತ್ತೊಂದು ಚಿಂತಾಜನಕವಾದ ಸಂಗತಿಯಾಗಿದೆ. ನಾನು ಈ ಮಾತನ್ನು ಈ ಸಂದರ್ಭದಲ್ಲಿ ಬಹಳ ಸಂಕಟದಿಂದ ಈ ಸಭೆಯಲ್ಲಿ ಹೇಳಬೇಕಾಗಿದೆ. ಮದ್ರಾಸ್ ಸರ್ಕಾರದವರು ಎಷ್ಟರಮಟ್ಟಿಗೆ ಆ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಸಾಗುವಳಿ ಮಾಡುತ್ತಿದ್ದಾರೆಂದರೆ, ಈಗ 21 ಲಕ್ಷ ಎಕರೆಯಷ್ಟು ನೀರಾವರಿ ಸಾಗುವಳಿ ಅವರು ಮಾಡುತ್ತಿದ್ದಾರೆ. ಆದರೆ ಮೈಸೂರು ಸರ್ಕಾರದವರು ಕೇವಲ 3½ ಲಕ್ಷ ಎಕರೆಯಷ್ಟು ಮಾತ್ರ ನೀರಾವರಿ ಸಾಗುವಳಿ ಮಾಡುತ್ತಿದ್ದಾರೆ. ಇದರಿಂದ ನಿಜವಾಗಿ ರಾಜ್ಯಸರ್ಕಾರ ತಲೆ ಬಾಗಬೇಕು. ರಾಜ್ಯಸರ್ಕಾರಕ್ಕೆ ಮುಂದಿನ ಜನಾಂಗ, ನಮ್ಮ ಮುಂದಿನ ಪೀಳಿಗೆ ನಿಜವಾಗಿ ಇದರಿಂದ ಶಾಪ ಹಾಕುತ್ತಾರೆಂಬುದಾಗಿ ನಾನು ತಿಳಿಯುತ್ತೇನೆ.

Sri H. M. CHANNABASAPPA.— The Hon'ble Member knows that only yesterday, Government replied about Kambadakada, Harangi and Hemavathi that they are included in the Third Plan and are under scrutiny by C.P.W.C.

Sri Y. VEERAPPA.— I want to know from the Minister, what prevented them from taking suitable action to utilise the waters of such rivers like Nugu, Haraka, Kotehole which do not came under the agreement.

Sri H. M. CHANNABASAPPA.— Hon'ble Member knows that Yagati and Haraka are under investigation. Nugu is over already. Kotehole is under investigation.

Sri Y. VEERAPPA.— You have not done it all these years.

Sri H. M. CHANNABASAPPA.—At least now, we have done it.

(*Laughter.*)

ಶ್ರೀ ವೈ. ವೀರಪ್ಪ.— 13 ವರ್ಷಗಳಿಂದ ಏಕೆ ಮಾಡಲಿಲ್ಲ? ಈ ರೀತಿಯಾಗಿ ಅನೇಕ ಅಬ್‌ಜಕ್ಷನ್ ಬಂದಮೇಲೆ, ನಿಜವಾಗಿ ಪ್ಲಾನಿಂಗ್ ಕಮಿಷನ್ನಿನವರು ½ಭಾಗ ನಮಗೆ ಕೊಟ್ಟು ಹಣಸಹಾಯದಲ್ಲಿ ಕಟ್ ಮಾಡುತ್ತಾರೆಂದು ಹೇಳುತ್ತಾರೆ. ಅದನ್ನು ಹುಷಾರಾಗಿ ನೋಡಿಕೊಳ್ಳಿ. ಈಗಲೇ ಆ ಬಗ್ಗೆ ಮುಂದಾಲೋಚನೆ ಮಾಡಿ ಮುಂದಿನ ಜನಾಂಗದ ಒಂದು ಶಾಪಕ್ಕೆ ಗುರಿಯಾಗದೆ. ದೇಶದ ಮುಖ್ಯ ಗುರಿಯಾಗಿರುವ ಮತ್ತು ಪೆಡಂಭೂತದಂತಿರುವ ಆಹಾರ ಸಮಸ್ಯೆಯನ್ನು ಹೋಗಲಾಡಿಸಲು ಸರ್ವಪ್ರಯತ್ನಗಳನ್ನು ಕೂಡಲೇ ಸರ್ಕಾರದವರು ಕೈಗೊಳ್ಳಬೇಕು. ಕಾವೇರಿ ನದಿಯ ನೀರಿನ ಒಂದು ಹನಿಯೂ ಪೋಲಾಗದಂತೆ ರಾಜ್ಯಸರ್ಕಾರ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಕೇಂದ್ರ ಸರ್ಕಾರದ ಆಯೋಗ ಮಂಡಳಿಯವರ ಮೇಲೆ ಈ ಬಗ್ಗೆ ರಾಜ್ಯ ಸರ್ಕಾರದವರು ಒತ್ತಾಯ ಮಾಡಬೇಕು ಎಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಜನತೆಗೆ ನಿಮ್ಮಲ್ಲಿ ನಂಬಿಕೆ ಇರುವುದಿಲ್ಲ. ಸರ್ಕಾರ

(ಶ್ರೀ ವೈ. ವೀರಪ್ಪ)

ಈ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಪ್ರಯೋಜನವಾಗುವುದಿಲ್ಲ ವೆಂದು ನಾನು ಈ ಸಂದರ್ಭದಲ್ಲಿ ಬಹಳ ಸಂಕಟದಿಂದ ಹೇಳಬೇಕಾಗಿದೆ. ಈಗಿನ ಪಿ. ಡಬ್ಲ್ಯು. ಡಿ. ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಈ ವಿಷಯದಲ್ಲಿ ಕೇಂದ್ರದೊಡನೆ ಹೊಡೆದಾಡಿ ಕಾವೇರಿ ಬೇಸಿನ್ ವಾಟರ್‌ನಿಂದ ಹಾರಂಗಿ, ಕಂಬದಕಡ, ಹೇಮಾವತಿ ಯೋಜನೆಗಳನ್ನು ನಿರ್ವಾಣಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿರುವರು. ಅಂಥಾದ್ದರಲ್ಲಿ ಅಲ್ಲಿ ಇಲ್ಲಿ ಪ್ರತಿನಿಧಿ ಗಳಾಗಿರುವವರಿಗೆ ಪರಸ್ಪರ ವಿರೋಧ ಬಂದು ರಾಜ್ಯಸರ್ಕಾರದ ಮಟ್ಟದಲ್ಲಿ ಆಯೋಜನಾಮಂಡಲ ಮುಖ್ಯಮಂತ್ರಿಯೊಂದಿಗೆ ಈ ಬಗ್ಗೆ ಕೆಲವು ಸನ್ನಾಹಗಳನ್ನು ಒತ್ತಾಯ ಮಾಡುತ್ತಿದ್ದಾರೆ. ಅಂಥಾದಕ್ಕೆ ಮುಖ್ಯಮಂತ್ರಿಗಳೇ ಆಗಲೀ, ಇತರ ಮಂತ್ರಿಯಾರೇ ಆಗಲೀ ಒಪ್ಪಕೂಡದು ಅವರ ಅಭಿಪ್ರಾಯದಂತೆ ಮಾಡಬೇಡಿ. ನಿಜವಾಗಿ ಅದು ಅನ್ಯಾಯದ ಕೆಲಸ. ಮಾನ್ಯ ಮುಖ್ಯ ಮಂತ್ರಿಯವರು ಬಹು ದೀರ್ಘವಾಗಿ ಯೋಚನೆಮಾಡಬೇಕು. ಜನತೆಯ ಹಿತದೃಷ್ಟಿಯಿಂದ ಮತ್ತು ಈಗಿನ ಆಹಾರ ಅಭಾವವನ್ನು ನೀಗುವ ದೃಷ್ಟಿಯಿಂದ, ಹಿಂದಿನ ಅಗ್ರಿಮೆಂಟ್ ಪ್ರಕಾರ ಬಹು ಶೀಘ್ರವಾಗಿ ಯಾವರೀತಿಯಲ್ಲೂ ವಿರೋಧಮಾಡದೆ ಈ ಬಗ್ಗೆ ಮಂತ್ರಿ ಮಂಡಲ ದವರು ದೃಢಮನಸ್ಸನ್ನು ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ನಾನು ಹೇಳಬೇಕಾದ ಅಂಶಗಳು ಬಹಳವಾಗಿರುವುವು. ದಿವಸ ಗಟ್ಟಲೆಯಾದರೂ ಮಾತನಾಡುವಷ್ಟು ಅಂಶಗಳಿವೆ. ಸರ್ಕಾರದವರು ಇವತ್ತಿನ ದಿವಸ ನಿಜವಾಗಿಯೂ ತಂತಮ್ಮ ಕಾರ್ಯದಲ್ಲಿ ಪರಿ ಪೂರ್ಣವಾಗಿ ಕೆಲಸಮಾಡಿಲ್ಲವೆಂದು ಹೇಳಿದರೆ ಅದು ನಿಜವಾಗಿ ಬಹಳ ಶೋಚನೀಯವಾದುದ್ದು. ಬಹಳ ಸಂಕಟಪಡತಕ್ಕ ವಿಚಾರವಾಗಿದೆ. ದೇಶದ ಜನತೆ ಅರೆಹೊಟ್ಟೆ ತಿಂದು ಜೀವನ ಮಾಡು ತ್ತಿದ್ದಾರೆ. ಬಹಳ ಕಷ್ಟಪಡುತ್ತಿದ್ದಾರೆ. ಈ ದೇಶ ಅಥವಾ ಸರ್ಕಾರ ಕೇವಲ ಕೆಲವು ಮಂದಿ ಯದೇ ಅಲ್ಲ. ಕೆಲವು ರಾಜ್ಯಾಡಳಿತ ಪಾರ್ಟಿಗಳದೂ ಅಲ್ಲ. ಇದು ಜನತೆಯ ಹಕ್ಕು ಆಗಿರುತ್ತದೆ. ಸರ್ಕಾರದವರು ಜನತೆಗೆ ಉಪಯೋಗವಾಗುವ ರೀತಿಯಲ್ಲಿ ಕೆಲಸಮಾಡಬೇಕು.

ಒಟ್ಟಿನಲ್ಲ ರಾಜ್ಯಪಾಲರ ಭಾಷಣ ಅಷ್ಟಾಗಿ ಆಶಾದಾಯಕವಾಗಿಲ್ಲ. ಅವರ ಭಾಷಣಕ್ಕೆ ನಿಜವಾಗಿ ವಂದನೆಯನ್ನು ಅರ್ಪಿಸಲು ನನಗೆ ಇಷ್ಟವಿಲ್ಲ. ಅದಕ್ಕೆ ನಾನು ವಿರೋಧವಾಗಿ ಮಾತನಾಡಿ ಅವರ ಭಾಷಣ ಅಷ್ಟೊಂದು ದೀರ್ಘವಾದ ಯೋಚನೆ ಮತ್ತು ರೀತಿ-ನೀತಿಗಳಿಂದ ಕೂಡಿಲ್ಲವೆಂದು ನಾನು ಬಹಳ ಸಂಕಟದಿಂದ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

Mr. DEPUTY SPEAKER.—Sri Gaonkar will now speak.

Sri G. N. PUTTANNA.—Sir, the speaker had given a ruling that those who had tabled amendments should be given chances first in order and then others might be allowed to speak. Sri Gaonkar has not given an amendment and I do not know he is being called upon to speak.

ಉಪಾಧ್ಯಕ್ಷರು.—ತಮಗೂ ಅವಕಾಶ ಕೊಡುತ್ತೇನೆ.

Sri G. N. PUTTANNA.—Yesterday, you said you would give me the chance first. But again, that assurance is broken. ಅಮೆಂಡ್‌ಮೆಂಟುಗಳನ್ನು ಮಾಡಿದವರಿಗೆ ಮಾತನಾಡಲು ಮೊದಲು ಛಾನ್ಸ್‌ಕೊಟ್ಟು ಆಮೇಲೆ ಇತರರಿಗೆ ಕೊಡುತ್ತೇನೆಂದು ಅಧ್ಯಕ್ಷರು ಹೇಳಿದ್ದರು. ಛಾನ್ಸ್‌ಕೊಡುವ ಹಾಗಿದ್ದರೆ ಕೊಡಿ; ಇಲ್ಲದಿದ್ದರೆ ಕೊಡುವುದಕ್ಕಾಗುವು ದಿಲ್ಲವೆಂದು ಹೇಳಿಬಿಡಿ; ಹೊರಟುಹೋಗಿ ಅಂದರೂ ಹೊರಟುಹೋಗಿಬಿಡುತ್ತೇನೆ.

Sri M. RAMAPPA.—The procedure followed so far is that those who have moved amendments should first speak. Even on the side of the Opposition, those who have not moved amendments are not being given chances. There can be no discrimination between this and that side in this House and if the Chair is going to allow those who have not moved amendments to speak, then I submit that such persons on this side should also be permitted to speak.

Mr. DEPUTY SPEAKER.—Those who have tabled amendments will also be permitted to speak.

Sri M. RAMAPPA.—Yes, but the Speaker had ruled that the list of persons who have moved amendments should first be exhausted and then chances given to others.

Sri K. SURYANARAYANA RAO.—If that is the understanding, then it may be followed.

Sri G. N. PUTTANNA.—That is undoubtedly the understanding. Yesterday, the Speaker gave a ruling that opportunity to speak would be given first to those who have moved amendments and when the list is exhausted, the door will be thrown open to others. Yesterday, you were pleased to say that I could not get a chance before I had not risen in time. I then thought that you were not aware of the Speaker's ruling and hence, the misunderstanding and on my request, you were pleased to concede that I could speak on the first occasion to-day. Even now, the chance is being denied to me. I request the Chair to confine to the promise made yesterday. Why are my privileges being curbed in this manner. If the Chair does not want to give me a chance, I will rather go out of the House.

Mr. DEPUTY SPEAKER.—There is no question of privilege involved in this matter. I am not denying him a chance. It shall be given in due course.

Sri G. N. PUTTANNA.—I have moved an amendment and I have been waiting for the third day. My name has come up in the list and just when I have to be caelld, I find that chances are being given to all others. My rights and privileges are being curbed. Why should I at all move an amendment if I cannot speak on it.

Sri KADIDAL MANJAPPA.—I do not know why there is so much heat over this matter. Sri G. N. Puttanna would get a chance.

Sri G. N. PUTTANNA.—I do not want any new privilege to be conferred on me but I only want a promise to be kept up.

Sri G. SIVAPPA.—On a point of order.

Mr. DEPUTY SPEAKER.—There is a point of order.

Sri G. N. PUTTANNA.—All points of order seem to be for Congress people and not other people. My rights and privileges are curbed.

Sri G. Sivappa.—I fail to understand the arguments of my hon'ble friend. When the Members of the Opposition have moved amendments, it is our right to oppose them. It cannot be one-sided. According to the Rules of Procedure, we have also a right to speak.

Sri M. Ramappa.—Probably, the Deputy Speaker is not aware of the ruling given by the Speaker. If he had known, this confusion would not have arisen. Probably, there are only 2 or 3 persons who have moved amendments and have not spoken. I suggest that they be given the chance first and then the Chair is at liberty to call others.

Sri Kadidal Manjappa.—I want to know whether this procedure was introduced this year or whether it existed in the previous years also?

Sri G. N. Puttanna.—From the very beginning, that is the procedure followed. Even last year, that was so.

Sri M. Ramappa.—That is the procedure and my submission is that it may not be disturbed now.

†Sri H. M. Channabasappa.—If I may make a submission. There is absolutely no reason way so much discussion of heat is necessary at this stage. Most Hon'ble Members who have given notices of amendment, have spoken and according to the commitment, it is only fair that they should be permitted to speak if they want to do so, either at one stretch or intermittenly as the Chair may deem fit. If the Chair has given a definite ruling that chances would be given in a continuous stretch to the movers of amendment, then such a ruling has to be respected by me, by you and by everybody. If such an assurance has not been given, then, the movers of amendments may be given chances intermittently. That would also be a good debate because alternatively, opposing views would be presented before the House. Otherwise, it would all be either condemnation on the one side or all praise on the other. I do not know of the Speaker's ruling. It is for the Chair to see whether it is so or not. If the Speaker has given such a ruling, then there is no second word on it.

ಶ್ರೀ ಎನ್. ಜಿ. ನರಸಿಂಹೇಗೌಡ.—After Question Hour, ವೆಂಕಟೇಗೌಡರು ಮಾತನಾಡಿದಮೇಲೆ ನಾನು ಮಾತನಾಡಲು ಛಾನ್ಸ್ ಕೊಡಬೇಕೆಂದು ಸ್ಪೀಕರ್‌ರವರನ್ನು ಕೇಳಿದೆ. ಅಮೆಂಡ್‌ಮೆಂಟ್ಸ್ ಮೊದಲು ಮಾಡಿದವರಿಗೆ ಮೊದಲು ಛಾನ್ಸ್ ಕೊಟ್ಟು ಬಾಕಿಯವರಿಗೆ ಕೊಡುವಂತೆ ರೂಲಿಂಗ್ ಕೊಟ್ಟಿದ್ದಾರೆ. ಹಾಗೆಯೇ ಅಮೆಂಡ್‌ಮೆಂಟ್ ಮೊದಲು ಮಾಡಿದವರಿಗೆ First chance ಕೊಡುತ್ತಿದ್ದಾರೆ. Proceedings ತೆಗೆದು ನೋಡಿ.

Sri Kadidal Manjappa.—There is no agreement between this and the other group. If there is a ruling, we are bound by it. In the absence of a ruling, it is left to the discretion of the Chair.

Mr. Deputy Speaker.—Now, some of the Hon'ble Members were expressing that the Hon'ble Speaker had given a ruling that only those Hon'ble Members who had sent in amendments would be given chances first. In a democracy, the House consists of the Ruling Party and the

Opposition. Of Course, I am given to understand that those Hon'ble Members who have tabled amendments from the Opposition Party may speak accordingly on their amendments sent. But the Ruling Party has also a right to express its views, and we cannot after all deny them their chances. The Hon'ble Members who have sent in amendments will also not be deprived of their chances.

Now, I have called upon Sri Gaonkar to speak and he will speak.

Sri S. D. GAONKAR (Karwar).—Mr. Speaker, if you can kindly permit me, I would like to sit and speak.

Mr. DEPUTY SPEAKER.—He can sit and speak.

Sri S. D. GAONKAR.—I rise to support the motion of Thanks moved by my Hon'ble friend Sri A. V. Narasimha Reddy.

Sir, there is a reference in Para 2 of the Address to the border issue. This border issue has been there since the formation of the Linguistic States and there has been some sort of agitation since then. Of course, I have to congratulate the Government for having appointed the four-man committee to go into this Question. The agitation has been there for the last nearly about four years and it would be proper on the part of the Government to get it settled as early as possible.

Sir, nearly 10 to 12 lakhs of Marathi-speaking population is in this area and I personally feel that justice should be done to these people in all possible ways.

In this connection, I would like to humbly bring to the notice of this House that this linguistic minority deserves some sort of consideration at the hands of the Government. As far Government services and other departmental activities are concerned, I find that no proper representation has been given to this minority and I therefore humbly request the Government to see that their case is not neglected.

Sri C. J. MUCKANNAPPA.—What is this some sort of consideration Sir ?

Sri S. D. GAONKAR.—There should not be any impression that these minorities are neglected.

Sri T. VEERAPPA.—Is it communal minority ?

Sri S. D. GAONKAR.—I am speaking of the linguistic minority, not communal minority.

Sir, then I come to the third paragraph. Here, I have got to congratulate the Government for having successfully implemented the second Five-Year Plan. In this connection, I must say that the credit goes to the Government machinery and also to the Public who have co-operacted in all possible ways.

Now, coming to the Third Five-Year Plan, the responsibility is still heavier and as such, I feel that the Government should try to spend the entire amount that has been at our disposal. In this process Sir,

(Sri S. D. GAONKAR)

we are likely to find so many difficulties. For example, the technical staff—we are not in a position to recruit them easily. Or else, the Co-operation from the public may not come in time. Such being the case, care has to be taken to recruit proper personnel for proper job as early as possible.

Then Sir, I come to the next paragraph, the consitution of these taluk boards and village panchayats. In this connection, I would like to bring to the notice of this House that the funds and machinery at the disposal of the taluk boards is not proper. Unless we give them proper funds and right type of machinery, it will be very difficult for us to judge whether this experiment has been a success or failure. In order to give them proper facilities and proper encouragement, I feel that there must be enough funds at their disposal. For example, maintenance of roads is given to the taluk boards. So also, some other works, and if they are not to have the necessary machinery and right type of personnel, they will not be in a position to maintain these roads and carry out other works entrusted to them. I therefore feel that proper personnel and proper guidance should be given to the taluk boards at all levels.

I come to the paragraph 10 of the Address. Here, I find that reference has been made regarding the development of fisheries and boat-building. In this connection, even in my last speech, I had mentioned that the fisheries Department should take all possible care to see that this particular trade is developed into a big industry. I learn that from the South Kanara District, a lot of fish is being exported to foreign countries and it has been a source of earning foreign exchange. As far as my district is concerned, I find that little importance is given to this foreign export. Because, proper facilities are not given to them and there are no canning factories and proper preservation facilities also are not there. In order to popularise this trade and in order to develop into a big industry, I feel that Government should give a proper encouragement and help to the local fishermen and fisheries societies and also people who come forward to develop this into a major industry.

Regarding boat-building, there has been much agitation as far as my district is concerned, because the boats built for the Present are not useful for deep-sea fishing; to go to a distance of about 20 or 30 miles in rough weather, our fishermen will require boats of a considerably bigger size. So, the present boats which have been built at Karwar or Mangalore are not sufficient for the purpose. So, the boats which are at present built there, may be discontinued and bigger boats should be built in their places and they should be also properly mechanised boats.

Sir, it has been a happy feature to know that the Japanese Government was kind enough to send a team of Japanese expert

fishermen to India. They had come to Karwar also and they have surveyed the whole coast. When I had an opportunity to discuss with them, they were of the opinion that there were ample opportunities for the Government of Mysore and also for the public of Mysore to develop this into a major industry. They have surveyed the whole coast of Mysore State and I feel that their help may be teken by the Government in making this industry a major one,

Regarding preservation, I find that some ice plants have beeu established here and there, but that is not sufficient. Even in my last speech, I had mentioned that the ice plants should be made availabe to the fishermen at a distance of at least 5 miles from their places. We find that there are hardly two ice plants in my district, one in Bhatkal and another at Karwar. The coast line being nearly 80 to 100 miles, I feel that more ice plants should be established and the fishermen should be given facilities to preserve their catch.

Comming to road facilities, when the fishermen get considerable fish they are not in a position to export them on account of poor communication. So, all the fishing places should be connected to the main roads so that the fishermen can conveniently export their catch to distant places and popularise their trade,

Regarding communication, as I have mentioned often, nearly 85 per cent of the area of my district is covered by forest. If at all, there are some roads, they are just like foot-paths and they are not properly developed. So my district needs greater attention so far as communication is concerned and Government should try to have as much new roads as possible. I have got to congratulate Central Government for having given us a cement concrete road from Hubli to Karwar. They are also trying to expand it and make it a 32 ft. broad road. This road is mainly used for carrying ore from Hubli to Karwar, Belekeri and other ports. The next road from Sadashivgad to Londa is being developed as an all-weather road and it will be used by the mining industry for transporting ore to the ports. Taking into consideration, these two main roads and the West Coast Highway, I feel that communication in our district is very poor and it requires greater attention.

Regarding development of ports, I am very happy to know that a decision has been taken to convert the Mangalore port into an all-weather port and Karwar into an intermediate port. The Governor was pleased to say that nearly about 5 lakhs tons of ore and cargo will be handled by Karwar port. I personally feel that there is ample scope for developing so many small ports from Karwar to Bhatkal because for the present, iron ore is being exported only from Karwar, Belekeri and Honavar. There is also a proposal to make use of some small ports to export iron ore. To make the best use of these ports and to get the maximum benefit from them, they should be connected to the main roads as early as possible, and they should be developed in such a way that the fishing industry is not affected in any way.

(Sri S. D. GAONKAR)

Then I come to the Sharavathy Valley project. Government deserve all congratulations for keeping up to Schedule. As far as this Sharavathy Valley project is concerned, I feel that I have a better claim Over this Project, because it falls in my district, but unfortunately my district is not in any way benefited by this Project. Only Sirsi Sidapur, Haliyal and Bhatkal are benefited by this Project and the rest of this District is not benefited. I feel that by the times it is completed the Government should give first preference to this district and see that major industries like aluminium industry and some other industries are established here because there is ample scope to establish them in my District.

Then, there was a reference to Kalinadi project. By this project, a lot of area containing rich manganese ore is likely to be submerged. I request Government to exploit this area as eraly as possible and get the fullest benefit out of it. If it is not possible for the Government machinery to exploit this area, the private bodies should be encouraged and they should see that the whole area is exploited and benefit is taken. The Board of Mineral Development also should take proper care of this area and exploit it as early as possible.

Then my friend was particular that I should speak about the Medical Department. As far as this Department is concerned, I must say, that is not properly managed. There is no proper discipline in the department and I feel that it requires a little tightening up.

It will be seen that there are a number of dispensaries in my district without doctors. Some of the health centres also are without doctors. In some dispensaries, we find doctors, but they do not have proper equipments and medicines. Since most of the area in our district is forest area, the persons there require medical aid and as such if it is not possible for Government to post Proper doctors to the dispensaries and give them proper medicines, what is the use of a department of this type?

So, I personally feel that the Government should see as far as these forest areas or the hill tracts are concerned, first preference is given to these places and sufficient number of doctors are posted there. In this connection, I would like to mention one thing. It has come to my notice also that the doctors from the cities are not prepared to go to the villages and serve there. In this connection, I personally feel that a particular Percentage of seats in the Medical College should be reserved for students coming from the forest area. If that is done, the problem will be solved.

Regarding medical treatment in hospital, I should say I was not satisfied with it. I was in Victoria Hospital for some days. If that is the fate of an M. L. A., I cannot imagine the fate of poor people who go to hospital for treatment. (Interruption). My friend says that it is only one-way traffic to Victoria Hospital, that people who go there can never

come back: I do not know whether it is true. I have stayed there for 5 or 6 days. Anyway, with my little experience, I feel that proper care is not taken of the patients. I feel that the doctors should pay proper attention to the health of the people. After all, a man goes there not for anything else but for the sake of health. The Government should tighten up the machinery and see that proper care is taken of the patients by the medical people.

Regarding revision of scales of pay, I feel that the policy of the Government should be to feed those who are ill-fed and not those who are well fed. Persons who are already receiving more than Rs. 500 are benefited and not a poor official who is getting Rs. 100 or 150. So, the policy ought to have been different, liberal attitude ought to have been taken as far as the low paid Government servants are concerned. One feels that there is some benefit given, but actually, the low paid officials are not getting any sort of benefit. I would request Government to see that some benefits are given to low paid servants rather than to high paid servants.

With these remarks, I thank the Chair for having given me an opportunity to speak.

4-30 P.M.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜಮನೆತನಕ್ಕೂ ನಮ್ಮ ಮೈಸೂರು ದೇಶ ರಾಜ್ಯಪಾಲರಿಗೂ ನನ್ನ ಪೂರ್ಣವಾದ ಗೌರವವಿದೆ. ಆದರೆ ರಾಜ್ಯಪಾಲರು ಮಾಡಿರುವ ಭಾಷಣ ಕನ್ನಡ ಬಾಲಬೋಧೆಯಲ್ಲಿ ಹೇಳುವಂತೆ ‘ಹೇಳಿ ಬರೆಯಿಸಿ’ ಅಥವಾ ‘ಬರೆದು ಓದಿಸಿ’ ಎನ್ನುವ ಹಾಗೆ ಇದೆ. ಒಟ್ಟು ಭಾಷಣವನ್ನು ಓದಿದರೆ ನೀರಿನಲ್ಲಿ ಬೆರಳನ್ನು ಅದ್ದಿ ಚೀಪಿದರೆ ಎಷ್ಟು ರುಚಿಯಾಗಿರುತ್ತದೆಯೋ ಅಷ್ಟು ರುಚಿಯಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳಬೇಕಾಗಿದೆ. ನಮ್ಮ ಲೋಕಸಭೆಯ ಅಧ್ಯಕ್ಷರಾದ ಶ್ರೀಮಾನ್ ಎಂ. ಅನಂತಶಯನಂ ಅಯ್ಯಂಗಾರ್ಯರು, 1–1–61ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ, ಈ ರೀತಿ ಹೇಳಿರುತ್ತಾರೆ:

> ‘‘ಶಾಸನ ಸಭಾಧ್ಯಕ್ಷರುಗಳು ನಿಷ್ಪಕ್ಷಪಾತದಿಂದಿದ್ದು ಶಾಸನ ಸಭೆಯ ಎಲ್ಲರ ಹಿತವನ್ನೂ ಸಮನಾಗಿ ರಕ್ಷಿಸಬೇಕೆಂದೂ, ಈ ಮೂಲಕ ಇಡೀ ದೇಶದಲ್ಲಿ ಎಲ್ಲರ ಹಿತವನ್ನೂ ಸಮನಾಗಿ ರಕ್ಷಿಸಿದಂತಾಗುವುದು.’’
>
> ‘‘ನಿರಾಶೆಯೇ ವಿರೋಧ ಪಕ್ಷಗಳು ನೇರಕ್ರಮ ಕೈಗೊಳ್ಳಲು ಕಾರಣವಾಗುವುದರಿಂದ ಆಡಳಿತ ಪಕ್ಷವು ಮುಖ್ಯ ವಿಷಯಗಳಲ್ಲಿ ವಿರೋಧ ಪಕ್ಷವನ್ನು ತನ್ನೊಡನೆ ಕರೆದೊಯ್ಯಲು ಸಾಧ್ಯವಾದಷ್ಟೂ ಪ್ರಯತ್ನಿಸಬೇಕೆಂದೂ ಇದರಿಂದ ದೇಶದ ವಿಷಯಗಳಲ್ಲಿ ತಮ್ಮ ಮಾತಿಗೂ ಬೆಲೆಯುಂಟೆಂಬ ಭಾವನೆ ವಿರೋಧಪಕ್ಷದಲ್ಲಿ ಉಂಟಾಗುವುದು.’’
>
> ‘‘ಶಾಸನ ಸಭೆಯಲ್ಲಿರುವ ಪ್ರತಿಸದಸ್ಯನೂ ಆಡಳಿತ ಪಕ್ಷಕ್ಕೆ ಸೇರಿರಲಿ, ವಿರೋಧ ಪಕ್ಷದಲ್ಲಿರಲಿ, ಅವರು ಮಂತ್ರಿಯಷ್ಟೇ ಜನರ ಪ್ರತಿನಿಧಿಯೆಂಬುದನ್ನು ಮರೆಯಬಾರದು, ವಿರೋಧಪಕ್ಷ ಮತ್ತು ಆಡಳಿತ ಪಕ್ಷದಲ್ಲಿನ ಒಂದೇ ವ್ಯತ್ಯಾಸವೆಂದರೆ ಆಡಳಿತ ಪಕ್ಷದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿರುವರೆಂಬುದು’’

ಎಂದು ಹೇಳಿದ್ದಾರೆ. ಇಷ್ಟನ್ನು ಹೇಳಿ ಇದರಿಂದ ಏನು ಬೇಕಾದರೂ ತಿಳಿದುಕೊಳ್ಳಬಹುದೆಂಬುದನ್ನು ತಮಗೇ ಬಿಟ್ಟಿರುತ್ತೇನೆ.

L. A. New

(ಶ್ರೀ ಜಿ. ಎಸ್. ಪುಟ್ಟಣ್ಣ):

ಸ್ವಾಮಿ, ನಮ್ಮ ದೇಶದಲ್ಲಿ ಮುಖ್ಯವಾಗಿ ಬೇಕಾಗಿರುವುದು ಹೊಟ್ಟೆಗೆ, ಬಟ್ಟೆಗೆ ಮತ್ತು ವಸತಿಗೆ ಮನೆ. ಈ ವಿಚಾರವನ್ನು ಅನೇಕ ಮಿತ್ರರು ಹೇಳಿದ್ದಾರೆ. ಆಹಾರೋತ್ಪತ್ತಿಯ ವಿಚಾರದಲ್ಲಿ ಮೊದಲಿನಿಂದಲೂ ದೇಶದಲ್ಲಿ ಎಷ್ಟು ಬೆಳೆಯುತ್ತಿತ್ತೋ ಸ್ವಲ್ಪ ಹೆಚ್ಚು ಕಡಿಮೆ ಅದೇ ರೀತಿ ಬೆಳೆಯುತ್ತಿದೆ. ಆದರೆ ಸರ್ಕಾರದವರು ಕೆಲವು ಜನ ಬಂಡವಾಳಸ್ಥರಿಗೆ ಎಷ್ಟು ಬೇಕಾದರೂ ಕೊಂಡು ಕೊಂಡು ದಾಸ್ತಾನು ಮಾಡಲು ಅವಕಾಶ ಕೊಟ್ಟಿರುವುದರಿಂದ artificial control ಮಾಡಿ ಬೆಲೆಗಳು ಜಾಸ್ತಿಯಾಗುತ್ತಿವೆ. ಇದರಿಂದ ಬೆಳೆಯುತಕ್ಕ ರೈತನಿಗೆ ಏನೂ ಲಾಭ ಬರುತ್ತಿಲ್ಲ. ಜನರಲ್ಲಿ ಕೊಂಡು ತಿನ್ನುವುದಕ್ಕೆ ಹಣವಿಲ್ಲ. ಒಂದು ಕಡೆ ಬೆಲೆಗಳು ಹೆಚ್ಚುತ್ತಿವೆ. ಮತ್ತೊಂದು ಕಡೆ inflation ಬಂದಿದೆ. ಹಣಗಾರರು ದಾಸ್ತಾನು ಮಾಡಿ ಬೆಲೆಗಳು ಹೆಚ್ಚಿದಾಗ ಮಾರುತ್ತಿದ್ದಾರೆ. ಜನ ಹಾಳಾಗುತ್ತಿದ್ದಾರೆ. ಲೋಕೋಪಯೋಗ ಶಾಖೆಯ ಮಂತ್ರಿಗಳು ಶರಾವತಿ ಮುಂತಾದ ದೊಡ್ಡ ದೊಡ್ಡ ಯೋಜನೆಗಳನ್ನೂ ತೆಗೆದುಕೊಳ್ಳುತ್ತಿದ್ದಾರೆ. ಇವುಗಳಿಂದ ತಕ್ಷಣ ಫಲ ಸಿಕ್ಕುವುದಿಲ್ಲ. ಅನೇಕ ಜನ ಸದಸ್ಯರು ಈ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನದಿಗಳಿರುವ ಕಡೆ ದಂಡೆಗಳಲ್ಲಿ ಇರಿಗೇಷನ್ ಪಂಪ್ ಹಾಕಲು ಅವಕಾಶ ಕೊಟ್ಟು, ವಿದ್ಯುತ್ತನ್ನು ಒದಗಿಸಿದರೆ ಆಹಾರೋತ್ಪಾದನೆ ಹೆಚ್ಚುವುದಕ್ಕೆ ಸಾಧ್ಯವಾಗುತ್ತದೆ. ಇದರ ಕಡೆಗೆ ಸರ್ಕಾರದವರ ಲಕ್ಷ್ಯ ಹೋಗುವ ಹಾಗೇ ಕಾಣುವುದಿಲ್ಲ.

ರೈತರಿಗೆ ಇರುವ ದೊಡ್ಡ ಕಷ್ಟವೆಂದರೆ ಎತ್ತುಗಳನ್ನು ಕೊಂಡುಕೊಳ್ಳುವುದು. ಒಂದು ಜೊತೆ ಎತ್ತು 400—500 ರೂಪಾಯಿಗಳಿಗೆ ಸಿಕ್ಕುತ್ತಿದ್ದುದು 1000—1500 ರೂಪಾಯಿ ಬೆಲೆ ಆಗಿದೆ. ಹಿಂದಿನ ಅಸೆಂಬ್ಲಿ ಅಧಿವೇಶನದಲ್ಲಿ ನಾನು ಮುಖ್ಯ ಮಂತ್ರಿಗಳಿಗೆ ಒಂದು ವಿಷಯವನ್ನು ಹೇಳಿದ್ದೆ. ಜಪಾನ್ ದೇಶಕ್ಕೆ ನಮ್ಮ ಇಂಡಿಯಾ ದೇಶದ ಮಂತ್ರಿಗಳೊಬ್ಬರು ಹೋಗಿದ್ದಾಗ ಅವರು ಒಂದು ಟ್ರಾಕ್ಟರನ್ನು ಬಹುಮಾನವಾಗಿ ಕೊಟ್ಟಿದ್ದಾರೆ. ಒಬ್ಬ ಬಡ ರೈತ ಇಂಥ ಟ್ರಾಕ್ಟರನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿದೆ. ಇಂಥಾ ಟ್ರಾಕ್ಟರುಗಳನ್ನು ನಮ್ಮ ದೇಶದಲ್ಲಿ ಜಪಾನ್ ಸಂಸ್ಥೆಯ ನೆರವಿನಿಂದ ತಯಾರಿಸಲು ಒಬ್ಬ ಕೈಗಾರಿಕೋದ್ಯಮಿಯನ್ನು ಕಳುಹಿಸಿ ಎಂದು ಮುಖ್ಯಮಂತ್ರಿಗಳಿಗೆ ಹೇಳಿದೆ. ಜಪಾನ್ ದೇಶದ ಸಂಸ್ಥೆಯವರು ಇದಕ್ಕೆ ಒಪ್ಪಿಕೊಂಡಿದ್ದಾರೆ. ಸ್ಕೂಟರ್ ತಯಾರುಮಾಡಲು ಯಾವರೀತಿ ಅವಕಾಶ ಕಲ್ಪಿಸಿದ್ದಾರೆಯೋ ಅದೇ ರೀತಿ ಟ್ರಾಕ್ಟರುಗಳನ್ನು ತಯಾರಿಸುವುದಕ್ಕೆ ವ್ಯವಸ್ಥೆಮಾಡಿದರೆ ರೈತರಿಗೆ 500—1000 ರೂಪಾಯಿಗಳಿಗೆ ಒಂದು ಟ್ರಾಕ್ಟರ್ ಸಿಕ್ಕುವುದಕ್ಕೆ ಅವಕಾಶವುಂಟಾಗುತ್ತದೆ. ಇಂಥದ್ದನ್ನು ಮಾಡುವುದಕ್ಕೆ ನಮ್ಮ ಸರ್ಕಾರದವರಿಗೆ ಮನಸ್ಸಿಲ್ಲ. Industrial development ಎಂದು ಲಕ್ಷಾಂತರ-ಕೋಟ್ಯಾಂತರ ರೂಪಾಯಿಗಳನ್ನು ಲುಕ್ಸಾನು ಆಗುವಂಥ ಕಡೆ ವಿನಿಯೋಗಿಸುತ್ತಾರೆ. ಅದೇ ಹಣವನ್ನು ರೈತನ ಅಭಿವೃದ್ಧಿಗೆ ಉಪಯೋಗಿಸಿದರೆ ಒಳ್ಳೆಯದೆನ್ನುವ ವಿಚಾರ ಮನಸ್ಸಿಗೆ ಬಂದಿಲ್ಲ. ನಮ್ಮ ಸರ್ಕಾರದವರು ಜಪಾನ್ ದೇಶದ ಕಂಪೆನಿಗಳೊಂದಿಗೆ ಪತ್ರವ್ಯವಹಾರ ಮಾಡಿ, ಅವರ ನೆರವಿನಿಂದ ಸಣ್ಣ ಟ್ರಾಕ್ಟರುಗಳನ್ನು ತಯಾರಿಸಲು ಅವಕಾಶ ಮಾಡಿದರೆ ಅದರಿಂದ ರೈತರಿಗೆ ದೊಡ್ಡ ಉಪಕಾರವಾಗುತ್ತದೆ. ನಾನು ಈ ವಿಷಯವನ್ನು ಮುಖ್ಯ ಮಂತ್ರಿಗಳಿಗೆ ಹಿಂದಿನ ಅಧಿವೇಶನದ ಕಾಲದಲ್ಲಿ ತಿಳಿಸಿದ್ದರೂ ಅವರು ಅದಕ್ಕೆ ಗಮನ ಕೊಟ್ಟ ಹಾಗೆ ಕಾಣುವುದಿಲ್ಲ. ನಾನು ಜಪಾನ್ ಸಂಸ್ಥೆಯೊಂದರ ಸಂಗಡ ಪತ್ರವ್ಯವಹಾರ ಮಾಡಿದ್ದೇನೆ. ಒಬ್ಬ ಕೈಗಾರಿಕೋದ್ಯಮಿ ಸಹ ಮುಂದೆ ಬರಲು ತಯಾರಾಗಿದ್ದಾರೆ. ಇದಕ್ಕೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ.

ಆಹಾರಾಭಾವದಿಂದ ದೇಶದಲ್ಲಿ ಕಳ್ಳತನಗಳು ಜಾಸ್ತಿಯಾಗಿವೆ. ರೈತನು ಬೆಳೆದ ಬತ್ತ, ರಾಗಿತೆನೆ, ತೋಟಗಳಲ್ಲಿರುವ ಹಣ್ಣುಕಾಯಿಗಳು, ಇವನ್ನೆಲ್ಲಾ ರಾತ್ರಿಹೊತ್ತು ಕೊಯ್ದು

ಕೊಂಡು ಹೋಗುತ್ತಿದ್ದಾರೆ. ಪೋಲೀಸಿನವರಿಗೆ ದೂರು ಕೊಟ್ಟರೆ unidentifiable uninvestigatable ಎಂದು ಹೇಳುತ್ತಾರೆ. ಇದಕ್ಕೆ ಕಾರಣ ನಮ್ಮ ದಕ್ಷತೆಯಿಲ್ಲದ ಸರ್ಕಾರ.

ಆಡಳಿತ ವಿಚಾರಕ್ಕೆ ಬಂದರೆ ಯಾವ ಇಲಾಖೆಯನ್ನೇ ತೆಗೆದುಕೊಳ್ಳಿ, ಕೋಟ್ಯಾಂತರ ರೂಪಾಯಿಗಳನ್ನು A.C. Bill ಗಳಲ್ಲಿ ಡ್ರಾ ಮಾಡಿದ್ದಾರೆ. ಆದರೆ ಅದಕ್ಕೆ N.D.C. Bills ಮಾಡಿಲ್ಲ. ನಮ್ಮ ಹಣಕಾಸಿನ ಮಂತ್ರಿಗಳು ಎಷ್ಟೋ ಅನುಭವವಿರುವರು. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ 15-20 ಕೋಟಿ ರೂಪಾಯಿಗಳು reconcile ಆಗಿಲ್ಲವೆಂದು Accountant General ಹೇಳುತ್ತಾರೆ. ಈ ರೀತಿ ಡ್ರಾ ಮಾಡಿರುವ ಹಣ ಖರ್ಚಾಗಿದೆಯೇ, ಇಲ್ಲವೇ ನ್ಯಾಯವಾಗಿ ಉಪಯೋಗವಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಕೇಳುವವರೇ ಇಲ್ಲ. ಯಾರೂ ದಿಕ್ಕೇ ಇಲ್ಲವೆಂದು ಕಾಣುತ್ತದೆ. ಅಕೌಂಟೆಂಟ್ ಜನರಲ್ ಶಂಖನಾದ್ಯ ಹೊಡೆದರೂ ಕೇಳುವವರೇ ಇಲ್ಲ. A.C. ಬಿಲ್ ಮೇಲೆ ಹಣ ಡ್ರಾ ಮಾಡಿ N.D.C. Bill ಕಳಿಸಿಲ್ಲವೋ ಅಂಥವರ ಸಂಬಳ ನಿಲ್ಲಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲವೇ ! ಪಬ್ಲಿಕ್ ಅಕೌಂಟ್ಸ್ ಸಮಿತಿ ವರದಿಯಲ್ಲಿ ಎಷ್ಟೋ ವಿಷಯಗಳನ್ನು ಸೂಚನೆ ಮಾಡಲಾಗಿದೆ. ಆದರೆ ಇವೊತ್ತಿನವರೆಗೂ ಅದನ್ನು ಯಾರೂ ಪರಿಶೀಲನೆಗೇ ತೆಗೆದುಕೊಂಡಿಲ್ಲ. ಅಕೌಂಟೆಂಟು ಜನರಲ್ಲರವರೂ ಕೂಡ ಈ ಬಗ್ಗೆ ಹೇಳುತ್ತಿದ್ದರೂ, ಯಾವ ಪೋಗ್ರಾಂ ಕೂಡ ಇಲ್ಲ. A. C. Billsಗಳನ್ನು ಪರಿಶೀಲಿಸಿ ಇಲ್ಲಿಯವರೆಗೂ N. D. C. Bills ಗಳನ್ನೂ ಕೂಡ ಕೊಟ್ಟಿಲ್ಲ. ಪಿ.ಡಬ್ಲ್ಯು.ಡಿ. ಒಂದರಲ್ಲೇ 18,976 ಕೇಸುಗಳಲ್ಲಿ ಸುಮಾರು ಹದಿನೈದು ಕೋಟಿ ರೂಪಾಯಿಗಳಷ್ಟು ಬಾಕಿ ನಿಂತಿದೆ. ಹೀಗೆ ಬಾಕಿ ನಿಂತಿರುವುದಕ್ಕೆ ಕಾರಣರಾದ ಅಧಿಕಾರಿಗಳ ಸಂಬಳವನ್ನು ನಿಲ್ಲಿಸುವುದು ಸೂಕ್ತವಾಗಿ ತೋರುತ್ತದೆ. ಸುಮಾರು 25 ಕೋಟಿ ರೂಪಾಯಿಗಳಷ್ಟು ಲೆಕ್ಕಾಚಾರವೇ ಆಗಿಲ್ಲ. ಇದಕ್ಕೆಲ್ಲಾ ಯಾರು ಜವಾಬುದಾರರು ? ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರು ಎತ್ತುಗಳನ್ನು ಕೊಂಡುಕೊಂಡರು. ಆದರೆ ಇದರ ಬಗೆಗೆ ಪೇಮೆಂಟು ಮಾಡಿದ ರಶೀತಿಗಳೇ ಇಲ್ಲ. ಇಂತಹವನ್ನೂ ಕೇಳದೇ ಇದ್ದರೆ ಅಧಿಕಾರಿಗಳನ್ನು Control ಮಾಡಲು ನಿಮ್ಮಲ್ಲಿ ಶಕ್ತಿ ಇದೆಯೇ? ನಾನು ಹೇಳುವುದರಲ್ಲಿ ತಪ್ಪಿದ್ದರೆ ನಾನು ಅಸೆಂಬ್ಲಿಗೆ ರಾಜೀನಾಮೆ ಕೊಡುತ್ತೇನೆ. ನಿಮ್ಮಲ್ಲಿ ತಪ್ಪಿರುವುದು ಸಾಬೀತಾದರೆ ನೀವುಗಳು ಮಂತ್ರಿ ಸ್ಥಾನವನ್ನು ಬಿಟ್ಟು ರಾಜೀನಾಮೆ ಕೊಡಲು ತಯಾರಾಗುವುದು ಉತ್ತಮ.

18,976 ಕೇಸುಗಳು ಬಾಕಿ ಇರುವುದರಲ್ಲಿ ಸುಮಾರು 4,800 ಕೇಸುಗಳಲ್ಲಿ ಎಸ್ಟಿಮೇಟುಗಳೇ ಇಲ್ಲ, Original Estimate 5,000 ಎಂದು ಇದ್ದದ್ದು Final Estimate 25,000 ಆಗಿದೆ. ಇನ್ನು ಜನರಲ್ ಅಡ್ಮಿನ್‌ಸ್ಟ್ರೇಷನ್ ಬಗ್ಗೆ ಹೇಳುತ್ತೇನೆ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಮಾಲ ಮರಿಯಪ್ಪನವರು ಇಲ್ಲೇ ಇದ್ದಾರೆ, ಸಂತೋಷ. ಸೊಸೈಟಿಗಳಿಂದ ಎಷ್ಟೋ ದುಡ್ಡು ಹಾಳಾಗುತ್ತಿದೆ. ತುಮಕೂರು ಜಿಲ್ಲೆಯೊಂದರಲ್ಲೇ 66 ಸೊಸೈಟಿಗಳು ಈ ಹಿಂದೆ ಲಿಕ್ವಿಡೇಟು ಆಗಿದೆ ಎಂದು ಹೇಳಿದ್ದೆ. ಇದೂ ಅಲ್ಲದೆ Grain Banks ಎಂದು ಬೇರೆ ಮಾಡಿದ್ದಾರೆ. ಅದರಲ್ಲಿ ಒಂದು ಕಾಳೂ ಸಿಗುತ್ತಿಲ್ಲ. ಈ ರೀತಿ ಇದೆ ಎಂದು ರಿಜಿಸ್ಟ್ರಾರರವರಿಗೆ ಕಾಗದ ಬರೆದರೂ ಏನೂ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ತುರುವೇಕೆರೆಯ ಒಂದು ಉದಾಹರಣೆ ಹೇಳುತ್ತೇನೆ. ಅಲ್ಲಿನ ಒಂದು ಸೊಸೈಟಿಯಲ್ಲಿ Falsification of accounts ಸುಳ್ಳು ಪತ್ರ ಬರೆದು, Forgery ಮಾಡಿ ಪತ್ರ ಬರೆದು ರಿಜಿಸ್ಟರು ಮಾಡಿರುವ ಸುದ್ದಿಯನ್ನು ಸೊಸೈಟಿ ರಿಜಿಸ್ಟ್ರಾರ್ರವರ ಗಮನಕ್ಕೆ ತಂದರೂ ಕೂಡ ಇವೊತ್ತಿನವರೆಗೂ ತಕ್ಕ ಕ್ರಮವನ್ನೇನೂ ತೆಗೆದುಕೊಳ್ಳದೇ ಇರಲು ಕಾರಣವೇನು ?

ಆಮೇಲೆ ಸರಕಾರಿ ನೌಕರರುಗಳಿಗೆ ದಿನಂಪ್ರತಿ ಮಂತ್ರಿಗಳು ಟೂರು ಮಾಡುವುದರಿಂದ ಬಹಳ ಕಷ್ಟಕ್ಕೆ ಸಿಕ್ಕಿ ಅವರ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುವುದಕ್ಕೆ ಆಗುತ್ತಿಲ್ಲ. This is interference in ore Day-to-Day demonstration.

(ಶ್ರೀ ಬಿ. ಎಚ್. ಪುಟ್ಟಣ್ಣ)

ಇನ್ನೊಂದು ಉದಾಹರಣೆ ಹೇಳುತ್ತೇನೆ. ಒಂದು ತಾಲ್ಲೂಕಿನಲ್ಲಿ ಎಲೆಕ್ಷನ್ನು ನಡೆಯಿತು. ಆ ತಾಲ್ಲೂಕು ಬೋರ್ಡಿನಲ್ಲಿದ್ದ ಒಬ್ಬರು ಕಾಂಗ್ರೆಸ್ ಪಕ್ಷದವರು ಮಂತ್ರಿಗಳಿಗೆ ಬೇಕಾದವರು ಎಂದು ಅಲ್ಲಿನ ತಹಶೀಲುದಾರರಿಗೆ ಹೇಳಿ ಅಲ್ಲಿ ವೋಟು ಮಾಡಿದ್ದ 200 Ballot Papers ಗಳನ್ನು ಬೇರೆ ಒಂದು ತಾಲ್ಲೂಕಿಗೆ ಬದಲಾವಣೆಯಾಯಿತು. ಹೀಗೇಕೆ ಕಳುಹಿಸಿಕೊಟ್ಟರು ಎನ್ನುವುದಕ್ಕೆ 4ನೇ ತಾರೀಖು ಜೂನು 1930 ರಲ್ಲಿ ನಾನು ಚೀಫ್ ಸೆಕ್ರೆಟರಿಯವರಿಗೆ ಕಾಗದ ಬರೆದಿದ್ದರೂ ಇಲ್ಲಿಯವರೆಗೂ ಏನು ಕ್ರಮ ಕೈಗೊಂಡರು ಎನ್ನುವುದಕ್ಕೆ ಇದುವರೆಗೆ ನನಗೆ ಗೊತ್ತಾಗಲಿಲ್ಲ. ಅವರು ಕಾಂಗ್ರೆಸ್ಸು ಕ್ಯಾಂಡಿಡೇಟ್ ಆಗಿದ್ದರಿಂದ ಏನೂ ಆಗಲಿಲ್ಲ. ಆದರೆ P. S. P.ಗೆ ಸೇರಿದವರಾಗಿದ್ದರೆ ಬೇಗನೆ ಕ್ರಮ ತೆಗೆದುಕೊಳ್ಳುತ್ತಿದ್ದರೋ ಏನೋ. ಹೀಗೆ ಪಾವಗಡದಲ್ಲಿನ ಸೊಸೈಟಿಯಲ್ಲಿ ತುಮಕೂರಿನಲ್ಲಿರುವ ಸೊಸೈಟಿಯಲ್ಲಿ ತುರುವೇಕೆರೆಯಲ್ಲಿರುವ ಸೊಸೈಟಿಯಲ್ಲಿ ಬೇಕಾದಷ್ಟು Misappropriationಗಳಾಗಿವೆ. ಕೆಲವು ಸೊಸೈಟಿಗಳಲ್ಲಿ ಹದಿನೈದು ವರ್ಷಗಳಾಗಿದ್ದರೂ ಜನರಲ್ ಬಾಡಿ ಮೀಟಿಂಗು ಆಗಿಲ್ಲ, ಈ ಸೊಸೈಟಿಗಳಲ್ಲೆಲ್ಲಾ ಪುಢಾರಿಗಳ ಪ್ರಭಾವವೇ ಹೆಚ್ಚಾಗಿದೆ. ಆಡಿಟರುಗಳು ಸರಿಯಾಗಿ ಲೆಕ್ಕವನ್ನು ತನಿಖೆ ಮಾಡುವವರು ಬಂದರೆ ಅವರನ್ನು ಮತ್ತು ಅವರಿಗೆ ಸೇರಿದ ಅಸಿಸ್ಟೆಂಟು ರಿಜಿಸ್ಟ್ರಾರರನ್ನೂ ನಿಸ್ಪೃಹತೆಯಿಂದ ಕೆಲಸ ಮಾಡಿದ್ದರೂ ಎರಡು ತಿಂಗಳಿನೊಳಗೇ ಬೇರೆ ಕಡೆಗೆ ವರ್ಗಾಯಿಸಿಬಿಡುತ್ತಾರೆ. ಈ ರೀತಿ ನಡೆಯುತ್ತಿದೆ. ಈ ಸೊಸೈಟಿಗಳ ಆಡಳಿತದ ವ್ಯವಹಾರ. ಇದರಿಂದ ನಮ್ಮ ದೇಶದ ರೈತನಿಗೆ ಸಹಾಯ ಮಾಡಿದಂತಾಗುತ್ತದೆಯೋ ? ಈ ರೀತಿಯಾಗಿದೆ ಎಂದು ಸೊಸೈಟಿಯ ಒಂದು ಕೇಸನ್ನು ಸರಿಪಡಿಸಬೇಕೆಂದು ಹೇಳಿದ್ದಕ್ಕೆ ಅದನ್ನು ಮಾಡಬಹುದು ಎಂದು ನೋಟೀಸು ಬಂತು. ಆ ಮೇಲೆ ಏನೂ ಆಗಲಿಲ್ಲ, ಹಾಗೇ ನಿಂತುಹೋಯಿತು. ನಮ್ಮ ಫೈನಾನ್ಸ್ ಮಿನಿಸ್ಟರು ಹೇಳುವ *Subjudice* ಏನು ಎನ್ನುವುದು ನನಗೆ ಗೊತ್ತು. ಕೆಲವು ಕಡೆಯಲ್ಲಿ ತಹಶೀಲುದಾರರುಗಳನ್ನು ನಾನು ಕೇಳಲಾಗಿ ಅವರ ಆಡಳಿತದಲ್ಲಿ ಜಾಸ್ತಿ Interference ಆಗುತ್ತಿದೆ ಎಂದು ಹೇಳಿದರು. ಇದನ್ನು ಸರಿಪಡಿಸುವುದು ಉತ್ತಮ.

ತುಮಕೂರಿನಲ್ಲಿನ ಒಂದು ಸೊಸೈಟಿಯಲ್ಲಿ ಜಿಂಕುಶೀಟುಗಳು, ಕಬ್ಬಿಣದ ಸಾಮಾನುಗಳು, ಇತ್ಯಾದಿ ಸಾಮಾನುಗಳೆಲ್ಲಾ ಸರಿಯಾಗಿ ಹಂಚದೆ ಎಲ್ಲಾ ಬ್ಲಾಕುಮಾರ್ಕೆಟ್ಟಿನಲ್ಲೇ ಮಾರಾಟವಾಗುತ್ತಿದೆ. ಹೀಗಾಗುತ್ತಿದೆ ಎಂದು ರಿಜಿಸ್ಟ್ರಾರರಿಗೆ ಬರೆದರೂ ಏನೂ ಉಪಯೋಗವಾಗಲಿಲ್ಲ. ಇದನ್ನು ಈಗಲಾದರೂ ತಡೆಗಟ್ಟುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಲೋಕಲ್ ಸೆಲ್ಫ್ ಗವರ್ನಮೆಂಟಿನ ಮಂತ್ರಿಗಳು ಪಂಚಾಯತಿ ರಾಜ್ಯದ ಬಗ್ಗೆ ಹೇಳಿದ್ದೂ ಹೇಳಿದ್ದೇ. ಈ ಪಂಚಾಯತಿ ರಾಜ್ಯದಲ್ಲಿ ಖಂಡಿತವಾಗಿಯೂ ಹಳ್ಳಿಗಾಡಿನ ರೈತ ಉಳಿಯುವುದಕ್ಕೆ ಆಗುವುದಿಲ್ಲ. ಇದರಿಂದ ಬರೀ ಓಟನ್ನು ಸಂಪಾದಿಸಿಕೊಳ್ಳುವ ಒಂದು ನೆಪವಾಗಿದೆ. ಮತ್ತು ಹಳ್ಳಿಗಳಲ್ಲಿ ಒಬ್ಬರಿಗೊಬ್ಬರಿಗೆ ವ್ಯಾಜ್ಯಗಳನ್ನು ಹೆಚ್ಚು ಮಾಡುವುದಕ್ಕೋಸ್ಕರ ತಂದಿದ್ದಾರೆ ಎಂದು ತೋರುತ್ತದೆ.

ಪಂಚಾಯತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದಾರೆ. ತಾಲ್ಲೂಕು ಬೋರ್ಡಿಗೆ ಮನೆ ಕಟ್ಟುವುದಕ್ಕಾಗಿ 200 ರೂಪಾಯಿಗಳೆಂದು ಕೊಡುತ್ತಾರೆ, ಈ ರೀತಿಯಾಗಿ ಸರಕಾರಿ ಹುಕುಂ ಕೂಡ ಆಗಿದೆ. ತುಮಕೂರು ತಾಲ್ಲೂಕಿನಲ್ಲಿ ಕಾಂಗ್ರೆಸ್ಸಿನವರಾಗಿದ್ದರೆ ಅಂತಹವರನ್ನು Support ಮಾಡಬೇಕೆಂದು ತಹಶೀಲುದಾರರಿಗೆ ಸೂಚನೆ ಕೊಟ್ಟಿರುತ್ತಾರೆ. ಹಾಗೇ ಬಾವಿಗಳಿಗಾಗಿ ಸಹಾಯ ಮಾಡಬೇಕೆಂದಿದೆ. ನೂರಾರು ಮನೆಗಳಿದ್ದರೂ ಅಲ್ಲಿಗೆ ಒಂದು ಬಾವಿ ಕೊಟ್ಟಿಲ್ಲ. ಹೀಗೆ ಕುಡಿಯುವ ನೀರಿನ ಬಾವಿಯನ್ನೂ ಜನತೆಗೆ ಕೊಡದೆ ಹೋದರೆ ಸರಕಾರಕ್ಕೇನಾದರೂ ಮಾನಮರ್ಯಾದೆ ಇದೆಯೋ ಎಂದು ನಾನು

ಕೇಳುತ್ತೇನೆ. ಪಂಚಾಯುತಿಗಳಲ್ಲಿ Top Heavy Expenditure ಜಾಸ್ತಿಯಾಗಿದೆ. ಪಂಚಾಯುತಿಗೆ ಉತ್ಪತ್ತಿ ಕಡಿಮೆಯಾಗಿದೆ.

ಇನ್ನು ಕಾಂಗ್ರೆಸ್ಸು ಪಕ್ಷದ ಸದಸ್ಯರಾಗಿದ್ದರೆ ಅವರು ಸರಕಾರದ ಜೀಪುಗಳನ್ನು ತಮ್ಮ ಸ್ವಂತ ಕೆಲಸಕ್ಕಾಗಿ ಉಪಯೋಗಿಸುತ್ತಿದ್ದಾರೆ. ಈ ರೀತಿ ತಾಲ್ಲೂಕು ಬೋರ್ಡಿನಲ್ಲಿ ಜೀಪುಗಳ ದುರುಪಯೋಗವಾಗುತ್ತಿದೆ ಎಂದು ಡೆಪ್ಯುಟಿ ಕಮಿಷನರವರಿಗೂ ಕಾಗದದಲ್ಲಿ ಬರೆದಿದ್ದರೂ ಏನೂ ಉಪಯೋಗವಾಗಲಿಲ್ಲ. ಯೋಜನಾಶಾಖೆಯ ಉಪ-ಸಚಿವರಾದ ಶ್ರೀ ಲಿಂಗಾರೆಡ್ಡಿಯವರ N.E.S. ಇಲಾಖೆಯಲ್ಲಿ ಜೀಪುಗಳ ನೆಪದಲ್ಲಿ ಬೇಕಾದಷ್ಟು ಹಣವನ್ನು ಮೇಯುತ್ತಿದ್ದಾರೆ. ಇದನ್ನು ಕೇಳುವವರೇ ಇಲ್ಲ.

ಇನ್ನು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್ ವಿಷಯ. ಶ್ರೀಮಾನ್ ಚನ್ನಬಸಪ್ಪನವರು ದೇಶವನ್ನು ಒಂದೇ ಸಾರಿ ಮೇಲಕ್ಕೆ ಎತ್ತಬೇಕು ಎಂದು ಅನೇಕ ಸಭಾಗೃಹಗಳನ್ನು ಅಲ್ಲಲ್ಲಿ ನೆರವೇರಿಸುತ್ತಿದ್ದಾರೆ. ಇವಕ್ಕಾಗಿ ಊರೂರಿಗೂ, ಹಳ್ಳಿ ಹಳ್ಳಿಗೂ ಸಂಚಾರ ಮಾಡುತ್ತಿದ್ದಾರೆ. ಆದರೆ ತುಮಕೂರು ಜಿಲ್ಲೆಯಲ್ಲಿ ಒಂದು ಕೆರೆಯನ್ನೂ ಸಹ ಕಟ್ಟಿಸಿಲ್ಲ. ಈ ಬಗ್ಗೆ ಸುಮಾರು 18,976 ಅಬ್‌ಜಕ್ಷನ್ಸ್ ಆ ಇಲಾಖೆಯಲ್ಲಿ ಪೆಂಡಿಂಗ್‌ನಲ್ಲಿದ್ದರೂ, ಅನೇಕ ಕೆಲಸಕಾರ್ಯಗಳಿಗೆ ಎಸ್ಟಿಮೇಟುಗಳೇ ಆಗಿಲ್ಲ. ಅಲ್ಲಿ ಕೆಲವು ಫೈಲುಗಳೇ ಇಲ್ಲದೆ ಇರುವ ಸ್ಥಿತಿಯಾಗಿದೆ. ಅಂತಹ ಅನ್ಯಾಯಗಳು ಕಂಡುಬಂದಾಗ ಸಂಬಂಧಪಟ್ಟ ಆಫೀಸರುಗಳನ್ನು ಎತಕ್ಕೋಸ್ಕರ ಶಿಕ್ಷೆ ಮಾಡಬಾರದು, ಇದರಿಂದ ಸರ್ಕಾರದವರಿಗೆ ನಿಜವಾಗಿ ಒಳ್ಳೆಯದಾಗುವುದಿಲ್ಲ. ಮೇಲಾಗಿ ಪಿ. ಡಬ್ಲ್ಯು. ಡಿ. ಯಲ್ಲಿ ಸ್ಟಾಕ್ ಚೆಕಿಂಗ್ ಎಂಬುದೇ ಇಲ್ಲ. ಎಷ್ಟು ಕಬ್ಬಿಣ, ಎಷ್ಟು ಸಿಮೆಂಟ್ ಅಲ್ಲಿ ಇತ್ತು! ಎಲ್ಲ ಮಾಯವಾಗಿ ಹೋಗುತ್ತಿರುತ್ತದೆ. ಈ ವಿಷಯ ಮಂತ್ರಿಗಳಿಗೂ ಗೊತ್ತಿದೆ. ಆದರೆ ಇಂತಹ ನಷ್ಟಗಳನ್ನು ಯಾವರೀತಿ ಹೋಗಲಾಡಿಸಬೇಕು, ಇದಕ್ಕೆ ಯಾವರೀತಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂಬ ವಿಚಾರ ಅಷ್ಟಾಗಿ ಮಂತ್ರಿಗಳಿಗೆ ತಿಳಿಯದು ಎಂದು ಕಾಣುತ್ತದೆ. ಏಕೆಂದರೆ ಇವರು ಜೈಲಿನಿಂದ ಏಕ್‌ದಂ ಮಂತ್ರಿಗಳಾಗಿ ಬಂದುಬಿಟ್ಟಿದ್ದಾರೆ. ಆದಕ್ಕೋಸ್ಕರವೇ ಇವರಿಗೆ ಈ ವಿಷಯಗಳನ್ನು ಬಗೆಹರಿಸುವುದು ಕಷ್ಟವಾಗಿದೆ.

ಇನ್ನು ಎಕ್ರೋಚ್‌ಮೆಂಟ್ ವಿಷಯ. ಈ ಬಗ್ಗೆ ಯೂನಿಫಾರಂ ಲಾ ಮಾಡುತ್ತೇನೆಂದು ಹಿಂದೆಯೇ ಹೇಳಿದ್ದರು. ಈ ಎಕ್ರೋಚ್‌ಮೆಂಟ್ ವಿಷಯದಲ್ಲಿ ಏಕರೂಪವಾದ ಕಾನೂನನ್ನು ಈಗಲೂ ಜಾರಿಮಾಡಿದರೆ ಸಾಮಾನ್ಯವಾಗಿ ನಮ್ಮ ಸರ್ಕಾರಕ್ಕೆ ವರ್ಷಕ್ಕೆ ನಾಲ್ಕೈದು ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಈ ರೀತಿ ಆದಾಯ ಬರತಕ್ಕ ಅವಶ್ಯಕವಾದ ಕ್ರಮಗಳನ್ನು ತೆಗೆದುಕೊಳ್ಳದೆ ಜನತೆಯ ಮುಂದೆ ಏಕೆ ಹೋಗಿ ಭಿಕ್ಷೆ ಬೇಡಬೇಕು ? ಆ ರೀತಿ ಸರ್ಕಾರ ಭಿಕ್ಷೆಗೆ ಹೋಗುವ ಪ್ರಮೇಯವೇ ಇರುವುದಿಲ್ಲ.

ಇನ್ನು ಲ್ಯಾಂಡ್ ರೆವಿನ್ಯೂ ಅರಿಯರ್ಸ್ ವಿಷಯವಾಗಿ ಮಾತನಾಡುವುದಾದರೆ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಆ ಬಗ್ಗೆ ಅರಿಯರ್ಸ್ ಎಂಬ ಮಾತೇ ಇಲ್ಲ. ಮೈಸೂರಿನಲ್ಲಾದರೂ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಲಕ್ಷಾಂತರ ರೂಪಾಯಿಗಳ ಬಾಕಿ ಇದೆ. ಇದು inefficiency of Government ಎಂಬದಾಗಿ ಕಾಣುತ್ತದೆ. There is no proper rule. No action. for the last 13 years, Government have not been able to introduce uniform law or amend the land revenue code. I have personally requested the Reveune Minister to amend the law, but he has been keeping quiet. ದೇಶದಲ್ಲಿ ಇದನ್ನು ಜಾರಿಗೆ ತರದೇ ಇದ್ದರೆ, ನಿಜವಾಗಿ ನೀವು ದೇಶವನ್ನೇ ಹಾಳುಮಾಡುತ್ತೀರಿ.

ಇನ್ನು ಲೋನ್ಸ್ ಮತ್ತು ಅಡ್ವಾನ್ಸ್ ವಿಷಯ. ಈಗಿನ ಎಲ್ಲಾ ಲೋಕಲ್ ಬಾಡೀಸ್ ಒಬ್ಬೊಬ್ಬರ ಕೈಲಿ ಸೇರಿಹೋಗಿದೆ. ಇದರಲ್ಲಿ ''ಏನೋ ನಂಜಣ್ಣ ಅಂದರೆ ಬಂದವ್ನೇ ಗುಂಜಣ್ಣ''

(ಶ್ರೀ ಜಿ. ಎನ್. ಪುಟ್ಟಣ್ಣ)

ಎಂಬಂತಾಗಿದೆ. ಒಂದು ವೇಳೆ ಸರ್ಕಾರದವರು ತಮ್ಮ ಕಡೆಯುವರಿಗೇನೇ ಸಾಲ ಕೊಡದಿದ್ದರೆ, ನಾಳೆ ಇವರಿಗೆ ಅವರು ಓಟು ಕೊಡುವುದಿಲ್ಲ. ಇವತ್ತಿನವರೆಗೂ ಅವರಿಗೆ ಕೊಟ್ಟ ಬಾಕಿ ವಸೂಲಾಗಲ್ಲಿಲ್ಲ. ಎಷ್ಟು ಬಾಕಿ ಇನ್ನೂ ವಸೂಲಾಗಬೇಕಾಗಿದೆ ಎಂಬುದಕ್ಕೆ ನನ್ನಲ್ಲಿ ಪ್ರಿಂಟೆಡ್ ಲಿಸ್ಟ್ ಬೇರೆ ಇದೆ. ಈ ಸಭೆ ಆ ಅಂಕಿ-ಅಂಶಗಳನ್ನು ತಿಳಿಯಲು ಅಪೇಕ್ಷಿಸಿದರೆ ತಿಳಿಸಲು ನಾನು ಸಿದ್ಧನಾಗಿದ್ದೇನೆ.

ಇನ್ನು ಇಂಡಸ್ಟ್ರಿಯಲ್ ಲೋನ್ಸ್ ವಿಷಯ. ಈ ಬಗ್ಗೆ ಕೊಡತಕ್ಕ ಹಣವನ್ನು ಅನೇಕ ಕೈಗಾರಿಕೆಯ ಸಂಸ್ಥೆಗಳು ಸಾಲ ತೆಗೆದುಕೊಂಡ ಉದ್ದೇಶಕ್ಕಾಗಿ ನಿಜವಾಗಿ ಉಪಯೋಗಿಸುತ್ತಿಲ್ಲ. ಬೇರೆ ಇನ್ನಾವುದೋ ಉದ್ದೇಶಕ್ಕಾಗಿ ಆ ಹಣವನ್ನು ವಿನಿಯೋಗ ಮಾಡುತ್ತಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಈಗ ಆ ಬಗ್ಗೆ ಏನೂ ಅರಿಯರ್ಸ್ ಇಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ನಾನು ಯಾವಾಗ ಮಾತನಾಡಬೇಕಾದರೂ ಒಂದು ಅಥಾರಿಟಿ ಇಟ್ಟುಕೊಂಡೇ ಮಾತನಾಡುತ್ತೇನೆ. ಈಗ 86 ಟ್ರಾಕ್ಟರುಗಳನ್ನು ತರಿಸಿದ್ದೀರಿ. Thirteen years of misrule of the Congress Government have been ruinous to the Country. ಇಂಡಸ್ಟ್ರಿಯಲ್ ಲೋನ್ ಬಗ್ಗೆ ಹಣ ಸರಿಯಾಗಿ ವಸೂಲಾಗಿಲ್ಲ ಟ್ರಾಕ್ಟರುಗಳನ್ನು ಯಾರೋ ದೊಡ್ಡ ಮನುಷ್ಯರು ಅದರಲ್ಲೂ ಬಿಳೀ ಟೋಪಿಯುವರ ವಶಕ್ಕೆ ಕೊಟ್ಟುಬಿಟ್ಟಿದ್ದೀರಿ. It is a great sin to the Country.

Sri C. J. MUCKANNAPPA.—Is it a sin to wear a white cap ?

Sri B. D. JATTI.—Those persons who were wearing white caps some years back know better (*Laughter*).

ಶ್ರೀ ಜಿ. ಎನ್. ಪುಟ್ಟಣ್ಣ.—ಇನ್ನು ಸಿಲ್ಕ್ ಇಂಡಸ್ಟ್ರೀ ವಿಷಯದಲ್ಲಿ ಹೇಳಬೇಕಾದರೆ ಅದರಲ್ಲಿ ಅನೇಕ ಹಳೆಯ ಬ್ಯಾಂಡಿಕೂಟ್ಸ್ ಸೇರಿಕೊಂಡಿವೆ. ಅವರಿಂದಲೇ ಈ ಕೈಗಾರಿಕೆ ಹಾಳಾಗಿ ಹೋಗುತ್ತಿದೆ. ದಿನ ಒಂದಕ್ಕೆ 3-4 ಸಾವಿರ ರೂಪಾಯಿಗಳ ಸಂಪಾದನೆ ಇಂದರಿಂದ ಸರ್ಕಾರಕ್ಕೆ ಇದೆ. ಅಂಥಾದ್ದನ್ನು ನಮ್ಮ ಸರ್ಕಾರದವರು ಗಮನಿಸದೆ ಆ ಕೈಗಾರಿಕೆಯನ್ನು ನಾಶಪಡಿಸುತ್ತಿದ್ದಾರೆ. ಅದನ್ನು ಕೂಡಲೇ ಸರಿಪಡಿಸಬೇಕು.

ಇನ್ನು ಪೋರ್ಸಲಿನ್ ಫ್ಯಾಕ್ಟರಿ ವಿಷಯವಾಗಿ ಹೇಳುವುದಾದರೆ ಅಲ್ಲಿಗೆ ಬೇಕಾದಷ್ಟು ಮೆಷನರಿಗಳನ್ನು ತರಿಸಿದ್ದಾರೆ, ಅನೇಕ ಜಾಪನೀಸ್ ಎಕ್ಸ್‌ಪರ್ಟ್ಸ್‌ಗಳನ್ನು ಕರೆಸಿದ್ದಾರೆ. ಆದರೂ ಅಲ್ಲಿ ಎಷ್ಟೋ ನಷ್ಟವಾಗುತ್ತಿದೆ.

Sri B. D. JATTI.—You have studied but you do not know the latest facts.

ಶ್ರೀ ಜಿ. ಎನ್. ಪುಟ್ಟಣ್ಣ.—ಲೇಟೆಸ್ಟ್ ಫ್ಯಾಕ್ಟ್ಸ್ ನನಗೆ ಗೊತ್ತಿಲ್ಲ, ಪ್ರೀವಿಯಸ್ ಫ್ಯಾಕ್ಟ್ಸ್ ನಿಮಗೆ ಗೊತ್ತಿಲ್ಲ, ಇಬ್ಬರಿಂದಲೂ ಇದರಿಂದ ದೇಶವೇ ಹಾಳಾಗುತ್ತದೆ. ಇದು ನಿಮ್ಮ ಕಾಲದಲ್ಲಿಯೇ ಆಯಿತು ಎಂದು ನಾನು ಹೇಳುವುದಿಲ್ಲ (ನಗು). ಇವತ್ತಿನದಿವಸ ಸುಮಾರು 25 ಲಕ್ಷ ರೂಪಾಯಿಗಳು ಆ ಫ್ಯಾಕ್ಟರಿಯಲ್ಲಿ ನಷ್ಟವಾಗುತ್ತಿದೆ.

Sri B. D. JATTI.—There may be some confusion.

Sri G. N. PUTTANNA.—Have they taken the stock into account ? Nearly 60 thousand or 60 lakhs insulators are lying idle. They have not even been sorted. Whose father's property is it (Laughter). Take the Match factory at Shimoga. When I was personally there, it was yielding heavy profits. Now, it has become private property of

some people and the industry is ruined. It is national wealth and please take care of it. ಶಿವಮೊಗ್ಗಾ ಮ್ಯಾಚ್ ಫ್ಯಾಕ್ಟರಿ ಮತ್ತು ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಗಳಲ್ಲಿ 10 ವರ್ಷಗಳಿಂದಲೂ ಇನ್ನೂ ಸ್ಟಾಕ್ ಚೆಕಿಂಗನ್ನು ಮಾಡಲಿಲ್ಲ. ನಮ್ಮ ಸರ್ಕಾರ ಏನು ಮಾಡುತ್ತಿದೆ? ಅಲ್ಲಿ ಸುಮಾರು ಏಳು ಲಕ್ಷ ರೂಪಾಯಿಗಳಷ್ಟು ಮೆಷನರಿಗಳನ್ನು ತರಿಸಿಕೊಂಡಿದ್ದಾರೆ. ಆದರೂ ಅವನ್ನು ಇನ್ನು ಉಪಯೋಗಮಾಡಲಿಲ್ಲ. ಅದು ಎಷ್ಟು ಡೆಡ್ ಕ್ಯಾಪಿಟಲ್ ಆಯಿತು? ಆ ರೀತಿ ಮೆಷನರಿಗಳನ್ನು ಉಪಯೋಗಿಸದೆ ಇದ್ದುದಕ್ಕಾಗಿ ಸಂಬಂಧಪಟ್ಟ ಆಫೀಸರುಗಳಿಗೆ ಏನು ಶಿಕ್ಷೆಮಾಡಿದ್ದೀರಿ? ನಿಮ್ಮ ಸರ್ಕಾರದಲ್ಲಿ ಒಂದು ಬಿಗಿ, ಬಿಕ್ಕಟ್ಟು ಇಲ್ಲದಿದ್ದರೆ, ಖಂಡಿತವಾಗಿ ನಿಮ್ಮ ಸರ್ಕಾರ ಜಾಗ್ರತೆಯೇ ಉರುಳೀತು ಎಂಬುದನ್ನು ಮರೆಯಬೇಡಿ. ಇವನ್ನೆಲ್ಲಾ ಸರಿಪಡಿಸಿದರೆ ಆಗ credit goes to you probably.

ಇನ್ನು ಎಂ. ಜಿ. ಆರ್. ಟಿ. ಡಿ. ಬಗ್ಗೆ ಹೇಳುವುದಾದರೆ, ಇವತ್ತು ಬಸ್ಸುಗಳನ್ನು ಲೈನ್ ಮೇಲೆ ಬಿಟ್ಟರೆ, ಇನ್ನು ಯಾವುತ್ತೋ ಅದನ್ನು ಕ್ಲೀನ್ ಮಾಡುವುದು. ವರ್ಷಾನುಗಟ್ಟಲೆಯಾದರೂ ಬಸ್ಸುಗಳನ್ನು ಸರಿಯಾಗಿ ಕ್ಲೀನ್ ಮಾಡುವುದಿಲ್ಲ. ನಾನು ಆ ಬಗ್ಗೆ ಇಲಾಖೆಗೆ ಹತ್ತಾರು ಕಾಗದಗಳನ್ನು ಬರೆದಿದ್ದೇನೆ. ಅವರೂ ಯಾವ ಕ್ರಮವನ್ನೂ ಆ ವಿಷಯದಲ್ಲಿ ಸಂಬಂಧಪಟ್ಟವರು ತೆಗೆದುಕೊಂಡಿಲ್ಲ. ಅಂತಹವರನ್ನು why not dismiss them. ಒಂದೆರಡು ಸಾರಿ ನಾವೇ ಖುದ್ದಾಗಿ ಇಲಾಖೆಯಲ್ಲಿ ವಿಚಾರಿಸಿದಾಗ, yes, it will be done to-day ಎಂದು ಹೇಳುತ್ತಾರೆ. ಮೆಜೆಸ್ಟಿಕ್ ಬಸ್‌ಸ್ಟ್ಯಾಂಡ್ ಹತ್ತಿರ ಹೋಗಿ ನೋಡಿ. ಇಲಾಖೆಯವರಲ್ಲಿ luxurious habits. ವಿಶೇಷವಾಗಿದೆ. ಆದರೆ ಅಲ್ಲಿ ಕೆಲಸಮಾಡತಕ್ಕ ಗುಮಾಸ್ತರಿಗೆ ಇಂತಹ ಬೇಸಿಗೆ ಕಾಲದಲ್ಲಿಯಾದರೂ ಒಂದು ಫ್ಯಾನ್ ಇಲ್ಲ. ವಿಧಾನಸೌಧದ ಒಂದೊಂದು ಕೊಠಡಿಯಲ್ಲಿ ನಾಲ್ಕು-ನಾಲ್ಕು ಫ್ಯಾನ್‌ಗಳು, ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೂ ಕಷ್ಟಪಟ್ಟು ದುಡಿಯುತ್ತಾರೆ. ಇನ್ನು ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್ ಹತ್ತಿರವಂತೂ ಮನುಷ್ಯರು ನಿಲ್ಲುವುದಕ್ಕೂ ಕೂಡ ಆಗುವುದಿಲ್ಲ. ಜನಗಳ ಸೌಕರ್ಯಕ್ಕೆ 68 ಬಸ್ಸುಗಳನ್ನು ತರಿಸಿದ್ದೇವೆಂದು ಹೇಳುತ್ತಾರೆ. ಅದರಲ್ಲಿ ಆಗಲೇ 10 ಬಸ್ಸುಗಳು ಹಾಳಾಗಿ ಹೋಗಿವೆ. ಅದನ್ನು ಬೇಕಾದವರಿಗೆ ಮಾರಿಕೊಂಡರೂ ಕೇಳುವುದಕ್ಕೆ ಯಾರೂ ಇಲ್ಲ. ಒಬ್ಬೊಬ್ಬ ಕಂಡಕ್ಟರೂ ತಾನೇ ಮಾಲೀಕನಾಗಿರುತ್ತಾನೆ. ಏಕೆಂದರೆ ಅನೇಕರಿಗೆ ಟಿಕೆಟ್ಟುಗಳನ್ನು ಇಷ್ಯೂ ಮಾಡುವುದೇ ಇಲ್ಲ. ಕಂಡಕ್ಟರ್ ಒಂದು ಲೈನ್ ಮೇಲೆ ಹೋಗಿಬಂದರೆ ಸಾಕು, ಅಕೌಂಟೆಂಟಿಗೆ, ಡ್ರೈವರಿಗೆ ದುಡ್ಡು ಕೊಡಬೇಕು. ಚೆಕಿಂಗ್ ಆಫೀಸರಿಗೆ ಮಾಮೂಲು ಕೊಡಬೇಕು. ಒಂದು ವೇಳೆ ಸರಿಯಾಗಿ ದುಡ್ಡು ಅವರಿಗೆ ವಸೂಲಾಗದಿದ್ದರೆ ಆ ಕಂಡಕ್ಟರನನ್ನೇ ಡಿಸ್‌ಮಿಸ್ ಮಾಡುತ್ತಾರೆ. ಆದ್ದರಿಂದ ಈ ಇಲಾಖೆಯಲ್ಲಿ ಆಗುತ್ತಿರುವ ಇಂತಹ ಅನ್ಯಾಯಗಳನ್ನು ಕೂಡಲೇ ತಪ್ಪಿಸಬೇಕು.

ಇನ್ನು ಬೆಗ್ಗರ್ ರಿಲೀಫ್ ವಿಷಯವಾಗಿ ಮಾತನಾಡುವುದಾದರೆ, ಇಡೀ ಪ್ರಾಂತವಲ್ಲಿ ಬೆಗ್ಗರ್ಸ್ ನಮ್ಮಲ್ಲಿರುವಷ್ಟು ಇಲ್ಲ. ಬೇಕಾದಷ್ಟು ರಿಸೀವಿಂಗ್ ಸೆಂಟರ್ಸ್ ಮತ್ತು ರಿಟೇನ್‌ವರ್ಕ್ ಸೆಂಟರ್ಸ್ ಇವೆ. ಅವೇನುಮಾಡುತ್ತಿವೆಯೆಂದರೆ ದೇಶವನ್ನೇ ಬೆಗ್ಗರಿಯಾಗಿ ಮಾಡುತ್ತಿವೆ. ಭಿಕ್ಷುಕರು ಹೊಟ್ಟೆಗಿಲ್ಲಾತಾಯಿ, ಧರ್ಮಕೊಂಡಿ ಎಂದು ಬೀದಿಬೀದಿಯಲ್ಲಿ ತಿರುಗಾಡಿಕೊಂಡು ಇನ್ನೂ ಈಗಲೂ ಬರುತ್ತಿದ್ದಾರೆ. ಅವರ ಸ್ಥಿತಿಯಂತೂ ಇನ್ನೂ ಉತ್ತಮಗೊಂಡಿಲ್ಲ. ಈ ರೀತಿ ಇರುವಾಗ ಸಂಸ್ಥಾನಾದ್ಯಂತ ಬೆಗ್ಗರ್ ರಿಲೀಫನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಈ ಕಾಂಗ್ರೆಸ್ ಸರ್ಕಾರಕ್ಕೆ ಏತಕ್ಕಾಗಲಿಲ್ಲ? ಏತಕ್ಕೋಸ್ಕರ ಮಂತ್ರಿಗಳಾಗಿದ್ದಾರೋ ಗೊತ್ತಿಲ್ಲ.

ಇನ್ನು ಪೊಲಿಟಿಕಲ್ ಸಫರರ್ಸ್ ವಿಷಯ. ಈ ಬಗ್ಗೆ ಹೇಳುವುದಾದರೆ they are all trading upon Government loans. ಆದರೂ ನನಗೆ ಅವರ ಮೇಲೆ ಪೂರ್ಣ ಸಿಂಪತಿ ಇದೆ, ಏಕೆಂದರೆ ಪೊಲಿಟಿಕಲ್ ಸಫರರ್ಸ್ ದೇಶಕ್ಕೋಸ್ಕರ ಬಹಳವಾಗಿ ದುಡಿದಿದ್ದಾರೆ. ಅಂತಹವರನ್ನು ಈಗ ಬೀದಿ ಬಿಕಾರಿಗಳ ಹಾಗೆ ಮಾಡಿದ್ದೀರಿ. ಅವರಿಗೆ ವಸತಿ ಸೌಕರ್ಯಕ್ಕಾಗಿ ಸೈಟುಗಳನ್ನೂ

(ಶ್ರೀ ಬಿ. ಎಸ್. ಪುಟ್ಟಣ್ಣ)

ಕೊಡುತ್ತಿಲ್ಲ, ಮನೆಗಳನ್ನೂ ಸಹ ಕಟ್ಟಿಸಿಕೊಡುತ್ತಿಲ್ಲ. ಯಾರ್‍ಯಾರಿಗೋ ಸೈಟುಗಳ ಹಂಚಿಕೆಯಾಗುತ್ತಿದೆ. ಅವರು ಇವತ್ತು ತೆಗೆದುಕೊಳ್ಳುತ್ತಾರೆ, ನಾಳೆ ಅದನ್ನು ಲಾಭಕ್ಕೆ ಮಾರಿಬಿಡುತ್ತಾರೆ. ಈಗಿನ ಕಾಂಗ್ರೆಸ್ ಸರ್ಕಾರ ತಮ್ಮ ತಮ್ಮವರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಾರೆಯೇ ಹೊರತು ನಿಜವಾಗಿ ದೇಶಕ್ಕಾಗಿ ತಮ್ಮ ದೇಹದಾರ್ಢ್ಯದಿಂದ ಶ್ರಮಿಸಿದಂತಹ ಪೊಲಿಟಿಕಲ್ ಸಫರರ್ಸ್‌ಗೆ ತಕ್ಕ ಸೌಕರ್ಯಗಳನ್ನು ಒದಗಿಸುತ್ತಿಲ್ಲ. ಇದು ಕಾಂಗ್ರೆಸ್ ಸಂಸ್ಥೆಗೆ ಒಳ್ಳೆಯದಲ್ಲ, ದೇಶಕ್ಕೂ ಒಳ್ಳೆಯದಲ್ಲ. ನ್ಯಾಯವಾಗಿ ಯಾರ್‍ಯಾರಿಗೆ ಸೈಟುಗಳ ಹಂಚಿಕೆಯಾಗಬೇಕೋ ಅಂತಹವರಿಗೆ ಮಾತ್ರ ಕೊಡಿ. ಕೆಲವರು ಪೊಲಿಟಿಕಲ್ ಸಫರರ್ಸ್ ಎಂದು ಹೇಳಿಕೊಂಡು, ಅವರ ಅಪ್ಪನ ಕಾಲದಲ್ಲೂ ಕೂಡ ಜೈಲಿಗೆ ಹೋಗಿಲ್ಲ. ಅಂತಹವರಿಗೆಷ್ಟೋ ಮುಂದಿಗೆ ಜಮೀನುಗಳನ್ನು ಕೊಟ್ಟಿದ್ದೀರಿ.

5–00 P.M.

ಷೆಡ್ಯೂಲ್ಡ್ ಕ್ಯಾಸ್ಟ್‌ಗಳಿಗೆಂದು ಒಂದು ತಾಲ್ಲೋಕಿಗೆ 1,200 ರೂಪಾಯಿ ಕೊಟ್ಟುಬಿಡುತ್ತೀರಿ. ಷೆಡ್ಯೂಲ್ಡ್ ಕ್ಯಾಸ್ಟ್ ಎಂಬುದರಲ್ಲಿ 12 ಜಾತಿಗಳನ್ನು ಸೇರಿಸಿಬಿಟ್ಟಿದ್ದೀರಿ. ನೀವು ಕೊಟ್ಟಿರುವ ಹಣವನ್ನು ಹಂಚಿದರೆ, ಒಬ್ಬೊಬ್ಬರಿಗೆ ಒಂದು ಕಾಲು ಒಂದು ಕೈ ಬರುವುದು ಕಷ್ಟ? ಒಬ್ಬೊಬ್ಬನಿಗೆ ಒಂದು ಎತ್ತು ಬರುವುದಿಲ್ಲ. ಆ ಹಣದಲ್ಲಿ ಪುಢಾರಿಗಳಿಗೆ ಬೇರೆ ಹೋಗಬೇಕು, they come in pilgrimage to the Taluk Offic s, please prevent it, ನಾನ್ನೂರು ರೂಪಾಯಿ ಮನೆಕಟ್ಟುವುದಕ್ಕೋಸ್ಕರ ಅವರಿಗೆ ಕೊಟ್ಟಿದ್ದೀರಿ. ಅದು ಅವರ ಕೈಗೆ ಸೇರುತ್ತದೆಯೇ? Scheduled Castes upliftment ಅಂದರೆ ಅರ್ಥವೇನು ? ಆದಿಕರ್ಣಾಟಕರು ಮತ್ತು ಆದಿದ್ರಾವಿಡರಿಗೆ ಒಂದು ಕಾಲೋನಿ ಮಾಡಿದ್ದೀರ? ಬೋವಿಗಳು ಲಂಬಾಣಿಗಳು ಕೊಮರು, ಕೊರಚರು, ಕಾಡುಕುರುಬರು, ಸೋಲಿಗರು, ಬುಡುಬುಡಿಕೆಯವರು ಶಿಳ್ಳೆಕ್ಯಾತರು, ಕಾಡುಗೊಲ್ಲರು, ದೊಂಬೀದಾಸರು ಮುಂತಾದವರಿಗೆ ಏನಾದರೂ ಮಾಡಿದ್ದೀರಾ ? ನೀವು ಮಂತ್ರಿಗಳು ಖುಷಿಯಾಗಿದ್ದೀರಿ. ನಿಮಗೆ ಗೌರ್ನಮೆಂಟ್ ಕಾರ್ ಇದೆ, ಸಂಬಳ ಬರುತ್ತದೆ ಷೆಡ್ಯೂಲ್ಡ್ ಕ್ಯಾಸ್ಟಿನ ಜನಗಳಿಗೆ ನೀವು ಏನೂ ಮಾಡಿಲ್ಲ. ಶ್ರೀ ಬಸವಲಿಂಗಪ್ಪನವರು ಅವರ ಪಾರ್ಟಿಗೆ ರಾಜೀನಾಮೆ ಕೊಟ್ಟು ಅಪೊಜಿಷನ್ ಪಾರ್ಟಿಗೆ ಸೇರಿದರೆ ಸಂತೋಷ.

ಇನ್ನು ಎಂಪ್ಲಾಯಮೆಂಟ್ ವಿಚಾರ ತೆಗೆದುಕೊಳ್ಳೋಣ. 67,000 ಅಪ್ಲಿಕೇಷನ್ನುಗಳು ಬಂದಿವೆ. ವೇಕೆನ್ಸಿಗಳು ಇರುವುದು 2,000. ಅಪ್ಲಿಕೇಷನ್ ರಿಜಿಸ್ಟ್ರೇಷನ್ ಫೀಯಿಂದಲೇ ನಿಮಗೆ ಒಂದು ಲಕ್ಷ ರೂಪಾಯಿ ಬರುತ್ತದೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ Employment Exchange Office ಇದೆ. 19 ಡಿಸ್ಟ್ರಿಕ್ಟಿನಿಂದ, 19 Employment Exchnge ಬ್ರಾಂಚುಗಳಿವೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಕೆಲಸ ನಡೆಯುತ್ತಾ ಇಲ್ಲ ಯಾವ ಇಲಾಖೆಯಲ್ಲಿ ಕೇಳಿ, ತಕ್ಷಣ ಕೆಲಸಗಳಿಗೆ ಅಪಾಯಿಂಟ್‌ಮೆಂಟ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಸ್ಕೂಲು ಟೀಚರ್ಸ್ ಪೋಸ್ಟುಗಳಿಗೆ 33 ಸಾವಿರ ಅಪ್ಲಿಕೇಷನ್ನುಗಳು ಬಂದು 33 ಸಾವಿರ ರೂಪಾಯಿ ಆದಾಯ ಬಂದಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ಕೆಲಸ ನಡೆಯುತ್ತಿಲ್ಲ. ಆದ್ದರಿಂದ ಅದರ ಕೆಲಸವನ್ನು Employment Exchageಗೆ ಟ್ರಾನ್ಸ್‌ಫರ್ ಮಾಡಿ why not the Government pass sueh on order Is it God-made law. It is me -made law. ನಾನು ಹೇಳಿದ ಹಾಗೆ ಏಕೆ ಮಾಡಬಾರದು

ಈಗ 365 ಆಕ್ಟುಗಳು, ರೂಲುಗಳು ನಮ್ಮ ರಾಜ್ಯದಲ್ಲಿವೆ. ಯುನಿಫಾರಂ ಲಾ ತಕ್ಷಣ ಆಗಬೇಕು. ಕಂಟಿನ್ಯೂಯಸ್ ಆಗಿ ಒಂದು ವರ್ಷ ಸೆಷನ್ ಇಟ್ಟುಕೊಂಡರೂ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಇದರಿಂದ ದೇಶದಲ್ಲಿ ಅನಾಹುತವಾಗುತ್ತಿದೆ. ಯಾವ ಆಫೀಸರಿಗೆ ಕೇಳಿದರೂ, ನಾವು ಏನು ಮಾಡೋಣ, ಬಳ್ಳಾರಿಯಲ್ಲಿ ಒಂದು ಲಾ, ಬೊಂಬಾಯಿ ಕರ್ಣಾಟಕದಲ್ಲಿ ಒಂದು ಲಾ, ಕೂರ್ಗ್‌ನಲ್ಲಿ ಒಂದು, ಹಳೆಯ ಮೈಸೂರಿನಲ್ಲಿ ಒಂದು ಲಾ ಇದೆ ಎಂದು

ಹೇಳುತ್ತಾರೆ. ಏತಕ್ಕೋಸ್ಕರ ಒಂದೇ ಲಾ ಮಾಡಬಾರದು, ಯೂನಿಫಾರಂ ಲಾ ತಯಾರು ಮಾಡುವುಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟು ಒಬ್ಬ ರಿಟೈರ್ಡ್ ಆಫೀಸರನ್ನು ಇಟ್ಟು ಕೊಂಡಿದ್ದೀರ. ಅವರು 3½ ಘಂಟೆಗೆ ವಿಧಾನಸೌಧಕ್ಕೆ ಬಂದು 4½ ಘಂಟೆಗೆ ಹೊರಟುಹೋಗಿ ಬಿಡುತ್ತಾರೆ. You have no capacity to control them. ಸರ್ಕಾರದ ದುಡ್ಡು ಪಿಂಜರಾ ಪೋಲುಗಳಿಗೆ ಹೋಗುತ್ತಿದೆ. ಪಿ.ಡಬ್ಲ್ಯು.ಡಿ. ಮಿನಿಸ್ಟರು ಇಲ್ಲಿಲ್ಲ, ಎದ್ದು ಹೋಗಿದ್ದಾರೆ. ಅವರು ಕನ್‌ಸಲ್ಟಿಂಗಿಗೆ, ಎಕ್ಸ್‌ಪರ್ಟ್ ಒಪಿನಿಯನ್ನಿಗೆ ಎಂದು ಒಬ್ಬರಿಗೆ 2½ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದಾರೆ. I do not know whether I am making a correct statement. ನಮ್ಮ ಸ್ಟೇಟಿನಲ್ಲಿಯೇ 4-5 ಚೀಫ್ ಇಂಜಿನಿಯರಿಗಳಿದ್ದರೂ, ಇನ್ನೊಬ್ಬ ರಿಟೈರ್ಡ್ ಆಫೀಸರನ್ನು expert opinionಗೆಂದು ಇಟ್ಟುಕೊಂಡಿದ್ದಾರೆ. ಅವರಿಗೆ ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳುವುದಿಲ್ಲವೆಂದು ಕೇಳಿದ್ದೇನೆ. ಇಂಥವರನ್ನು ನೇಮಕಮಾಡಿಕೊಂಡು ಸಂಬಳ ಕೊಡುವುದು ಯಾವ ಧರ್ಮ? ಅದೇ ದುಡ್ಡನ್ನು ಬಡನೌಕರರಿಗೆ ಕೊಡಿ.

ಇನ್ನು ನ್ಯೂ ಪೇ-ಸ್ಕೇಲ್ಸ್ ತೆಗೆದುಕೊಳ್ಳಿ. They are most disappointing. It is ruining the Country. ಐ.ಸಿ.ಎಸ್., ಐ.ಎ.ಎಸ್, ಐ.ಪಿ.ಎಸ್.ನವರಿಗೆ ಅಷ್ಟು ಹೈ ಪೇ-ಸ್ಕೇಲು ಏಕೆ ಮಾಡಿದರು ? ದೇಶದ ನಾಶಕ್ಕೋಸ್ಕರ ಹೀಗೆ ಮಾಡುತ್ತೀರಾ ? ದೇಶದ ಏಳಿಗೆಗಲ್ಲ. ಅವರಿಗೆ ವ್ಯಥಾ ಎರಡು ಸಾವಿರ ರೂಪಾಯಿ ಕೊಟ್ಟುಬಿಡುತ್ತೀರ. Reduce the pay of the Officers at the higher level to Rs. 1,000 and make the minimum pay to Rs. 100. ಬಡವರಿಗೆ ಜಾಸ್ತಿ ಸಂಬಳ ಕೊಡಿ. Send the I. A. S. and I. P. S. Officers to Delhi. 1920ನೆಯ ಇಸವಿಯಲ್ಲಿ ನಡೆದ ಲಾಹೋರ್ ಕಾಂಗ್ರೆಸ್ಸಿನಲ್ಲಿ ಈಗ ಹಾಲಿ ಪ್ರೈಮ್ ಮಿನಿಸ್ಟರಾಗಿರತಕ್ಕಂಥವರು "I will put an end to the I. C. S. and I. P.S." ಎಂದು ಹೇಳಿದ್ದರು. ಆಗ ನಾನು ಕಾಂಗ್ರೆಸ್ಸಿನಲ್ಲಿ ಇದ್ದೆ. ಈಗ ನೋಡಿದರೆ ಆಡಿದ ಮಾತಿಗೆ ಬೆಲೆಯೇ ಇಲ್ಲ, ಆಡುವುದೊಂದು, ಮಾಡುವುದೊಂದು. ಆಫೀಸರುಗಳಮೇಲೆ ಮಿನಿಸ್ಟರುಗಳ ಕಂಟ್ರೋಲ್ ಇಲ್ಲ, ಕಾಂರಾಜ್ ನಾಡಾರ್‌ರವರು ಒಬ್ಬ ಆಫೀಸರಿಗೆ "Please go out as Deputy Commissioner" ಎಂತ ಹೇಳಿದರು. ಅಂಥ ಅಧಿಕಾರಿಗಳ ಮೇಲೆ you exercise your powers and take suitable disciplinery action.

ಸ್ಕಾಲರ್‌ಷಿಪ್ ತೆಗೆದುಕೊಳ್ಳಿ, ಇವತ್ತಿನವರೆಗೆ ಬ್ಯಾಕ್‌ವರ್ಡ್ ಸ್ಕಾಲರ್‌ಷಿಪ್ ಕೊಡುತ್ತಿದ್ದೀರಿ. ಅದಕ್ಕೆ ಎಜುಕೇಷನ್ ಡಿಪಾರ್ಟ್‌ಮೆಂಟ್ ಅಥಾರಿಟಿ ಇದೆ, ಕಳೆದ ವರ್ಷ ಇದನ್ನು ಕೊಡಿ ಎಂದು ಎಜುಕೇಷನ್ ಮಿನಿಸ್ಟರಿಂದ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಇನ್‌ಸ್ಟ್ರಕ್ಷನ್ ಹೋಗಿದೆ. ಆದರೆ ಇನ್ನೂ ಯಾರೋ ಇಬ್ಬರು ಮಂತ್ರಿಗಳು ನಾಗಣ್ಣಗೌಡ ರಿಪೋರ್ಟ್ ಮೇಲೆ ಕೊಡಿ ಎಂದು ಸಲಹೆ ಕೊಟ್ಟಿದ್ದಾರಂತೆ. ಇದು ಧರ್ಮವೇ? ನ್ಯಾಯವಲ್ಲ, ಮೈಸೂರು ಗವರ್ನ್‌ಮೆಂಟ್ ಸ್ಕಾಲರ್‌ಷಿಪ್‌ಗಳನ್ನು ಕೆಲವರಿಗೆ ಕೊಟ್ಟಿದ್ದೀರಿ, ಹಾಗೆಯೇ ಇಂಡಿಯಾ ಗೌವರನ್‌ಮೆಂಟ್ ಸ್ಕಾಲರ್‌ಷಿಪ್‌ಗಳನ್ನು ಬ್ಯಾಕ್‌ವರ್ಡ್ ಕಮ್ಯೂನಿಟಿಗಳಿಗೆ ಏಕೆ ಕೊಡಬಾರದು ? ಜಾಗ್ರತೆ ಈ ವಿಚಾರವನ್ನು ಕನ್‌ಸಿಡರ್ ಮಾಡಿ.

Public Accounts Committee ಮತ್ತು Estimates Committee ರಿಪೋರ್ಟುಗಳ ಮೇಲೆ ಇಷ್ಟು ದಿವಸ ಏಕೆ ಆಕ್ಷನ್ ತೆಗೆದುಕೊಳಲಿಲ್ಲ ಎಂದು ಕೇಳಿದ್ದಕ್ಕೆ ಒಬ್ಬ ಅಧಿಕಾರಿಗಳು ಹೇಳಿದರು: Unless the Legislature gives a ruling or authrity to the Government, they cannot take action ಎಂದು. I protested. It is not correct. The State Government can exercise any power on any person in administrative capacity. Only concerning policy questions, the Government will have to consult the Legislature. Action ತೆಗೆದುಕೊಳ್ಳಿ. ಲಕ್ಷಾಂತರಗಟ್ಟಲೆ ಹಣ ತಿಂದು ಬಿಟ್ಟಿದ್ದಾರೆ.

(ಶ್ರೀ ಬಿ. ಎನ್. ಪುಟ್ಟಣ್ಣ)

ಇನ್ನು ಮೆಡಿಕಲ್ ಟ್ರೀಟ್‌ಮೆಂಟ್‌ನಲ್ಲಿ ವ್ಯತ್ಯಾಸ. ಇದರಲ್ಲ ಸರ್ಕಾರದ ಸಂಕುಚಿತ ಮನೋಭಾವ ಎಷ್ಟಿದೆಯೆಂದು ಗೊತ್ತಾಗುತ್ತದೆ. ಒಂದು ಅಮೆಂಡ್‌ಮೆಂಟ್ ಕೊಟ್ಟಿದ್ದಾರೆ. ಮಿನಿಸ್ಟರುಗಳಿಗೆ ಒಂದು ತರಹ ಟ್ರೀಟ್‌ಮೆಂಟ್, ಅಸೆಂಬ್ಲಿ ಮೆಂಬರುಗಳಿಗೆ ಒಂದು ತರಹ, ಗವರ್ನ್‌ಮೆಂಟ್ ಆಫೀಸರುಗಳಿಗೆ ಒಂದು ತರಹ ಟ್ರೀಟ್‌ಮೆಂಟ್. ಮೆಡಿಕಲ್ ಟ್ರೀಟ್‌ಮೆಂಟ್ ವಿಚಾರದಲ್ಲಿ ಅಮೆಂಡ್‌ಮೆಂಟ್ ಮಾಡಿದ್ದಾರೆ, ಶ್ರೀ ಅನಂತಶಯನಂ ಅಯ್ಯಂಗಾರ್ಯರು, There is no difference between a Member and a Minister ಎಂದು ಹೇಳಿದ್ದರೂ Why do you make this partialty ? The Cabinet can make and unmake many things except converting man into woman and woman to man ಈ ವ್ಯತ್ಯಾಸಗಳನ್ನು ತೆಗೆಯಿರಿ.

Charges aganst the Ministry ಚರ್ಚೆಗೆ ಬರುತ್ತದೆ. ಅಂಥ ಅನ್ಯಾಯಗಳು ನಮ್ಮ ದೇಶದಲ್ಲಿ ನಡೆಯಬಾರದು. ಬಡವರು, ಗುಮಾಸ್ತರು ಮತ್ತು ಜವಾನರು ಸಾಯುತ್ತಾ ಇದ್ದರೆ, ಮಂತ್ರಿಗಳನ್ನು ಹೆಚ್ಚಿಸುತ್ತಿದ್ದೀರ ? ಚೆನ್ನಾಗಿ ರಾಜ್ಯಭಾರಮಾಡಿ no confidence motion ಬಂದರೂ ಹೆದರಬೇಡಿ, ದೇಶದ ಹಿತಕ್ಕೆ ಕೆಲಸಮಾಡಿ, ದಾಕ್ಷಿಣ್ಯ ವಿಲ್ಲದೆ ಕೆಲಸ ಮಾಡಿ, ಪುಡಾರಿಗಳ ಮಾತು ಕೇಳಿಕೊಂಡು ರಾಜ್ಯಭಾರಮಾಡಿದರೆ "Down with the Government".

ಅಧ್ಯಕ್ಷರು ಇಷ್ಟು ಅವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ, ಜೈ ಜಗತ್.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ರಾಜ್ಯಪಾಲರ ಭಾಷಣದಮೇಲೆ, ನಡೆದ ಚರ್ಚೆಯ ಸಂದರ್ಭದಲ್ಲಿ ನಾನು ಆ ಬಗ್ಗೆ ನಾಲ್ಕು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ನಮ್ಮ ರಾಜ್ಯಪಾಲರು ಎಷ್ಟು ಮೇಧಾವಿಗಳು, ಎಷ್ಟು ವಿದ್ಯಾವಂತರು, ಅವರ ಜಡ್ಜ್‌ಮೆಂಟಿನಲ್ಲಿ ಎಷ್ಟು ಕರೆಕ್ಟ್ ಎನ್ನುವುದನ್ನು ಹೊರಗಡೆ ದೇಶಗಳಿಂದ ಇಲ್ಲಿಗೆ ಬಂದ ಅಥವ ನಾವಾದರೂ ನಮ್ಮ ದೇಶವನ್ನು ಬಿಟ್ಟು ಹೊರದೇಶಗಳಿಗೆ ಹೋದಾಗ ಜನರಿಂದ ತಿಳಿದುಕೊಳ್ಳಬಹುದು. ಅವರ ಬಗ್ಗೆ ಅಷ್ಟು ಗೌರವ ಅಭಿಮಾನ ಜನಗಳಿಗೆ ಇದೆ. ಆದರೆ ಅವರ ಬಾಯಿನಲ್ಲಿ ಇಂಥ ಭಾಷಣ ಓದುವಹಾಗೆ ನಮ್ಮ ಸರ್ಕಾರದವರು ಏಕೆ ಮಾಡಿದಾರೋ ನಿಜವಾಗಿ ಗೊತ್ತಾಗುವುದಿಲ್ಲ. ರಾಜ್ಯಪಾಲರಾದರೂ ಈ ಭಾಷಣವನ್ನು ಓದಲು ಏಕೆ ಒಪ್ಪಿಕೊಂಡರೋ ಎಂದು ನನಗೆ ಬಹಳ ಪಶ್ಚಾತ್ತಾಪ ಆಗುತ್ತಾ ಇದೆ. ಏಕೆಂದರೆ ಭಾಷಣದ ಮೊದಲನೇ ಪೇಜಿನಲ್ಲೇ "ಸುಖೀರಾಜ್ಯವನ್ನು ಸ್ಥಾಪಿಸಬೇಕೆಂಬುದೇ ನಮ್ಮ ಗುರಿಯಾಗಿದೆ. ನಾವು ಆ ನಮ್ಮ ಗುರಿಯನ್ನ ಮುಟ್ಟಲು ಸಮೀಪಕ್ಕೆ ಬರುತ್ತಿದ್ದೇವೆ." ಎಂತ ಹೇಳಿದ್ದಾರೆ. ಹೀಗೆ ನಾವು ಸುಖೀರಾಜ್ಯವನ್ನು ಸ್ಥಾಪನೆಮಾಡುತ್ತಿದ್ದೇವೆಂಬುದಾಗಿ ಹೇಳಬೇಕಾಗಿದ್ದರೆ ಅವರು ಯಾವ ಒಂದು ಅಳತೆಯ ಆಧಾರದ ಮೇಲೆ ಹೀಗೆ ಹೇಳಿದ್ದಾರೆ! ಒಂದು ದೇಶದ ಜನರಿಗೆ ಆ ದೇಶದ ಸರ್ಕಾರ ಕೊಡತಕ್ಕ ಪ್ರೊಟೆಕ್ಷನ್ ಯಾವರೀತಿ ಇರುತ್ತೆ ; ಆ ದೇಶದ ಜನರು ಯಾವರೀತಿ ಸುಖದಿಂದ ಬಾಳುವಮಾಡುತ್ತಿದ್ದಾರೆಂಬುದೇ ಒಂದು ಸುಖೀರಾಜ್ಯ ಸ್ಥಾಪನೆಯ ಅಳತೆಗೋಲು. ಆ ರೀತಿ ನೋಡುವುದಾದರೆ ನಮ್ಮ ಸರ್ಕಾರ ನಮ್ಮ ರಾಜ್ಯದ ಪ್ರಜೆಗಳಿಗೆ ಏನಂಥ ಪ್ರೊಟೆಕ್ಷನ್‌ಗಳನ್ನು ಕೊಟ್ಟಿದೆ ? ನಮ್ಮ ಸರ್ಕಾರ ಯಾವ ಅರ್ಫನೇಜಿಗೆ ಎಷ್ಟು ಪ್ರೊಟೆಕ್ಷನ್ ಕೊಟ್ಟಿದೆ ; ಯಾವ ಹೆಣ್ಣುಮಕ್ಕಳಿಗೆ ಏನು ಅಂಥ ಪ್ರೊಟೆಕ್ಷನ್ ಕೊಟ್ಟಿದೆ ; ವಯಸ್ಸಾದ ಜನರಿಗೇನು ಪ್ರೊಟೆಕ್ಷನ್ ಕೊಟ್ಟಿದೆ ; ಕಾಯಿಲೆಯಿಂದ ನರಳುತ್ತಿರುವ ಜನತೆಗೇನು ಸರ್ಕಾರ ಪ್ರೊಟೆಕ್ಷನ್ ಕೊಟ್ಟಿದೆ ? From cradle to grave ನಮ್ಮ ಸರ್ಕಾರದ ಜನರಿಗೇನು ಅಂಥ ಪ್ರೊಟೆಕ್ಷನ್ ಕೊಟ್ಟಿದ್ದರೆ ಆಗ ಇದೊಂದು ಸುಖೀರಾಜ್ಯವೆಂದು ಕರೆಯಬಹುದಿತ್ತು.

ಆದರೆ ಅಂಥ ಯಾವ ಒಂದು ಪ್ರೊಟೆಕ್ಷನ್ ಕೊಡದೇ ಇದ್ದರೂ ನಮ್ಮ ಸರ್ಕಾರ ದೇಶದಲ್ಲಿ ಸುಖೀ ರಾಜ್ಯಸ್ಥಾಪನೆಗೆ ಹತ್ತಿರ ಬರುತ್ತಿದ್ದಾರೆಂದು ಹೇಳುವುದು ಬಹಳ ಹಾಸ್ಯಾಸ್ಪದವಾದ ಸಂಗತಿ ಇದೆ,

ಇನ್ನು ಇಂಥದೇ ಆಧಾರದಮೇಲೆ ಇದೇ ಭಾಷಣದಲ್ಲಿ ವ್ಯವಸಾಯೋತ್ಪನ್ನದ ವಿಚಾರ ವನ್ನು ಪ್ರಸ್ತಾಪಿಸುತ್ತ ನಮ್ಮ ದೇಶವು ಬಹಳಮಟ್ಟಿಗೆ ಪ್ರಕೃತಿಯನ್ನೇ ನಂಬಿಕೊಂಡಿದೆ; ಕಳೆದ ವರ್ಷ ಮುಂಗಾರು ಮಳೆ ಫೈಲ್ ಆಯಿತು. ಆದಕ್ಕಾಗಿ ನಮ್ಮ ಸರ್ಕಾರ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಂಡು ಜನರಿಗೆ ತಕಾವಿ ಸಾಲಗಳನ್ನು ಕೊಟ್ಟಿದೆ. ಹಾಗೂ ಅವಶ್ಯಕವೆಂದು ಕಂಡುಬಂದ ಕಡೆಗಳಲ್ಲಿ ರಿಲೀಫ್ ವರ್ಕ್ಸ್‌ಗಳನ್ನೂ ಸಹ ಕೈಗೊಂಡಿರುತ್ತೇಂದು ಹೇಳಿರುತ್ತೆ. ಆದರೆ ಈ ತಕಾವಿಸಾಲಗಳನ್ನು ಅಲ್ಲಷ್ಟು-ಇಲ್ಲಷ್ಟು ಕೊಟ್ಟಿರಬಹುದು. ಅಷ್ಟೇ ಹೊರತು ಈ ಸಾಲಗಳನ್ನೇನೂ ಇಲ್ಲಿ ಹೇಳಿರುವಷ್ಟರಮಟ್ಟಿಗೆ ಉದಾರ ರೀತಿಯಲ್ಲಿ ಮಂಜೂರುಮಾಡಿಲ್ಲ. ಇದರ ಜೊತೆಗೆ ಒಬ್ಬರೈತನಿಗೆ 50 ರೂಪಾಯಿ ಸಾಲ ಮಂಜೂರಾಗಿದ್ದರೆ ಅವನಿಗೆ ಕಡೆಗೆ 25ರೂ. ಗಳು ಸಿಕ್ಕದಿರುವುದೂ ಹಾಗಿರಲಿ, ಅವನಿಗೆ 15 ರೂಪಾಯಿ ತಲುಪುವುದೂ ಸಹ ಬಹಳ ಕಷ್ಟ ವಾಗಿದೆ! ಮೊನ್ನೆತಾನೇ ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡಬೇಕಾಗಿ ಬಂದ ಸಂದರ್ಭದಲ್ಲಿ P.W.D ಶಾಖೆಯ ಉಪ-ಮಂತ್ರಿಗಳು ಏನು ಹೇಳಿದರೆಂದರೆ "ರಿಲೀಫ್ ಕಾಂಗಾರಿ ಕೆಲಸಗಳ ಬಗ್ಗೆ ಹಣವಿನ್ನೂ ಪಾವತಿ ಆಗದೆ ಹಾಗೇ ಉಳಿದಿರುವ ಬಿಲ್‌ಗಳು ಎಷ್ಟಿರುತ್ತವೆಂಬ ಪ್ರಶ್ನೆಗೆ ಉತ್ತರ ಹೇಳುವಾಗ, ಆ ಮೊಬಲಗೆಷ್ಟು ಎಂತ ಕೇಳಿದ್ದಕ್ಕೆ "ನೋಟೀಸ್" ಎಂತ ಉತ್ತರ ಕೊಟ್ಟಿದ್ದಾರೆ. ಈ ರಿಲೀಫ್ ಕಾಂಗಾರಿ ಕೆಲಸಗಳ ವಿಚಾರದಲ್ಲಿ ನಮ್ಮ ಸರ್ಕಾರದ ನೀತಿ-ಒಂದು ಧೋರಣೆ ಹೀಗಿದ್ದರೂ ಇದಕ್ಕೆ ತದ್ವಿರುದ್ಧವಾಗಿ ಮಹಾರಾಜರವರ ಬಾಯಿನಲ್ಲಿ ಈ ರೀತಿ ಹೇಳಿಸಲು ಹೊರಟಿದ್ದಾರೆ. ವಾಸ್ತವಾಂಶಗಳೆಲ್ಲ ಹೀಗಿದ್ದಾಗ್ಯೂ ನಮ್ಮ ಸರ್ಕಾರದ ವರು ತಮ್ಮ ನೀತಿಗೆ ವಿರುದ್ಧವಾದ ರೀತಿಯಲ್ಲಿ ಸುಖೀರಾಜ್ಯ ಸ್ಥಾಪನೆಯ ಗೋಲನ್ನು ತಲು ಪಲು ನಾವು ಅದರ ಹತ್ತಿರ ಹೋಗುತ್ತಿದ್ದೇವೆಂಬುದಾಗಿ ಮಹಾರಾಜರವರ ಬಾಯಿನಲ್ಲೂ ಹೇಳಿಸಿಬಿಟ್ಟಿದ್ದಾರೆ. ಇದಾದ ನಂತರ ಮಳೆ-ಬೆಳೆಗಳಾಗದೆ ದೇಶದಲ್ಲುಂಟಾದ ಪ್ರತಿಕೂಲ ಪರಿಸ್ಥಿತಿಗಳನ್ನು ಶಮನಮಾಡಲು ಬಾವಿಗಳನ್ನು ತೋಡಿಸಲು ಕೊಡತಕ್ಕ ಸಾಲದ ಮೊಬಲಗನ್ನು ಬಾವಿ ಒಂದಕ್ಕೆ 3,000 ರೂಪಾಯಿಗಳವರೆಗೂ ಕೊಡಲಾಗುತ್ತಿದೆಯೆಂದು ಹೇಳಿಸಿದ್ದಾರೆ. ಅದರ ಜೊತೆಗೆ 500 ರೂಪಾಯಿಗಳ ಸಬ್ ಸಿಡಿಯನ್ನೂ ಸಹ ಕೊಡಲಾಗು ತ್ತೇಂದು ಹೇಳಿದ್ದಾರೆ. ಇದನ್ನು ನೋಡಿದರೆ "ತಲೆಗೆಲ್ಲ ಒಂದೇ ಮಂತ್ರ" ಎಂದು ಹೇಳ ದಂತಿದೆ. ಕೆರೆ ಪಕ್ಕದಲ್ಲಿ ಒಂದು ಬಾವಿ ತೆಗೆದರೆ ಅಲ್ಲಿ 2 ಮಟ್ಟಿನಲ್ಲೇ ನೀರು ಬರಬಹುದು. ಮತ್ತೊಂದು ಕಡೆ ಬಾವಿ ತೆಗೆದರೆ 10-12 ಆಳು ಪ್ರಮಾಣ ತೆಗೆದರೂ ನೀರು ಬಾರದೆ ಇರ ಬಹುದು. ಇನ್ನು ಕೆಲವು ಕಡೆಗಳಲ್ಲಿ ಎಷ್ಟು ಆಳ ಬಾವಿತೆಗೆದರೂ ನೀರೇ ಬಾರದೆ ಕಡೆಗೆ ಬಾವಿ ತೋಡಿಸಿದವರು ಅದರಲ್ಲೇ ಬಿದ್ದು ಪ್ರಾಣ ಬಿಡತಕ್ಕಂಥ ಸನ್ನಿವೇಶಗಳೂ ಇವೆ. ಆದರೆ ಈ ಎಲ್ಲಾ ಬಾವಿಗಳಿಗೂ ಒಂದೇ ರೀತಿಯ ಸಹಾಯ! ಆಳವಾಗಿ ಬಾವಿ ತೆಗೆಯುತಕ್ಕವರಿಗೂ ಒಂದೇ ಸಹಾಯ. ಕೇವಲ ಎರಡು ಮಟ್ಟುಬಾವಿ ತೆಗೆಯುತಕ್ಕವರಿಗೂ ಒಂದೇ ಸಹಾಯ ನೀತಿ ಎಷ್ಟು ವಿವೇಕ ಪೂರ್ಣವಾಗಿದೆ! ಹೋಗಲಿ, ಬಾವಿ ಆಳ ಬಹಳವಾಗಿದ್ದಾಗ್ಯೂ ವ್ಯವಸಾಯಗಾರರಿಗೆ ಪ್ರೋತ್ಸಾಹ ನೀಡಲು ಸರ್ಕಾರದವರೇನಾದರೂ ಪವರನ್ನಾಗಲೀ, ಪಂಪ್-ಸೆಟ್ಟನ್ನಾಗಲೀ ಸರಬರಾಯಿಮಾಡುತ್ತಿದ್ದಾರೆಯೇ ಎಂದರೆ ಅದಕ್ಕೂ ಭಂಡಾಟ. ಹಗಲುಹೊತ್ತು ಪವರನ್ನು ಕೊಡಲು ಸಾಧ್ಯವಿಲ್ಲ; ರಾತ್ರಿವೇಳೆ ಮಾತ್ರ ಕೊಡುತ್ತೇವೆಂಬುದು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ರೈತನ ಉದ್ಧಾರದ ಬಗ್ಗೆ ತೋರಿಸುತ್ತಿರುವ ರೀತಿ-ನೀತಿಗಳು ಹೀಗಿರುವಾಗ ರೈತ ಆಳವಾದ ಬಾವಿಯಿಂದ ನೀರೆತ್ತಿ ಹೆಚ್ಚು ಬೆಳೆ ಬೆಳೆಯಬೇಕೆಂದರೆ ಅದು ಹೇಗೆ ಸಾಧ್ಯ? ನಮ್ಮ ಸರ್ಕಾರ ರೈತರಿಗೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಖೀ ರಾಜ್ಯ ಸ್ಥಾಪನೆಗಾಗಿ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ದೊರಕಿಸಿಕೊಟ್ಟ ಅನುಕೂಲಗಳಲ್ಲಿ ಇದು ಎರಡನೆ ಮೆಟ್ಟಲು. ನಮ್ಮ ಸರ್ಕಾರ ಸುಖೀರಾಜ್ಯ ಸ್ಥಾಪನೆಯ ಗುರಿಯನ್ನು ಮುಟ್ಟಲು ರೈತರಿಗೆ ಬಾವಿ ತೆಗೆಸಲು ಸಾಲ ಹಾಗೂ ಸಬ್‌ಸಿಡಿ ಇಷ್ಟೆಲ್ಲ ಸೌಲಭ್ಯಗಳನ್ನು ನೀಡಿದ್ದರೂ ನಮ್ಮಲ್ಲಿ ಸಾಕಷ್ಟು ಆಹಾರ ಬೆಳೆಯಾಗದೆ ಇದ್ದ ಕಾರಣ ನಮಗೆ ಸಾಲದೆ ಬರತಕ್ಕ ಆಹಾರದ ಕೊರತೆಗಾಗಿ ಹೊರಗಿನಿಂದ 13,000 ಟನ್ ಅಕ್ಕಿಯನ್ನು ಆಮದು ಮಾಡಿಕೊಡಲಾಗಿದೆ. ಆ ಆಮದು ಮಾಡಿಕೊಂಡಿರುವ ಅಕ್ಕಿ ಎಂಥಾದ್ದೆಂದರೆ ಕೊಳೆತುಹೋಗಿ-ವಾಸನೆ ಹತ್ತಿ ತಿಪ್ಪೆಗೆ ಸುರಿಯಲು ಯೋಗ್ಯವಾದದ್ದು. ಅಂಥ ಅಕ್ಕಿಯನ್ನು ತರಿಸಿ ಇಲ್ಲಿಯ ಜನರಿಗೆ ತಿನ್ನಲು ರೂಪಾಯಿಗೆ 5–5½ ಪಾವು ಪ್ರಕಾರ ಮಾರಾಟಮಾಡುವಂತೆ ಆಜ್ಞೆಮಾಡಿದರು. ಆದರೆ ಆ ಅಕ್ಕಿಯನ್ನು ಜನರು ತಿನ್ನಲು ಒಪ್ಪಲಿಲ್ಲ. ಮೈಸೂರಿನಲ್ಲಿ ಫುಡ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಪರೀಕ್ಷೆಮಾಡಿ ಆ ಅಕ್ಕಿಯನ್ನು ಜನಗಳ್ಯಾರೂ ತಿನ್ನಬಾರದೆಂದು ಅವರೊಂದು ಪ್ರಕಟಣೆ ಹೊರಡಿಸಿದರು. ಯಾವಾಗ ಜನರು ಆ ಅಕ್ಕಿಯನ್ನು ಕೊಳ್ಳಲು ಮುಂದೆ ಬಾರಲಿಲ್ಲವೋ ಆಗ ಸರ್ಕಾರದವರು ಆ ಅಕ್ಕಿಯನ್ನು ಕೊಳ್ಳದವರಿಗೆ ಸಕ್ಕರೆಯನ್ನು ಕೊಡಕೂಡದೆಂದೂ, ಇಷ್ಟು ಅಕ್ಕಿ ತೆಗೆದುಕೊಂಡರೆ, ಇಷ್ಟು ಸಕ್ಕರೆ ಕೊಡಬೇಕೆಂದು ಒಂದು ನಿರ್ಬಂಧವನ್ನು ಬೇರೆ ಜನರಮೇಲೆ ಹಾಕಿದರು. ಹೀಗೆ ನಮ್ಮ ಸರ್ಕಾರ ಕೊಳೆತ, ಹುಳು ತಿಂದ ಅಕ್ಕಿಯನ್ನು ನಿರ್ಬಂಧವಾಗಿ ನಮ್ಮ ದೇಶದ ಜನರಿಗೆ ಉಣ್ಣಿಸಲು ಪ್ರಯತ್ನಮಾಡಿದ್ದೂ ಆ ಸುಖೀರಾಜ್ಯ ಸ್ಥಾಪನೆಯ ಮಾರ್ಗವೇ ?

ಇನ್ನು ಹರಿಜನರಿಗೆ ದರಖಾಸ್ತು ಕೊಟ್ಟಕೂಡಲೆ ವ್ಯವಸಾಯಕ್ಕೆ ಜಮೀನನ್ನು ತಕ್ಷಣವೇ ಕೊಡಲಾಗುತ್ತಿದೆ ಎಂತ ಹೇಳಿದ್ದಾರಂತೆ ! ಜಮೀನಿಲ್ಲದವರಿಗೆ ಈ ದಿವಸ ಒಂದು ಅಂಗುಲ ಜಮೀನು ದೊರೆಯುವುದೂಕೂಡ ಬಹಳ ದುರ್ಲಭ. ಈ ದರಖಾಸ್ತುಗಳ ಮೂಲಕ ಜಮೀನು ದೊರೆಯುತ್ತಿರುವುದೆಲ್ಲ ಯಾರಿಗೆ ಹೆಚ್ಚಿಗೆ ಜಮೀನಿದೆಯೋ ಅವರಿಗೂ ಮತ್ತು ರಾಜಕೀಯ ಪಕ್ಷದಲ್ಲಿ ಮುಂದುವರಿದವರಿಗೆ ಮಾತ್ರವೇ ವಿನಾ ಬಡವರಿಗಲ್ಲ, ಎಲ್ಲೋ ಅಪ್ಪಿ-ತಪ್ಪಿ ಒಬ್ಬೊಬ್ಬರಿಗೆ ಜಮೀನು ಬೇರೆ ಬಡವರಿಗೆ ದೊರೆತಿದ್ದರೆ ಅದು ಅವರ ಪುಣ್ಯದಿಂದ, ಮೊನ್ನೆತಾನೆ ಶ್ರೀ ಕಡಿದಾಳ್ ಮಂಜಪ್ಪನವರು ನಮ್ಮ ಕಡೆ ಪ್ರಾಂತ್ಯಕ್ಕೆ ಬಂದಿದ್ದಾಗ ಯಾರಿಗೆ ಜಮೀನಿಲ್ಲವೋ ಅವರು ಅಪ್ಲಿಕೇಷನ್ ಕೊಟ್ಟಕೂಡಲೇ ಅವರಿಗೆ ಜಮೀನನ್ನು ಕೊಡಲಾಗುತ್ತೆಂದು ಹೇಳಿದರು, ಆಗ ಅವರ ಸಮಕ್ಷದಲ್ಲೇ ಅನೇಕರು ಅರ್ಜಿಗಳನ್ನು ಕೊಟ್ಟರು. ಆದರೆ ಆ ಅರ್ಜಿಗಳೆಲ್ಲ ಎಲ್ಲಿಗೆ ಹೋದವೋ ದೇವರೊಬ್ಬನಿಗೇ ಗೊತ್ತು. ವಾಸ್ತವಾಂಶ ಹೀಗಿದ್ದರೂ ಅವರ ಬಾಯಿನಲ್ಲಿ ನಮ್ಮ ಸರ್ಕಾರ ಈ ರೀತಿ ಹೇಳುವಂತೆ ಮಾಡಿರುವುದಕ್ಕೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ.

ಇದಾದ ನಂತರ ಮೂರನೇ ಪಂಚವಾರ್ಷಿಕ ಯೋಜನೆಯ ಅಂತಿಮ ವೇಳೆಗೆ ನಮ್ಮ ದೇಶದಲ್ಲಿ ವ್ಯವಸಾಯೋತ್ಪನ್ನ ಕ್ಷೇತ್ರದಲ್ಲಿ ಆಹಾರ ಧಾನ್ಯಗಳ ಒಟ್ಟು ಉತ್ಪನ್ನದ ಗುರಿ 48.5 ಲಕ್ಷ ಟನ್‌ಗಳಾಗಬಹುದೆಂದು ಹೇಳಿಸಿದ್ದಾರೆ ! ಹೆಚ್ಚು ಆಹಾರ ಬೆಳೆಯುವುದೆಂದರೆ ಅದೇನು ಅಷ್ಟು ಹಗುರವಾದ ಮಾತೆ ? ನೆಲವನ್ನು ಕೈಲಿ ಕೆರೆದು ಬಾಯಿನಲ್ಲಿರತಕ್ಕ ಉಗುಳನ್ನು ಉಗಿದರೆ ಬೆಳೆ ಬರುತ್ತದೇನು ? ಅದಕ್ಕೆ ಗೊಬ್ಬರ ಬೇಡ, ಉಳುಮೆಗೆ ಅಗತ್ಯವಾದ ವ್ಯವಸಾಯದ ಸಾಮಗ್ರಿಗಳು ಬೇಡ, ಹಾಗೇ ಬೆಳೆ ಬೆಳೆಯಬೇಕೆಂದರೆ ಇದು ಎಂಥ ಮಾತು ! ಮೇಲಾಗಿ ನಮ್ಮ ದೇಶಕ್ಕೆ ದೇವರ ಶಾಪ ಬೇರೆ. ಮಳೆಯಿಲ್ಲದೆ ಹೋದರೆ ಯಾವ ಬೆಳೆತಾನೆ ಬೆಳೆಯುತ್ತದೆ ? ನಮ್ಮ ಸರ್ಕಾರದ ರೀತಿ-ನೀತಿ ಹೀಗಿದ್ದು ಪ್ರಕೃತಿ ಶಾಪ ವಾಗಿರುವಾಗ ಇವರು ಮೂರನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ 48.5 ಲಕ್ಷ ಟನ್ ಅಕ್ಕಿಯನ್ನು ಬೆಳೆಯುತ್ತಾರಂತೆ !

ಇನ್ನು ಈ ವಂದನಾರ್ಪಣೆ ನಿರ್ಣಯವನ್ನು ಮಂಡಿಸುವಾಗ ಶ್ರೀ ಎ. ಪಿ. ನರಸಿಂಹರೆಡ್ಡಿಯವರು ಸರ್ಕಾರ (ಸೇವಾ ಸಹಕಾರ) ಸಂಘಗಳ ಬಗ್ಗೆ ಹೇಳುತ್ತಿದ್ದುದನ್ನು ಕೇಳಿ ನನಗೆ ಬಹಳ ಘಾಬರಿಯಾಯಿತು. ನಾನೂ ಸಹ ಹೊರರಾಷ್ಟ್ರಗಳಲ್ಲಿ ಪ್ರವಾಸಮಾಡಿ ನೋಡಿದ್ದೇನೆ. ಅಲ್ಲೆಲ್ಲ ಈ ಸೇವಾ-ಸಹಕಾರಸಂಘಗಳೆಂದರೆ ಅಲ್ಲಿಯ ಜನರಿಗೆ ಅವು ಕಾಮಧೇನು–ಕಲ್ಪವೃಕ್ಷಗಳಿದ್ದಂತೆ. ಪರರಾಷ್ಟ್ರಗಳಲ್ಲಿ ಜನರ ಪ್ರತಿಯೊಂದು ವ್ಯವಹಾರವೂ ಈ ಸಹಕಾರಸಂಘಗಳ ಮೂಲಕವೇ ನಡೆಯುತ್ತಿವೆ. ಅದನ್ನೆಲ್ಲಾ ನಾನು ನೋಡಿಕೊಂಡು ಕೂಡ ಬಂದಿದ್ದೇನೆ. ಇಷ್ಟೆಲ್ಲವೂ ಅಲ್ಲಿಯ ಜನರಲ್ಲಿರತಕ್ಕ ಒಂದು ಇಂಟಿಗ್ರಿಟಿಯಿಂದ ನಡೆದುಕೊಂಡುಬರಲು ಸಾಧ್ಯವಾಗಿದೆ. ಆದರೆ ಇಲ್ಲಿಯ ಪರಿಸ್ಥಿತಿ ಏನಾಗಿದೆ? ನಮ್ಮ ಸರ್ಕಾರದವರು ರಿಜರ್ವ್ ಬ್ಯಾಂಕಿನಿಂದ ಸಾಲ ತರುತ್ತಾರಂತೆ, ಅನಂತರ ಆ ಹಣವನ್ನು ಕೋ-ಆಪರೇಟಿವ್ ಸಂಸ್ಥೆಗಳಿಗೆ ಹಂಚುತ್ತಾರಂತೆ! ಅದರಿಂದ ಬಹಳ ಅನುಕೂಲವಾಗಿದೆಯಂತೆ! ಹಾಗಾದರೆ ಏನು ಆ ಸಾಲಕೊಟ್ಟ ಹಣ ಮತ್ತೆ ವಾಪಸ್ಸು ಬರುತ್ತದೆಯೋ ಇಲ್ಲವೋ ಗೊತ್ತಾಗಲಿಲ್ಲ. ಹೋಗಲಿ, ಅಲ್ಲಿಗೂ ಆ ಸಾಲವನ್ನು ವಾಪಸ್ಸುಕೊಡದೆ ರೈತರಿಂದರೂ ನನಗೆ ಸಂತೋಷವೇ, ಕಾರಣವೇನೆಂದರೆ ''ಬೆಂದ ಮನೆಯಲ್ಲಿ ಇರಿದುಕೊಂಡ ಗಳುಗಳೇ ಲಾಭ'' ಎಂದಹಾಗೆ, ಈ ಹಿಂದೆ ಎಷ್ಟೋಜನ ಈ ಸಹಕಾರ ಸಂಘಗಳ ಹಣವನ್ನು ತಿಂದುಹಾಕಿದ್ದಾರೆ, ನಾವು ಈ ವಿಚಾರವನ್ನು ಆಂಟಿಕರಪ್ಷನ್ ಇಲಾಖೆಗೆ ವಹಿಸುವಂತಿಲ್ಲ. ಇತ್ತ ಹಾಗೆ ಹಣ ತಿನ್ನುವುದನ್ನು ತಡೆಗಟ್ಟುವಹಾಗೂ ಇಲ್ಲ! ಇದು ಅದೇನೋ ಹೇಳುತ್ತಾರಲ್ಲ ''ಹುಚ್ಚು ಬಿಡದ ವಿನಾ ಮದುವೆ ಆಗುವಹಾಗಿಲ್ಲ; ಮದುವೆ ಯಾಗದ ವಿನಾ ಹುಚ್ಚು ಬಿಡುವಹಾಗಿಲ್ಲ'' ಎಂದು ಹೇಳಿದಂತಾಗಿದೆ. ಒಟ್ಟಿನಲ್ಲಿ ಈ ಸಹಕಾರ ಸಂಸ್ಥೆಗಳಿಂದ ಜನರಿಗೆ ದಿಕ್ಕಿಲ್ಲ, ಸರ್ಕಾರಕ್ಕೆ ಮುಕ್ತಿಯಿಲ್ಲ. ಇಂಥ ವಿಚಾರಗಳನ್ನೂ ಸಹ ಸರ್ಕಾರದವರು ಆ ರಾಜ್ಯಪಾಲರ ಬಾಯಿನಲ್ಲಿ ಹೇಳಿಸಿದ್ದಾರೆ!

ಇಷ್ಟೆಲ್ಲಾ ಹೇಳಿದಮೇಲೆ ಇನ್ನು ಆ ನೀರಾವರಿ ಯೋಜನೆಗಳ ಕೆಲಸ ಮುಂದುವರಿಯಲು ಹೇಗೆತಾನೆ ಸಾಧ್ಯ? ಆದರೆ ನಮ್ಮ ಹಳೇ ಮಂತ್ರಿಗಳಿಂದ ಏನೋ ಇತ್ತೀಚೆಗೆ ಈ ಪೋರ್ಟ್‌ಫೋಲಿಯೋವನ್ನು ಕಿತ್ತು ಬೇರೆಯವರಿಗೆ ಕೊಟ್ಟಿದ್ದಾರೆಂತ ಕೇಳುತ್ತೇನೆ. ಈ ಸೂಚನೆಯನ್ನು ನಾನು ಕೇಳಿ ಬಹಳ ಸಂತೋಷಪಟ್ಟೆ. ಆದರೆ ಆ ಮಂತ್ರಿಗಳಿಗೂ ನನಗೂ ಯಾವ ಹಗೆತನವೂ ಇಲ್ಲ. ಆದರೆ ಅವರು ತಾಳತಕ್ಕ ನೀತಿಯ ಬಗ್ಗೆ ಯಾರಿಗೂ ಕ್ಷೇಮವಿಲ್ಲ. ಮುಖ್ಯವಾಗಿ ರೈತರಿಗೂ ಕ್ಷೇಮವಿಲ್ಲ–ನೌಕರರಿಗೂ ಕ್ಷೇಮವಿಲ್ಲ. ಆದರೆ ಇನ್ನೂ ಒಂದು ಹೊಸ ವಿಷಯವಿದೆ, ಅದನ್ನು ಆಮೇಲೆ ಹೇಳುತ್ತೇನೆ. ಆದರೆ ಸುಖೀರಾಜ್ಯ ಸ್ಥಾಪನೆಯ ಮುನ್ನಡೆಗಾಗಿ ನೀರಾವರಿ ಯೋಜನೆಗಳ ಆಡಳಿತವನ್ನು ಹೊಸದಾಗಿ ಬರತಕ್ಕ ಮಂತ್ರಿಗಳಿಗೆ ಕೊಟ್ಟಿದ್ದಾರಂತೆ! ಆದರೆ ಅವರು ಈಗ ಸಭೆಯಲ್ಲಿಲ್ಲದಿದ್ದರೂ, ಅವರು ಮೊದಲು ಇದೇ ಖಾತೆಗೆ ಮಂತ್ರಿಗಳಾಗಿದ್ದುದರಿಂದ, ಅವರು ನಮ್ಮ ತಾಲ್ಲೂಕಿನ ಸ್ಥಿತಿ ತಿಳಿಯುವುದರಿಂದ ಹಳೇಕಾಲದಿಂದಲೂ ಹಾಗೇ ಉಳಿದುಬಂದಿರುವ ಕೆಲಸಗಳನ್ನು ಆ ಹೊಸ ಮಂತ್ರಿಗಳು ಆಗುಮಾಡಿ ಅಲ್ಲಿನ ಜನರಿಗೆ ತಲೆಯ ಮೇಲೆ ಇಷ್ಟುಎಣ್ಣೆ ಹಚ್ಚಿಕೊಳ್ಳಲು ಅವಕಾಶಮಾಡಿಕೊಡಬೇಕೆಂದು ನಾನೀ ಸಂದರ್ಭದಲ್ಲಿ ಅಧ್ಯಕ್ಷರಮೂಲಕ ಆ ಹಳೇ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಕಳೆದ ಮೂರು ವರ್ಷಗಳಿಂದ ಈಗ ಹೋಗುವ P.W.D. ಮಂತ್ರಿಗಳಿಗೆ ಇದನ್ನು ಹೇಳಿ ಹೇಳಿ ಸಾಕಾಗಿ ಹೋಗಿದೆ. ಮಂತ್ರಿಗಳು ಪ್ರವಾಸಕ್ಕೆ ಬಂದಾಗ್ಗೆ ಅವರಿಗೆ ಒಂದು ಬಿನ್ನವತ್ತಳೆ ಅರ್ಪಿಸಿ ಒಂದು ಕಾಸ್ಕೆಟ್ ಕೊಟ್ಟುಬಿಟ್ಟರೆ ಸ್ಯಾಂಕ್ಷನ್ ಮಾಡಿ ಬಿಡುತ್ತಿದ್ದರು. ಆದರೆ ಅಲ್ಲಿಯ ಜನರು ಅತಿ ಬಡತನದಲ್ಲಿರುವುದರಿಂದ ಕಾಸ್ಕೆಟ್ ಕೊಡಲು ಅವರಲ್ಲ ಶಕ್ತಿಯಿಲ್ಲ. ಆದ್ದರಿಂದ ನಮ್ಮ ಕೆಲಸವನ್ನು ಹೊಸ ಮಂತ್ರಿಗಳು ಮಾಡಿಕೊಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು ಆರೋಗ್ಯದ ವಿಚಾರವಾಗಿ ಹೇಳಬಡಬೇಕೆಂದಿದ್ದೇನೆ. ಈ ಇಲಾಖೆಯಲ್ಲಿ ಬಹಳ ಅವ್ಯವಸ್ಥೆಯಿದೆ. ನಾನು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ 25 ಜನರಲ್ಲಿ 5 ಹೆಂಗಸರನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಉಳಿದವರಿಗೆ ಏತಕ್ಕೆ ಸೀಟ್ ಕೊಡಲಿಲ್ಲ ಎಂದು ನಾನು ಕೇಳಿದ್ದಕ್ಕೆ 18–20 ವರುಷ ಸರ್ವಿಸ್ ಮಾಡಿದವರಿಗೆ rules ಪ್ರಕಾರ ಕೊಟ್ಟಿದೆ ಎಂದು ಹೇಳಿದರು. ಹಳೇ ರಿಮಾರ್ಕ್ ನೋಡಿ ಅಂಥವರಿಗೆ ಸೀಟು ದೊರೆತಿಲ್ಲ. Lady Doctorಗಳನ್ನು ಕೇಳುವವರೇ ಇಲ್ಲ. ಈ ರೀತಿ ಇದ್ದರೂ ಸಹ ಹೆಲ್ತ್ ಡಿಪಾರ್ಟಮೆಂಟನ್ನು ಅವರು ಹೊಗಳಿಬಿಟ್ಟರು. ಮತ್ತು ಸುಖೀರಾಜ್ಯ ಸ್ಥಾಪನೆಯಾಗುತ್ತಿದೆಂದು ಸಹ ಹೊಗಳಿಬಿಟ್ಟಿದ್ದಾರೆ. ಇನ್ನೊಂದು ವಿಷಯ ಇಲ್ಲಿ ಹೇಳಬೇಕಾಗಿದೆ. ನಮ್ಮ ಸುಖೀರಾಜ್ಯ ಹೇಗಿದೆ ಎಂದರೆ ನಮ್ಮ ರಾಜ್ಯದಲ್ಲಿ 6,200 ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಕುಡಿಯುವ ನೀರನ್ನು ಒದಗಿಸಲು ಖರ್ಚು ಮಾಡುವದಕ್ಕೆ ಸರ್ಕಾರದ ಹತ್ತಿರ ಹಣವಿಲ್ಲವೆ? ದುಡ್ಡು ಮಾತ್ರ ಹೇಗೋ ಖರ್ಚಾಗುತ್ತಿದೆ. ಅದನ್ನು ನೋಡಿದರೆ ಮನಸ್ಸಿಗೆ ಬಹಳ ವ್ಯಸನವಾಗುತ್ತದೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಶ್ರೀ ಅಣ್ಣಾರಾವ್ ಗಣಮುಖಿಯವರು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಶ್ರದ್ಧೆ ವಹಿಸುತ್ತೇವೆಂದು ತಿಳಿಸಿದ್ದಾರೆ. ಆದರೆ ಅಷ್ಟು ಸಾಲದು. ಇನ್ನೂ ಜಾಸ್ತಿ ಶ್ರದ್ಧೆವಹಿಸಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಾವಿರಾರು ಸ್ಕೂಲುಗಳು ಪ್ರಾರಂಭವಾಗಿದ್ದರೂ ಸ್ಕೂಲುಗಳಲ್ಲಿ ಟೀಚರ್ಸ್ ಇರುವದಿಲ್ಲ. ಟೀಚರ್ಸ್ ಇಲ್ಲದೆ ಬರೀ ಸ್ಕೂಲ್ ಪ್ರಾರಂಭಿಸಿದರೆ ಪಾಠ ಹೇಳಿಕೊಡುವವರು ಯಾರು? ಇದಲ್ಲದೆ ಟ್ರೈಂಡ್ ಟೀಚರ್ಸ್ ಅಂತೂ ದೊರೆಯುವದಿಲ್ಲ. ಮಹಾರಾಣಿ ಹೈಸ್ಕೂಲಿನಲ್ಲಿ ಟೀಚರ್ಸ್ ಟ್ರೇನಿಂಗ್ ಕಾಲೇಜು ಒಂದು ಇದೆ. ಆದರೆ ಅದಕ್ಕೆ ಜಾಗ ಮತ್ತು ಸಲಕರಣೆಗಳು ಸಾಕಷ್ಟಿಲ್ಲ. ಏಕೆ, ಇಲ್ಲವೇ ಇಲ್ಲ. ಟ್ರೈನಿಂಗ್ ಕಾಲೇಜುಗಳನ್ನು ಅಲ್ಲಲ್ಲಿ ಸಮರ್ಪಕವಾದ ರೀತಿಯಲ್ಲಿ ಪ್ರಾರಂಭಿಸಬೇಕು ಮತ್ತು ಟ್ರೈಂಡ್ ಟೀಚರ್ಸ್ ದೊರೆಯುವ ಹಾಗೆ ಮಾಡಬೇಕು. ಸರಿಯಾದ ರೀತಿಯಲ್ಲಿ ಶಿಕ್ಷಣ ದೊರೆಯುವಂತಾದರೆ ಸುಖೀ ರಾಜ್ಯ ಸ್ಥಾಪನೆಗೆ ಅನುಕೂಲವಾಗುವುದು.

ಇನ್ನೊಂದು ವಿಷಯಕ್ಕೆ ಅತ್ಯಗತ್ಯವಾಗಿ ಗಮನ ಕೊಡಬೇಕಾಗಿದೆ. ಹೈ ಸ್ಕೂಲು ಮಿಡಲ್ ಸ್ಕೂಲುಗಳಲ್ಲಿ ಪಾಠ ಕ್ರಮದ ಪ್ರಕಾರ ಮ್ಯೂಜಿಕ್ ಅಂದರೆ ಸಂಗೀತವು ಒಂದು ಮುಖ್ಯ ವಿಷಯವಾಗಿದೆ. ಆದರೆ ಸಂಗೀತ ಪಾಠ ನಡೆಸುವದಕ್ಕೆ ಟೀಚರ್ ಇರುವದಿಲ್ಲ. ಸಂಗೀತ ಪಾಠ ಹೇಳುವ ಟೀಚರ್ ಸಹ ದೊರೆಯುತ್ತಿಲ್ಲ. ಮೈಸೂರಿನಲ್ಲಿ ಒಂದು ಮ್ಯೂಜಿಕ್ ಕಾಲೇಜ್ ಪ್ರಾರಂಭಿಸಬೇಕೆಂದಿದ್ದಿತು. ಆಕಾಶವಾಣಿ ಬಿಲ್ಡಿಂಗನ್ನು ಇದಕ್ಕಾಗಿ ತೆಗೆದುಕೊಳ್ಳಬೇಕೆಂದಿದ್ದಿತು. ಆದರೆ ಅದನ್ನು ಏತಕ್ಕೆ ಕೈ ಬಿಟ್ಟರೋ ಗೊತ್ತಿಲ್ಲ. ಈಗಲಾದರೂ ಮೈಸೂರಿನಲ್ಲಿ ಒಂದು ಮ್ಯೂಜಿಕ್ ಕಾಲೇಜನ್ನು ಸ್ಥಾಪನೆಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಮಿತವ್ಯಯ ಸಮಿತಿ ಎಂದು ಮಾಡಿದ್ದಾರೆ. ಅವರು ಏನು ರಿಪೋರ್ಟು ಕೊಡಬಲ್ಲರು? ಅವರ ಕೈ ಕಟ್ಟಿದ ಹಾಗೆ ಆಗಿದೆ. ಈ ಸಮಿತಿಯ ಬಗ್ಗೆ ಕಲ್ಪನೆ ಮಾಡುವುದೇ ಅಸಾಧ್ಯವಾಗಿದೆ. ಈ ಸಮಿತಿಯ ನೇಮಕದಿಂದ ತಪ್ಪೇಲಿ ಪೋದದ್ದಕ್ಕೆ ಹರಿವಾಣಕೊಟ್ಟು ಶಾಸ್ತ್ರ ಕೇಳಿದ ಹಾಗೆ ಆಗಿದೆ.

ಇನ್ನು ಪೇ-ಸ್ಕೇಲ್ ವಿಚಾರದಲ್ಲಿ ಒಂದು ದೊಡ್ಡ ಪುಸ್ತಕವನ್ನು ನಮಗೆಲ್ಲರಿಗೆ ಕೊಟ್ಟಿದ್ದಾರೆ. ಈ ನೂತನ ಸಂಬಳದ ವಿಚಾರದಲ್ಲಿ ಪೇಪರುಗಳಲ್ಲಿ ಸಹ ಬಂದಿದೆ. ಇದನ್ನು ಕಾರ್ಯಗತ ಮಾಡುವ ವಿಚಾರವನ್ನು ತಿಳಿಸಿದ್ದಾರೆ. ಆದರೆ ಸರಕಾರದ ಈ ನೂತನ ವೇತನ ನಿರ್ಧಾರಗಳಿಂದ ಹೊಸಬರಿಗೆ ಮಾತ್ರ ಅನುಕೂಲವಾಗುತ್ತದೆ. ಈಗ ನೌಕರಿಯಲ್ಲಿರುವ ಹಳಬರಿಗೆ ಅನುಕೂಲ ಉಂಟಾಗುವದಿಲ್ಲ ಯಾಕೆಂದರೆ ವೇಟೇಜ್ ಕೊಟ್ಟಿಲ್ಲ. ಆದ್ದರಿಂದ ಈಗ ನೌಕರಿಯಲ್ಲಿರುವ

ಅನೇಕ ಹಳ್ಳಿಗರಿಗೂ ಸಹ ಅನುಕೂಲವಾಗುವ ಹಾಗೆ ಅವರಿಗೆ ಪ್ರೈವೇಟ್ ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

5–30 P.M.

ಸಹೋದರಿ ರತ್ನಮ್ಮನವರು ಹೆಂಗಸರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೇನೂ ಇಲ್ಲವೆಂದು ಹೇಳಿದರು. ಇದು ನಿಜವಾಗಿಯೂ ಬಹಳ ತಾಪದಾಯಕವಾದ ವಿಚಾರ. ಇತರ ದೇಶಗಳಲ್ಲಿ ಹೆಣ್ಣುಮಕ್ಕಳು ಎಷ್ಟು ಮುಂದಕ್ಕೆ ಬಂದಿದ್ದಾರೆ! ಹೇಗೆ ಹೆಣ್ಣು ಮಕ್ಕಳು ಶಕ್ತಿಯನ್ನು ಉಪಯೋಗಿಸಿಕೊಂಡು ದೇಶವನ್ನು ಕಟ್ಟುತ್ತಿದ್ದಾರೆಂಬುದನ್ನೆಲ್ಲ ನೋಡಿಕೊಂಡು ಬಂದಿರುವ ನಮ್ಮ ರಾಜ್ಯಪಾಲರು ಹೆಣ್ಣುಮಕ್ಕಳ ವಿಷಯವನ್ನು ಮರೆಯುವುದಕ್ಕೆ ಶಕ್ಯವೇ ಇಲ್ಲ. ಈ ವಿಚಾರ ಮರೆತಿರುವುದನ್ನು ನೋಡಿದರೆ ಇದಕ್ಕೆ ಯಾರನ್ನು ಜವಾಬ್ದಾರಿ ಮಾಡಬೇಕೆನ್ನುವುದು ನನಗೆ ನಿಜವಾಗಿಯೂ ಗೊತ್ತಾಗುತ್ತಿಲ್ಲ. ನಮ್ಮ ಸರ್ಕಾರದ ತತ್ವ ಹೆಣ್ಣು ಮಕ್ಕಳಿಗೆ ಏನೇನೂ ಅನುಕೂಲ ಮಾಡಿಕೊಡಬಾರದೆಂಬುದಾಗಿದೆ ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಎದ್ದು ಹೋಗುವುದರಲ್ಲಿ ಬಿದ್ದು ಹೋಗಲಿ ಎಂದು ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರಿಗೆ ಒಂದು Chairmanship ಕೊಟ್ಟಿರಬಹುದು. Remuneration ಏನೋ ಕೊಡಬಹುದು. ಆದರೆ ಅವರಿಗೆ ಕೆಲಸಮಾಡುವುದಕ್ಕೆ ಯಾವ ತರಹ ಅನುಕೂಲವನ್ನೂ ಮಾಡಿಕೊಟ್ಟಿಲ್ಲ. ಇದು ನಿಜವಾಗಿಯೂ ಹಾಸ್ಯಾಸ್ಪದವಾಗಿದೆ ಮತ್ತು ಹೆಣ್ಣುಮಕ್ಕಳಿಗೆ ಅಗೌರವ ತೋರುವ ಸಂಗತಿಯಾಗಿವೆ.

ಕೊನೆಯದಾಗಿ, ಖಾತೆಗಳನ್ನು ಹಂಚುವಾಗಿ ಒಳಾಡಳಿತ ಶಾಖೆಯನ್ನು ದಯಾಹೀನ, ಕಟುಕರಾದವರಿಗೆ ಬದಲಾಯಿಸಿದ್ದಾರೆಂದು ನನಗೆ ಗೊತ್ತಾಗಿದೆ. ಇವರ ಕೈಯಲ್ಲಿ officer ಗಳಿಗಾಗಲಿ, ಸಾದಾ ಜನಗಳಿಗಾಗಲಿ ಹೆಣ್ಣುಮಕ್ಕಳಿಗೇ ಆಗಲಿ ಯಾವ ತರಹದ protection ಅಥವಾ safety ನೆಮ್ಮದಿಯೂ ಇಲ್ಲವೆಂದು ಹೇಳಬೇಕಾಗಿದೆ. ಕಾರಣವೇನೆಂದರೆ ಇವೊತ್ತಿಗೆ 10–12 ದಿವಸಗಳಲ್ಲಿ, ಸರ್ಕಾರದಲ್ಲಿ ಸುಮಾರು 22 ವರ್ಷ ಕೆಲಸಮಾಡಿ ಸತ್ತುಹೋಗಿರುವ ಒಬ್ಬ ಡಾಕ್ಟರ್ ಹೆಂಡತಿಯಾದವರು ತಮ್ಮ ಮಗನಿಗೆ ಎಲ್ಲೋ ಒಂದು ಕಡೆ ವರ್ಗವಾಗಿದೆ, ಅವನನ್ನು ಹೊಸದಾಗಿ ನೇಮಕಮಾಡಿದ್ದಾರೆ. ಆ ಜಾಗದಲ್ಲಿ ಸರಿಯಾದ ಊಟ ಸಿಕ್ಕುವುದಿಲ್ಲ. ಅಲ್ಲಿಯ ಆಹಾರ ಅವನಿಗೆ ಸೇರುವುದಿಲ್ಲ, ಮತ್ತು ಅವನಿಗೆ ಮೈ ಚೆನ್ನಾಗಿಲ್ಲ. ಬೇರೆಕಡೆ ಎಲ್ಲಿಯಾದರೂ ವರ್ಗ ಮಾಡಿ ಕೊಡಿ ಎಂದು ಅತ್ತರೆ, ನಿಮ್ಮನ್ನು ಯಾರು ಬರುವುದಕ್ಕೆ ಹೇಳಿದರು, ಕತ್ತು ಹಿಡಿದು ತಳ್ಳಿಸುತ್ತೇನೆ ಎಂದು ಹೇಳಿದರೆಂದು ತಿಳಿಯಿತು. ಎಷ್ಟು ಅಹಂಕಾರ, ಎಷ್ಟು ನಿರ್ದಯ. ಆ ಮಂತ್ರಿಗಳು ಈಗ ಇಲ್ಲಿಲ್ಲ. ಈ ತರಹ ಮಾತುಗಳು ಅವರಿಂದ ಬರಬಹುದೇ ? ನಾಳೆಯ ದಿವಸ ಅವರ ಮಗನಿಗೇ ಅಂಥ ಸ್ಥಿತಿ ಬರಬಹುದು. ನನ್ನ ಮಗ ಸಾಯುತ್ತಿದ್ದಾನೆ ಅವನನ್ನು ಬೇರೆ ಕಡೆ ವರ್ಗ ಮಾಡಿ ಎಂದರೆ ನಿನ್ನ ಮಗ ಸಾಯಲಿ ಎಂದು ಹೇಳಿದರಂತೆ. ಹೀಗಿರುವಾಗ ಹೆಣ್ಣುಮಕ್ಕಳಿಗೆ ನೆಮ್ಮದಿ (safety) ಎಲ್ಲಿದೆ. ಬಹಳ ಜವಾಬ್ದಾರಿಯುತವಾದ ಒಳಾಡಳಿತ ಖಾತೆಯನ್ನು ಇವರಿಗೆ ಕೊಟ್ಟಿರುವುದಕ್ಕೆ ನಮ್ಮ ಮುಖ್ಯಮಂತ್ರಿಗಳಿಗೆ ದೂರದರ್ಶಿತ್ವವಿಲ್ಲವೆಂದು ಬಹಳ ಕಠಿಣವಾಗಿ ಹೇಳುತ್ತಿದ್ದೇನೆ. ಅಧ್ಯಕ್ಷರ ಮುಖೇನ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ ನಮಗೆಲ್ಲ (safety) ನೆಮ್ಮದಿ ದೊರಕುವಂತೆ ಈಗಲಾದರೂ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಮಹಾರಾಜರ ಬಾಯಲ್ಲಿ ಇಷ್ಟೊಂದು ಅನ್ಯಾಯವಾಗಿ ಹೇಳಿಸಿ, ಅವರನ್ನು ಹೀಗೆ ಉಪಯೋಗಿಸಿಕೊಂಡುಬಿಟ್ಟರಲ್ಲ ಎಂದು ಪಶ್ಚಾತ್ತಾಪ ಪಟ್ಟು, ಈ ಪಶ್ಚಾತ್ತಾಪವನ್ನು ಪ್ರಕಟಿಸುವುದಕ್ಕೆ ಅವಕಾಶ ಕೊಟ್ಟಿದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, ಇಂಥ ವಿಚಿತ್ರ ವಾತಾವರಣದಲ್ಲಿ ನಿಜವಾಗಿಯೂ ಕೂಡ ಒಂದು ಯುಕ್ತಾಯುಕ್ತ ಕಲ್ಪಿತವಾದ ಈ ಸಮಯದಲ್ಲಿ ನನಗೆ ಮಾತನಾಡಲಿಕ್ಕೆ ಸ್ವಲ್ಪ ಭಯವೂ ಬರುತ್ತದೆ. ಏಕೆಂದರೆ ಇದು ಮಾದರಿಯ ಮೈಸೂರು ಎಂದು ಹಿಂದೆ ಬಹಳ ಪ್ರಖ್ಯಾತವಾಗಿ, ಪ್ರಭಾವಶಾಲಿಯಾಗಿದೆ. ಹಿಂದಿನ ಮಂತ್ರಿಗಳೂ ನಾನಾ ತರಹ ವಿದ್ವಾಂಥ ವ್ಯಕ್ತಿಗಳೂ ಅದನ್ನು ಆ ರೀತಿ ತೆಗೆದುಕೊಂಡು ಬಂದಿದ್ದಾರೆ. ಇದಕ್ಕೆ ಹೊಸದಾಗಿ ಕೊಡುವ ಕಾರಣವೇನೆಂದರೆ ಇಲ್ಲಿ ಎಲ್ಲವೂ ವಿಚಿತ್ರವಾಗಿದೆ. ಅದಕ್ಕೆ ಕಾರಣ ಮೈಸೂರು ಪ್ರಖ್ಯಾತಿ ಮತ್ತು ಮಾದರಿಯಾಗಿದೆ. ಈ ರಾಜ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಳ ಐದು ವರ್ಷಗಳಲ್ಲಿ ಎರಡು ಸಲ ಬದಲಾಗುವಂತಾಯಿತು. ಕಾಂಗ್ರೆಸ್ ಪಕ್ಷದಲ್ಲಿ ಕೂಡ ಎರಡು ತರಹ ಗುಂಪುಗಳಿವೆ—ಅಧಿಕಾರದಲ್ಲಿರುವ ಪಕ್ಷ, ಅಧಿಕಾರಕ್ಕೆ ಬರಬೇಕೆನ್ನುವ ಪಕ್ಷ. ಇದಕ್ಕಿಂತ ಹೆಚ್ಚಾಗಿ ಎರಡು ಹುಚ್ಚರ ಆಸ್ಪತ್ರೆಗಳಿವೆ—ಒಂದು ಬೆಂಗಳೂರಿನಲ್ಲಿ, ಒಂದು ಧಾರವಾಡದಲ್ಲಿ. ಎರಡು ವಿಶ್ವವಿದ್ಯಾನಿಲಯಗಳು, ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಿವೆ. ಎಲ್ಲವನ್ನೂ ನೋಡಿದರೆ ನಮ್ಮ ರಾಜ್ಯದ ಪರಿಸ್ಥಿತಿ ಏನು ಎನ್ನುವ ಸಂದರ್ಭ ಬರುತ್ತದೆ. ಇದಕ್ಕೆ ಉದಾಹರಣೆ ಕೊಡಬೇಕಾಯಿತು. ಈಗಾಗಲೇ ಎಲ್ಲರೂ ಸಾಕಷ್ಟು ಮಾತನಾಡಿದ್ದಾರೆ. ಸಹೋದರಿ ನಾಗರತ್ನಮ್ಮನವರು ಚೆನ್ನಾಗಿ ವಿಮರ್ಶೆಮಾಡತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. ಅದನ್ನು ಕೇಳಿಕೊಂಡು ಆಳುವ ಪಕ್ಷದವರು, ಮಂತ್ರಿಗಳು, ಅದರಲ್ಲಿಯೂ ನಮ್ಮ ಜಿಲ್ಲೆಯವರಾದ ಮುಖ್ಯ ಮಂತ್ರಿಗಳು ಹೆಚ್ಚು ಲಕ್ಷ್ಯಕೊಟ್ಟು ಅದರ ಪರಿಹಾರಕ್ರಮವೇನಾದರೂ ಕೈಕೊಂಡರೆ ದೇಶದ ಹಿತದೃಷ್ಟಿಯಿಂದ ಹೆಚ್ಚು ಒಳ್ಳೆಯದು. ಆಳುವ ಪಕ್ಷದವರು ಅಕಸ್ಮಾತ್ ತಪ್ಪಿದರೆ ಎದುರು ಪಕ್ಷದವರು ಬುದ್ಧಿವಂತಿಕೆಯ ಮಾತುಗಳನ್ನು ಕೇಳಿಕೊಂಡು ಅದನ್ನು ಸರಿಪಡಿಸಬೇಕು ಎನ್ನುವುದು ಪ್ರಜಾಪ್ರಭುತ್ವದ ತತ್ವ. ನಗುತ್ತಾ ಕುಳಿತುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ನಾನು ನಾಲ್ಕು ವರ್ಷಗಳಿಂದ ಮಾತನಾಡಿದ ಕಾಲಕ್ಕೆ ಬಹುತೇಕ ಒಬ್ಬರು ಅಥವಾ ಒಂದೂವರೆ ಮಂತ್ರಿಗಳಿರುತ್ತಿದ್ದರು. ಇವೊತ್ತು ಐದಾರು ಜನ ಮಂತ್ರಿಗಳಿದ್ದಾರೆ. ಇದರಿಂದ ನನಗೆ ಒಂದು ರೀತಿಯ ಹುರುಪು ಬಂದ ಹಾಗೆ ಆಗುತ್ತದೆ.

ರಾಜ್ಯಪಾಲರ ವಿಷಯದಲ್ಲಿ ಹಳೆಯ ಮೈಸೂರಿನ ಜನತೆಗೆ ಎಷ್ಟು ಆದರ, ಅಭಿಮಾನ, ಗೌರವದಿಂದ ನೋಡುತ್ತಾರೆಯೋ ಅಷ್ಟೇ ಆದರ ಅಭಿಮಾನ ಮತ್ತು ಗೌರವದಿಂದಲೂ ನಾನು ನೋಡುತ್ತಿದ್ದೇನೆ. ಅವರ ಬಗ್ಗೆ ನಿಮ್ಮೆಲ್ಲರಿಗಿಂತಲೂ ಹೆಚ್ಚಿನ ಅಭಿಮಾನ ನನಗಿದೆ. ಕರ್ನಾಟಕ ರತ್ನಸಿಂಹಾಸನಾಧೀಶ್ವರರು ಕನ್ನಡರಾಜ್ಯದ ರಾಜ್ಯಪಾಲರು ಎನ್ನುವ ಅಭಿಮಾನವಿದೆ. ನಮ್ಮ ಕಡೆ ಹೇಳುವಂತೆ ಏನು ಸ್ವಾಮಿ ಬಂದುಬಿಟ್ಟಿರಾ! ಬಹಳ ದಿವಸವಾಯಿತು ಮನೆಗೆ ಬಂದು, ಚಹಾಪುಡಿ, ಹಾಲು, ಸಕ್ಕರೆ ಇಲ್ಲ, ಸ್ಟೋವ್‌ನಲ್ಲಿ ಎಣ್ಣೆ ಇಲ್ಲ, ಎಣ್ಣೆ ಇದ್ದರೆ ಕಾಫಿ, ಟೀ ಮಾಡಿಕೊಡುತ್ತಿದ್ದೆ ಎನ್ನುವಂತೆ ರಾಜ್ಯಪಾಲರ ಬಾಯಿಂದ ಹೇಳಿಸಿಬಿಟ್ಟಿದ್ದಾರೆ. ಇದರಿಂದ ನನಗೆ ನಿಜವಾಗಿಯೂ ಬಹಳ ವ್ಯಸನವಾಗುತ್ತದೆ. ಎರಡು ಕೋಟಿ ಕನ್ನಡಿಗರ ಉದ್ಧಾರ ಮಾಡತಕ್ಕ ಎರಡು ಕೋಟಿ ಕನ್ನಡಿಗರ ಸುಖ-ದುಃಖಗಳನ್ನು ತಿಳಿದುಕೊಂಡು ರಾಜ್ಯಭಾರ ಮಾಡತಕ್ಕ ರಾಜ್ಯಪಾಲರ ಬಾಯಿಂದ "ಸುಖೀ ರಾಜ್ಯದ ಸಮೀಪದಲ್ಲಿದ್ದೇವೆ" ಎಂದು ಹೇಳಿಸಿದ್ದಾರೆ. ಇದನ್ನು ನೋಡಿದರೆ ಸುಖೀರಾಜ್ಯದ ಸಮೀಪ ಹೋಗಿದ್ದೇವೆನ್ನುವುದು ಹೇಗಿದೆ ಎಂದರೆ ಹತ್ತು ಜನ ಅಖಂಡ ಮಂತ್ರಿಗಳೂ, ಆರು ಜನ ತುಂಡು ಮಂತ್ರಿಗಳೂ ಇದ್ದದ್ದು ಹೋಗಿ 14 ಜನ ಅಖಂಡ ಮಂತ್ರಿಗಳು ಆರು ಜನ ತುಂಡು ಮಂತ್ರಿಗಳೂ ಆಗಿ ಸುಖೀರಾಜ್ಯದ ಸಮೀಪ ಬಂದಿದ್ದೇವೆ ಎನ್ನುವಂತೆ ಆಗಿದೆ. ಇದನ್ನು ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆಂದು ಅರ್ಥವಾಗುತ್ತದೆ. ನಾನು ಹೋದ ಸಲವೇ ಒಂದು ವಿಷಯವನ್ನು ಹೇಳಬೇಕೆಂದು ವಿಚಾರಮಾಡಿಕೊಂಡೆ. ಈಗ ಉಳಿದಿರುವುದು ಒಂದೇ ವರ್ಷ. ಕಾಂಗ್ರೆಸ್ ಪಕ್ಷದಿಂದ 150 ಜನ ಈ ಸಭೆಯ ಸದಸ್ಯ

ರಿದ್ದೀರಿ. ಹದಿನೈದು ಜನ ಮಂತ್ರಿಗಳು ಮತ್ತು ಹದಿನೈದು ಜನ ಉಪಮಂತ್ರಿಗಳು, ಇಷ್ಟಾದರೆ 30 ಜನ ಆಗುತ್ತೀರಿ. ಐದು ವರ್ಷದ ಅವಧಿಯಲ್ಲಿ ವರ್ಷಕ್ಕೊಮ್ಮೆ ಮಂತ್ರಿಮಂಡಳವನ್ನು ಬದಲು ಮಾಡಿಕೊಂಡರೆ ಎಲ್ಲರೂ ಮಂತ್ರಿಗಳು ಅಥವಾ ಉಪಮಂತ್ರಿಗಳು, ಹಿಂದಿನ ಮಂತ್ರಿಗಳು, ಹಿಂದಿನ ಉಪಮಂತ್ರಿಗಳು, ಹಿಂದಿನ ಮುಖ್ಯ ಮಂತ್ರಿಗಳು ಎಂದು ಹೇಳಿಕೊಳ್ಳಬಹುದು. ನಿಮ್ಮ ನಿಮ್ಮಲ್ಲಿನ ಕಚ್ಚಾಟದಿಂದ ದೇಶಕ್ಕೆ ಏನೂ ಪ್ರಯೋಜನವಾಗುವುದಿಲ್ಲ, ದೇಶ ಅನ್ಯಾಯವಾಗಿ ಹಾಳಾಗುತ್ತದೆ ಎಂದು ಮಾತ್ರ ಹೇಳುತ್ತೇನೆ.

ಹೊಸ ಬಾವಿಗಳಿಗೆ ಸಹಾಯಾರ್ಥವಾಗಿ ಕೊಡತಕ್ಕ ಸಾಲದ ಮೊಬಲಗುಗಳನ್ನು ಮೂರು ಸಾವಿರ ರೂಪಾಯಿಗಳಿಗೂ ಮತ್ತು ಬಾವಿಯೊಂದಕ್ಕೆ ಕೊಡತಕ್ಕ ಸಹಾಯ ದ್ರವ್ಯವನ್ನು ಐದು ನೂರು ರೂಪಾಯಿಗಳಿಗೂ ಹೆಚ್ಚಿಸಿರುವುದು ಅಭಿನಂದನದ ಮಾತು. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಬಿಜಾಪುರ ಜಿಲ್ಲೆ ಬೆಳೆ ಬೆಳೆಯಲಿಕ್ಕೆ ಫಲವತ್ತಾದ ಭೂಮಿಯಿರುವ ಜಿಲ್ಲೆ. ನಮ್ಮ ಜಿಲ್ಲೆಯಿಂದ ಆರಿಸಿ ಬಂದಂಥ ಮಾನ್ಯ ಸಭಾಪತಿಗಳಿಂದ ಶ್ರೀಮಾನ್ ಕಂಠಿಯವರನ್ನು ಮೊದಲಿನಿಂದಲೂ ನಾನ ನೋಡುತ್ತಿದ್ದೇನೆ, ರಾಜ್ಯದ ಮುಖ್ಯ ಮಂತ್ರಿಗಳೂ ನಮ್ಮ ಜಿಲ್ಲೆಯಿಂದ ಬಂದವರು. ಬಿಜಾಪುರ ಜಿಲ್ಲೆಯಲ್ಲಿ ಐದು ನದಿಗಳು ಹರಿಯುತ್ತವೆ. ಪಂಜಾಬ್ ಒಂದನ್ನು ಬಿಟ್ಟರೆ ಇಂಥಾ ಫಲವತ್ತಾದ ಭೂಮಿ ಮತ್ತು ನೀರಿನ ಸೌಕರ್ಯ ಎಲ್ಲೂ ಇಲ್ಲ. ಆದರೂ ಕೂಡ ಮೇಲಿಂದ ಮೇಲೆ ಆ ಜಿಲ್ಲೆಯಲ್ಲಿ ಬರಗಾಲದ ತೊಂದರೆ ಬರುತ್ತದೆ. ಎಷ್ಟೋ ಸಲ ಮುಖ್ಯ ಮಂತ್ರಿಗಳಿಗೆ ಕೇಳಿಕೊಂಡಿದೇನೆ. ನಾಲ್ಕು ವರ್ಷಗಳ ಕಾಲದಿಂದ ಪ್ರತಿಯೊಬ್ಬರ ಮನೆಯಲ್ಲಿಯೂ ಶ್ರೀಮಾನ್ ಜತ್ತಿಯವರ ಹೆಸರು ಇರುವ ಹಾಗೆ ಮಾಡಿರಿ ಎಂದು ಹೇಳುತ್ತಿದ್ದೇನೆ ಇನ್ನು ಹತ್ತು ಹನ್ನೊಂದು ತಿಂಗಳು ಉಳಿದಿದೆ. ಬಿಜಾಪುರ ಜಿಲ್ಲೆಗೆ ಬರಗಾಲದ ಕೆಲಸಗಳಿಗಾಗಿ 50 ಲಕ್ಷ ರೂಪಾಯಿ ಕೊಟ್ಟರು. ಎಷ್ಟೋ ಜನ ವಿರೋಧಪಕ್ಷದಲ್ಲ, ಕಾಂಗ್ರೆಸ್ ಪಕ್ಷದಲ್ಲಿ ಟೀಕೆ ಮಾಡಿದ್ದಾರೆ ಇದು ನಿಜವಾಗಿ ವ್ಯಸನದ ಸಂಗತಿ. ಅಲ್ಲಿ ವಿಜಾಪುರದಲ್ಲಿ ಭೀಕರ ಬರಗಾಲ ವಿದ್ದಾಗ ಮಾತ್ರ ಹಣ ಕೊಟ್ಟಿದ್ದಾರೆಯೇ ವಿನಾ ಬೇರೆ ಕಾಲದಲ್ಲಿ ಇಲ್ಲ.

ಶ್ರೀ ಬಿ. ಡಿ. ಜತ್ತಿ.—ಇರಿಗೇಷನ್ ಬಾವಿಗಳಿಗಾಗಿ ಹಣ ಕೊಟ್ಟಿರುವ ಜಿಲ್ಲಾವಾರು ಪಟ್ಟಿಯನ್ನು ತಾವು ನೋಡಿದ್ದೀರಾ?

ಶ್ರೀ ಬಿ. ಕೆ. ನಾಗನೂರ್.—ಅದನ್ನು ನೋಡಿಯೇ ಹೇಳುತ್ತಿದ್ದೇನೆ. ಯೋಗ್ಯ ಕೆಲಸ ಮಾಡಿದಾಗ ನಿಮಗೆ ವಿರೋಧಪಕ್ಷದವನಾದ ನಾನು ಧನ್ಯವಾದಗಳನ್ನು ಕೊಡುತ್ತೇನೆ. ಯೋಗ್ಯವಲ್ಲದ ಕಾರ್ಯ ಹಾಗೂ ಕಾರ್ಯಕ್ರಮಗಳನ್ನು ಮಾಡಿದರೆ ಅಷ್ಟೇ ಗಂಭೀರವಾದ ಕಟು ಟೀಕೆಯನ್ನು ಮಾಡಿದ್ದೇನೆ. ಮುಂದಾದವರೂ ಮಾಡುತ್ತೇನೆ. ನೀವು ಅಗ್ಗೆ ತಿದ್ದಿ ತಿಳಿದುಕೊಂಡು ವರ್ತಿಸಿ ಕನ್ನಡನಾಡಿನ ಹಿತ ಮಾಡಿರಿ.

Sri ALUR HANUMANTHAPPA (Chairman in the Chair).—

ತಾವು ಎಷ್ಟು ಕೊಟ್ಟರೂ ಅದು ಕ ಡಿ ಮೆ ಯೆ ೇ. ಬಿಜಾಪುರ ಜಿಲ್ಲೆಯಲ್ಲಿ ಒಂದು ವರ್ಷ ಚೆನ್ನಾಗಿ ಬೆಳೆದರೆ ನಮ್ಮ ಮೈಸೂರು ಸ್ಟೇಟಿನ ಬೇರೆ ಭಾಗಗಳ ಎರಡು ವರ್ಷಗಳ ಬೆಳೆಗೆ ಸಮಾನವಾಗಿರುತ್ತದೆ. ಹಾಗೆ ಇಲ್ಲಿ ಸಾವಿರಾರು ಎಕರೆಗಳಷ್ಟು ಧಾನ್ಯ ಬೆಳೆಯಬಹುದು. ನಮ್ಮ ಜಿಲ್ಲೆಯವರಾದವರೇ ಇಂದು ಮುಖ್ಯಮಂತ್ರಿ ಸ್ಥಾನದಲ್ಲಿದ್ದಾರೆ, ಮತ್ತು ಮಾನ್ಯ ಸಭಾಪತಿಗಳಾದ ಶ್ರೀಮಾನ್ ಕಂಠಿಯವರೂ ನಮ್ಮ ಜಿಲ್ಲೆಗೆ ಸೇರಿದವರೇ ಆಗಿದ್ದಾರೆ. ಅವರಿಗೆ ನಮ್ಮ ಜಿಲ್ಲೆಯ ಸ್ಥಿತಿ ಚೆನ್ನಾಗಿ ತಿಳಿದೇ ಇದೆ. ಆದುದರಿಂದ ನಮ್ಮ ಎರಡು ಕೋಟಿ ಕನ್ನಡಿಗರ ಹಿತವನ್ನು ಮಾಡುವ ಕಾರ್ಯ ನಮ್ಮದಾಗಿದೆ. ಇದನ್ನೆಲ್ಲಾ ನೋಡಿ ಮಾಡಬೇಕೆಂದು ನಾನಿಲ್ಲಿ ಹೇಳುತ್ತಿದ್ದೇನೆ.

(Sri ALUR HANUMANTHAPPA)

ಬಾವಿಗಳಿಗಾಗಿ ಹಿಂದೆ 500 ರೂಪಾಯಿಗಳನ್ನು ರೈತರಿಗೆ ಸಬ್‌ಸಿಡಿ ಎಂದು ಕೊಡುತ್ತಿದ್ದರು. ಈಗ ಅದನ್ನು 750 ರೂಪಾಯಿಗಳೆಂದು ಕೊಡುತ್ತಿದ್ದಾರೆ. ಇದನ್ನು ಪಡೆಯಲು ಒಬ್ಬ ರೈತನಾದವನು ತಾಲ್ಲೂಕು ಆಫೀಸಿಗೆ ಹೋಗಿ ಅಲ್ಲಿ ಅಡ್ಡಾಡಿ, ಅಲ್ಲಿನ ಕಾರಕೂನರಿಗೆ, ಇನ್ಸ್‌ಪೆಕ್ಟರರಿಗೆ ಸುಮಾರು 125 ರೂಪಾಯಿಗಳಷ್ಟು ಖರ್ಚಾಗುತ್ತದೆ ಮತ್ತು ಇನ್ನಿತರರಿಗೆ ಬೇರೆ ಮಾಮೂಲು ಕೊಟ್ಟು ಉಳಿಕೆಯಾದ 125 ರೂಪಾಯಿಗಳನ್ನು ತಹಸೀಲುದಾರರಲ್ಲಿ ತರಲು ಹೋಗಿ ಅಲ್ಲಿ ಆ ಬಡರೈತನಾದವನು ಇಷ್ಟು ಅಲ್ಪ ಹಣವಾದ 125 ರೂಪಾಯಿಗಳನ್ನು ತೆಗೆದುಕೊಳ್ಳಲು ಇಷ್ಟವಿಲ್ಲ ಮಾಮಲೇದಾರರಿಗೆ, ತಾಲ್ಲೂಕು ಕಛೇರಿಯ ಇತರರಿಗೆ ಕೊಟ್ಟು ಉಳಿಕೆಯಾದ ಈ 125 ರೂ. ಗಳನ್ನು ತಹಸೀಲುದಾರರಿಗೆ ಕೊಟ್ಟು ಹೋಗುವುದರಿಂದ ರೈತನಿಗೆ ಏನೂ ಸಿಗಲಿಲ್ಲ. ಆತನು ಮನಸ್ಸಿಗೆ ಕಡಕು ಅನಿಸಿಕೊಂಡು ಮನೆಗೆ ಹೋಗುತ್ತೇನೆಂದು ಹೇಳಿ ಹೋಗುತ್ತಾನೆ. ಈ ರೀತಿಯಾದ ಉದಾಹರಣೆಗಳು ಬೇಕಾದಷ್ಟಿದೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಹಿಂದೆ ನಮ್ಮ ಭಾಗದ ಮಡಿಚೆರೆಯಿಂದ ಒಬ್ಬರು ಇನ್‌ಸ್ಪೆಕ್ಟರನ್ನು ತಜ್ಞರನ್ನಾಗಿ ತರಪೇತಿ ಮಾಡಲು ಅಮೆರಿಕಾಕ್ಕೆ ರೊಕ್ಕ ಖರ್ಚುಮಾಡಿ ಕಳುಹಿಸಿದ್ದರು. ಅಲ್ಲಿಂದ ಬಂದು ಇಲ್ಲಿನ ಹೋವನ್ನು ಯಂತ್ರಗಳ ಮುಖೇನ ಅಭಿವೃದ್ಧಿ ಮಾಡಲಾಗಲಿಲ್ಲ. ಅಮೆರಿಕಾಕ್ಕೆ ಹೋಗಿ ಬಂದದ್ದು ಹೆಸರಾಯಿತು. ನಾನು ಹೇಳುವ ಉದ್ದೇಶ ರೈತನಿಗೆ ಇಂದು ಕಷ್ಟನಷ್ಟಗಳೇನಿರುತ್ತದೆ, ಅದನ್ನು ನಿವಾರಣೆ ಮಾಡಲು ಅವಕಾಶ ಕಲ್ಪಿಸಿಕೊಡಿ, ರೈತನಿಗೆ ರಕ್ಷಣೆ ಕೊಡಿ ಎಂದು ಈಗ್ಗೆ 8-10 ವರ್ಷಗಳಿಂದಲೂ ಅವನ ಕಷ್ಟಗಳನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನೀವು ಕೊಡತಕ್ಕ ಹಣ ಬರೀ ಲಂಚದ ರೂಪದಲ್ಲಿ ಹೋಗುವುದು, ಯಾವ ತರದಲ್ಲಿಯೂ ಸರಿಯಾದುದಲ್ಲ. ಇದರ ಬಗೆಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿಗೆ ಲಕ್ಷ್ಯ ತೆಗೆದುಕೊಳ್ಳುತ್ತಾರೆಂದು ನಂಬುತ್ತೇನೆ.

ಇನ್ನು ಮಧ್ಯಪ್ರದೇಶದಿಂದ 13,000 ಟನ್ನುಗಳಷ್ಟು ಅಕ್ಕಿಯನ್ನು ತೆಗೆದುಕೊಂಡು ಬಂದು ಹಂಚುತ್ತೇವೆಂದು ಹೇಳಿದ್ದಾರೆ. ಆದರೆ ಈ ಹಂಚುವಿಕೆಯಾಗದೆ ಎಲ್ಲಾ ಬ್ಲಾಕು ಮಾರ್ಕೆಟ್ಟಿನಲ್ಲಿ ಹೋಗುತ್ತದೆ. ಇಲ್ಲಿರುವ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಳ್ಳಲಿಲ್ಲ. ಇದೇ ರೀತಿ ಸಕ್ಕರೆಯನ್ನು ಹಂಚುತ್ತೇವೆಂದು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಭಾಗದಲ್ಲಿ ಟೂರು ಮಾಡುವಾಗ ಈ ಸಕ್ಕರೆಯ ಹಂಚುವಿಕೆಯ ತೊಂದರೆಯನ್ನು ಅವರು ಹೋಗಿದ್ದ ಕಡೆಗಳಲೆಲ್ಲಾ ಸಾಕಷ್ಟು ಜನ ಬ್ಲಾಕು ಮಾರ್ಕೆಟ್ಟು ಹೇಗಾಗುತ್ತಿದೆ ಎನ್ನುವುದನ್ನು ತಿಳಿಸಿದ್ದಾರೆ. ಯೋಗ್ಯ ದೃಷ್ಟಿಯಿಂದ ಹಂಚಬೇಕೆಂದು ಸಹಕಾರ ಸಂಘದ ಥೇವರ್ಮನ್ನರಿಗೇನೋ ಏರ್ಪಾಡು ಮಾಡಬೇಕೆಂದು ಸೂಚಿಸಿದರು. ಆದರಂತೆ ಹಂಚುವಿಕೆಯಾಗಬೇಕಾಯಿತು.

ರಾಜ್ಯಪಾಲರ ಸಾಕಷ್ಟು ಸೇತುವೆಗಳ ದುರಸ್ತಿ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಮ್ಮ ಕಡೆಯಲ್ಲಿ ಕೆಲವು ಕಡೆ ಸೇತುವೆಗಳಿಲ್ಲದೆ ಹುನಗುಂದ ತಾಲ್ಲೂಕಿನ ಕಮತಗಿ ಹತ್ತಿರ ಇರುವ ಕಮತಗಿ ಬ್ರಿಡ್ಜ್ (ಪೂಲು) ಮಳೆ ಬಂದಾಗ 15 ದಿವಸಗಳವರೆಗೆ ಬಂದಾಗುತ್ತದೆ. ಟಪಾಲು ಸಹ ಬರುವುದಿಲ್ಲ. ಇದು ಪ್ರಸಿದ್ಧ ಸೀರೆಯ ಊರಾದ ಇಲ್ಕಲ್ಲಿಯ ಮತ್ತು ವ್ಯಾಪಾರ ಪಡಮೂಲೆಯ ಬಾಗಲುಕೋಟೆ ನಡುವೆ ಬ್ರಿಡ್ಜ್ ಇದೆ. ಇದನ್ನು ನೀವು ವಿಸ್ತರಿಸಿ ಕಟ್ಟಿಸಲಿಕ್ಕೆ ಬೇಕಾಗಿ ಆಗ್ರಹದಿಂದ ಹಾಗೂ ಒತ್ತಾಯದಿಂದ ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಸಭಾಪತಿಗಳು ಅವರೂರಾದ ಹುನುಗುಂದಕ್ಕೆ ಹೋದಾಗ ಮಳೆ ಬಂದು ಅವರು ವಾಪಸ್ಸು ಬರಲಿಕ್ಕೆ ಮಳೆ ನೀರಿನಿಂದಾಗಿ ಊರಿನಲ್ಲೇ ಉಳಿಯಬೇಕಾಗಿ ಬರುತ್ತದೆ. ಅಲ್ಲಿಯೂ ಕೂಡ ಸೇತುವೆಯಾಗಿಲ್ಲ. ಆದೇ ರೀತಿ ಬಿಜಾಪುರದಲ್ಲಿ ಇನ್ನೂ ಇತರ ಕಡೆಗಳಲ್ಲಿ ಸೇತುವೆಗಳಿಲ್ಲದೆ ಬಹು ತೊಂದರೆಯಾಗಿದೆ. ಇದನ್ನು ಮಾಡುವುದು ಬಹಳ ಮುಖ್ಯವಾಗಿದೆ, ಇಲ್ಲಿಯವರೆಗೂ ಈ ಸೇತುವೆಗಳನ್ನು ಮಾಡದೇ ಇರುವುದು ನೋಡಿ ಬಹಳ ವ್ಯಸನವಾಗಿದೆ.

ಇನ್ನು N. E. S. ಎಂದರೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ವಿಷಯವಾಗಿ ಮಾತನಾಡುವಾಗ ಅವಶ್ಯವಾದ ಅದರ ವಿಚಾರಗಳನ್ನೂ ಅಗ್ಗ ಮಾತನಾಡುತ್ತೇನೆ.

ಪೋಲೀಸಿನವರ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಯೋಗ್ಯರಾಗಿರತಕ್ಕ ಪೋಲೀಸ್ ಅಧಿಕಾರಿಗಳಿಗೆ ಪ್ರಮೋಷನನ್ನು ಕೊಡಿ. ಹಾಗೆ ಮಾಡಿದರೆ ಅವರಿಗೆ ಹೆಚ್ಚಿನ ಗೌರವವನ್ನು ಕೊಟ್ಟಂತಾಗುತ್ತದೆ. ಯೋಗ್ಯ ದೃಷ್ಟಿಯಿಂದ ಹೆಚ್ಚಿನ ಜವಾಬ್ದಾರಿಯಿಂದ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ. ಅವರಿಗೆ ಈಗ ಸರಿಯಾದ ಪ್ರಮೋಷನು ಕೊಟ್ಟಿಲ್ಲ. ಇನ್ನೂ ಬೇಕಾದಷ್ಟು ಉದಾಹರಣೆಗಳಿವೆ. ಕೆಲವನ್ನು ಮಾತ್ರ ತಮ್ಮ ಗಮನಕ್ಕೆ ತಂದಿದ್ದೇನೆ. ಪೋಲೀಸಿನವರ ವಿಷಯದಲ್ಲಿ ಅವರಿಗೆ ಅನ್ಯಾಯವಾಗದಂತೆ ಮಾಡಿದರೆ ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಅವರಿಗೂ ಅನುಕೂಲ ಮಾಡಿಕೊಡಬೇಕು.

ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—The House will now rise and meet again at 8-30 A.M. on Saturday, the 4th March 1961.

The House adjourned at Fifty minutes past Five of the Clock to meet again at Thirty minutes past Eight of the Clock on Saturday, the 4th March 1961.

WD 5797—GPB—(L.A. New Br.)—500—23-12-66